ಗೌರಿ ಲಂಕೇಶರ

ಲಂಕೇಶ್

ಅಕ್ಟೋಬರ್ 11, 2006 ಬೆಲೆ ರೂ. 10/- ◆ ರಂಜನೆ ◆ ಬೋಧನೆ ◆ ಪ್ರಚೋದನೆ



...ಯೋ ಹೋಟೆಲ್‌ನಲ್ಲಿ ಹಂತಕ?

ರೈಗೆ ಪ್ರಾಣ ಭೀತಿ!



ಕಾಡು ನುಂಗಿದ ಕಳ್ಳರು

ಹದಗೆಟ್ಟ ಹಂಪಿ ವಿವಿ

ರಾಯಚೂರು: ನಿಧಿ ಕದ್ದ ಪೊಲೀಸರು

ಚಾಮುಂಡೇಶ್ವರಿ

ಸಿದ್ದು ವಿರುದ್ಧ ಮಾವಿನಹಳ್ಳಿ



ಆರ್ಮಿಟೇಜ್ ಆರ್ಮ್ ಟ್ವಿಸ್ಟಿಂಗ್!



"ಇತ್ತೀಚೆಗೆ ಪ್ರಕಟವಾದ ಪಾಕಿಸ್ತಾನದ ಅಧ್ಯಕ್ಷ ಪರ್ವೇಜ್ ಮುಷರಫ್‌ರವರ ಪುಸ್ತಕ 'ಇನ್ ದಿ ಲೈನ್ ಆಫ್ ಫೈರ್' ಎಂಬ ಪುಸ್ತಕದಲ್ಲಿ ಕೆಲವು ಗಾಬರಿಗೊಳಿಸುವ ಅಂಶಗಳು ದಾಖಲಾಗಿವೆ. 2001ರ ಸೆಪ್ಟೆಂಬರ್ 11 ರಂದು ಅಮೆರಿಕದ ಮೇಲೆ ಅಲ್ ಖೈದ ದಾಳಿ ನಡೆದ ಮೂರನೆ ದಿನ ಅಮೆರಿಕದ ಆಗಿನ ರಕ್ಷಣಾ ಕಾರ್ಯದರ್ಶಿ ರಿಚರ್ಡ್ ಆರ್ಮಿಟೇಜ್ ಪಾಕಿಸ್ತಾನದ ಅಧ್ಯಕ್ಷ ಮುಷರಫ್‌ಗೆ ದೂರವಾಣಿ ಮಾಡಿ " ನೀವು ನಮ್ಮ ಜೊತೆ ಇರಲು ನಿರ್ಧರಿಸಬೇಕು. ಇಲ್ಲವೇ ನಾವು ನಿಮ್ಮ ದೇಶದ ಮೇಲೆ ಬಾಂಬಿನ ಸುರಿಮಳೆ ಸುರಿಸಿ ಶಿಲಾಯುಗಕ್ಕೆ ಮರಳುವಂತೆ ಮಾಡುತ್ತೇವೆ" ಎಂದು ಬೆದರಿಸಿದ್ದರಂತೆ.

ಇದರಲ್ಲಿ ಆಶ್ಚರ್ಯವೇನೂ ಇಲ್ಲ ಬಿಡಿ. ಅಮೆರಿಕ ಇದಕ್ಕಿಂತ ಕೆಟ್ಟದಾದ ಬೆದರಿಕೆ ಮಾತ್ರವಲ್ಲ ದಾಳಿಯನ್ನು ಮಾಡುತ್ತಿರುವುದು ಅಫ್ಘಾನಿಸ್ತಾನದಲ್ಲಿ ಇರಾಕ್‌ನಲ್ಲಿ ಹಾಗೂ ಇರಾನ್ ಮತ್ತು ಸೂಡಾನ್ ಮತ್ತು ಲೆಬನಾನ್ ದೇಶಗಳ ಜೊತೆ ಅದು ಕಟ್ಟಿ ಕೊಳ್ಳುತ್ತಿರುವ ಜಗಳದಲ್ಲಿ ಸ್ಪಷ್ಟವಾಗಿ ವ್ಯಕ್ತವಾಗುತ್ತಿದೆ. ಆದರೆ ಕನಿಷ್ಠ ರಾಜತಾಂತ್ರಿಕ ಕಾರಣಗಳಿಗಾಗಿ ಇಂತಹ ಪ್ರಕರಣಗಳು ಹೊರಬಂದಾಗ ಅಂತಹ ಹೇಳಿಕೆಯನ್ನು ನಿರಾಕರಿಸಿ ತಾವು ಪಾಕಿಸ್ಥಾನದ ಅಥವಾ ಯಾವುದೇ ದೇಶದ ಸಾರ್ವಭೌಮತೆಯನ್ನು ಎತ್ತಿಹಿಡಿಯುತ್ತೇವೆ ಎಂಬ ಹೇಳಿಕೆಗಳು ಬರುವುದು ಒಂದು ರಾಜತಾಂತ್ರಿಕ ಪರಿಪಾಠವೇ ಆಗಿತ್ತು.

ಆದರೆ ಆರ್ಮಿಟೇಜ್ ತನ್ನ ಹೇಳಿಕೆಯನ್ನು ನಿರಾಕರಿಸಿಲ್ಲ. ಬದಲಿಗೆ ಒಪ್ಪಿಕೊಂಡಿದ್ದಾರೆ. ಅದು ಸತ್ಯಸಂಧತೆ ಎಂದು ತಿಳಿದುಕೊಂಡರೆ ತಪ್ಪಾದೀತು. ಅದರರ್ಥ ಇಷ್ಟೆ. ತಮ್ಮ ಮಾತು ಕೇಳದಿದ್ದರೆ ತಾವು ಯಾವುದೇ ನಾಗರಿಕ ರಾಜತಾಂತ್ರಿಕ ಪದ್ಧತಿಗಳಿಗೂ ಬದ್ಧರಾಗಿರುವುದಿಲ್ಲ ಎಂಬುದೇ ಅದರ ತಿರುಳು. ಆ ಅರ್ಥದಲ್ಲಿ ಅದು ಪಾಕಿಸ್ಥಾನಕ್ಕೆ ಮಾತ್ರ ಹಾಕಿದ ಬೆದರಿಕೆಯಲ್ಲ, ಬದಲಿಗೆ ಎಲ್ಲಾ ಬಡ ದೇಶಗಳ ಮೇಲೆ ಹಾಕಿರುವ ಬೆದರಿಕೆ..

ಚಾರ್ವಾಕ - ಶಿವಸುಂದರ್-

ಮನೇಕಾ ಗಾಂಧಿಯ ಪರಿಸರ ವ್ಯಾಧಿ



ಮನೇಕಾ ಗಾಂಧಿ ಎಂಬ ಪರಿಸರವಾದಿಯನ್ನು ಪ್ರಾಯಶಃ ಬಹಳಷ್ಟು ಜನ ಮರೆತೇ ಹೋಗಿರಬೇಕಿತ್ತು. ಮನೇಕಾ ಗಾಂಧಿಗೆ ಒಂದು ರೀತಿಯ ಪ್ರಾಣಿ ಕುರುಡು. ಆಕೆಗೆ ಪ್ರಾಣಿ ಪಕ್ಷಿಗಳು ಕಾಣುತ್ತವೆಯೇ ವಿನಃ ಮನುಷ್ಯರಲ್ಲ. ಹಾಗಂತ ಅದರ ಬಗ್ಗೆಯೂ ಪ್ರಾಮಾಣಿಕ ಕಾಳಜಿ ಇದೆಯೇ ಎಂದರೆ ಅದೂ ಇಲ್ಲ. ಉದಾಹರಣೆಗೆ ಇಂದು ವನ್ಯ ಮೃಗಗಳಿಗೆ ದೊಡ್ಡ ಅಪಾಯವಾಗಿ ಎದುರಾಗಿರುವುದು ಅರಣ್ಯ ಪ್ರದೇಶಗಳಲ್ಲಿ ಜಾರಿಗೆ ಬರುತ್ತಿರುವ ದೊಡ್ಡ ದೊಡ್ಡ ಗಣಿ ಯೋಜನೆಗಳು. ಇದರಿಂದ ನಿರ್ವಸಿತರಾಗುವ ಆದಿವಾಸಿಗಳ ಬದುಕಂತೂ ಮನೇಕಾ ಕಣ್ಣಿಗೆ ಬೀಳುವುದಿಲ್ಲ. ಆದರೆ ಕಾಡು ಪ್ರಾಣಿಗಳಿಗಾದರೂ ಆಕೆ ಇಂತಹ ದೊಡ್ಡ ಗಣಿ ಯೋಜನೆಯ ಬಗ್ಗೆ ಮಾತೆತ್ತಬೇಕಿತ್ತಲ್ಲವೇ? ಬದಲಿಗೆ ಅಂಥ ಕಾಡು ನಾಶಕ್ಕೆ ಕಾರಣವಾಗುವ ಉದ್ಯಮಿಗಳಿಗೆ ಮನೇಕಾ ಅಥಿತಿಯಾಗುತ್ತಾರೆ. ಮೊನ್ನೆ ಬೆಂಗಳೂರಿಗೆ ಮನೇಕಾ ಬಂದಿದ್ದರು. ರಂಕಾ ಸ್ಟೀಲ್ಸ್‌ನ 25 ನೇ ವರ್ಷದ ಸಮಾರಂಭದ ಅಥಿತಿಯಾಗಿ.

ಮನೇಕಾರವರೆ ಇಂತಹಾ ಲಾಭದಾಹಿ ಉದ್ಯಮಿಗಳಿಂದಲೇ ಅಲ್ಲವೆ ನಿಮ್ಮ ಮುದ್ದಿನ ಪ್ರಾಣಿಪಕ್ಷಿಗಳು ತಮ್ಮ ನೆಲೆಯನ್ನು ಕಳೆದುಕೊಳ್ಳುತ್ತಿರುವುದು? ನೀವೇಕೆ ಇಂತಹ ಉದ್ಯಮಿಗಳ ಖಾಯಂ ಅಥಿತಿಯಾಗಿರುತ್ತೀರಿ?

ಒಂದು ಕಡೆ ಪೊಲೀಸರ ಸರ್ವಾಧಿಕಾರವನ್ನು ಹೆಚ್ಚು ಮಾಡುವ ತಿದ್ದುಪಡಿಗಳು-ಇನ್ನೊಂದು ಕಡೆ ಪೊಲೀಸ್ ಸುಧಾರಣೆಗೆ ಆದೇಶಗಳು..!?

ದೇಶದ ಅಲ್ಪಸಂಖ್ಯಾತ ಆಯೋಗದ ವರದಿಯನ್ನು ನೋಡಿ, ಅಥವಾ ಮಹಿಳಾ ಆಯೋಗ ಅಥವಾ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಆಯೋಗಗಳ ವರದಿಯನ್ನು ಗಮನಿಸಿ.. ಎಲ್ಲ ಹೇಳುವುದು ಒಂದೇ ವರದಿ. ಈ ದೇಶದ ದುರ್ಬಲರ ಮೇಲೆ ಪೊಲೀಸರ ಅತ್ಯಾಚಾರ ಅತಿಯಾಗುತ್ತಿದೆ ಎಂದೇ.. ಪರಿಸ್ಥಿತಿ ಹೀಗಿರುವಾಗ ನ್ಯಾಯಮೂರ್ತಿ ಮಳೀಮಠರವರು ಪೊಲೀಸ್ ಕಾಯ್ದೆಗೆ ಕೆಲವು ತಿದ್ದುಪಡಿಗಳನ್ನು ಸೂಚಿಸಿ ಮೊನ್ನೆ ಒಂದು ವರದಿ ಕೊಟ್ಟರು. ಅದನ್ನು ಸರ್ಕಾರ ಚಾಚೂತಪ್ಪದೆ ಜಾರಿಗೆ ತರಲು ಸಿದ್ಧವಾಗಿದೆ.

ಗುಟ್ಟು

ಅದರ ವಿವರಗಳಿಗೆ ಹೋಗಲು ಇಲ್ಲಿ ಸ್ಥಳಾವಕಾಶ ವಿಲ್ಲವಾದರೂ ಸಾರಾಂಶದಲ್ಲಿ ಅದು ಈವರೆಗೆ ಯಾವ್ಯಾವ ವಿಷಯಗಳನ್ನು ಕಾನೂನು ಬಾಹಿರವಾಗಿ ಮಾಡುತ್ತಿತ್ತೋ ಅದಕ್ಕೆಲ್ಲಾ ಸಂಪೂರ್ಣ ಕಾನೂನು ಮಾನ್ಯತೆಯನ್ನು ಒದಗಿಸಿಕೊಟ್ಟಿದೆ. ಅಂದರೆ ಪೊಲೀಸ್ ಸರ್ವಾಧಿಕಾರಕ್ಕೆ ಇನ್ನೂ ಹೆಚ್ಚಿನ ಮಾನ್ಯತೆಯನ್ನು ಒದಗಿಸಿಕೊಟ್ಟಿದೆ. ಉದಾಹರಣೆಗೆ ಆರೋಪಿಯನ್ನು ಬಂಧಿಸುವಾಗ ಪೊಲೀಸರು ಆರೋಪಿಯ ಮಾನವ ಹಕ್ಕುಗಳನ್ನು ಗೌರವಿಸಿ ಕೊಡಲೇಬೇಕಾದ ಅವಕಾಶಗಳನ್ನು ಈ ತಿದ್ದುಪಡಿಗಳು ಇಲ್ಲವಾಗಿಸುತ್ತವೆ. ಹೇಗಿದ್ದರೂ ಯಾರನ್ನು ಬಂಧಿಸಿದರೂ ಪೊಲೀಸರು ನಡೆಸಿಕೊಳ್ಳುತ್ತಿದ್ದ ರೀತಿ ಎಲ್ಲರಿಗೂ ತಿಳಿದೇ ಇದೆ.




ಅದು ಈವರೆಗೆ ಕಾನೂನು ಬಾಹಿರವಾಗಿರುತ್ತಿತ್ತು. ಈಗ ಮಳಿಮಠ್ ವರದಿ ಅದನ್ನು ಕಾನೂನು ಬದ್ಧಗೊಳಿಸಿದೆ. ಅದೇರೀತಿ ಬಂಧಿಸಿದ ನಂತರ ಆರೋಪಿಗೆ ಪೊಲೀಸರು ಕೊಡುತ್ತಿದ್ದ ದೈಹಿಕ ಚಿತ್ರಹಿಂಸೆಯನ್ನು ಹೊರತುಪಡಿಸಿ ಮಿಕ್ಕ ಎಲ್ಲಾ ಚಿತ್ರಹಿಂಸೆಗಳನ್ನು ಮಳಿಮಠ ವರದಿ ಮಾನ್ಯಗೊಳಿಸುತ್ತದೆ. ಇದರ ಬಗ್ಗೆ ದೇಶಾದ್ಯಂತ ಮಾನವ ಹಕ್ಕುಗಳ ಕಾರ್ಯಕರ್ತರು ಈಗಾಗಲೇ ತೀವ್ರ ಆಕ್ಷೇಪ ವ್ಯಕ್ತಪಡಿಸಿ ಆಂದೋಲನವನ್ನು ಪ್ರಾರಂಭಿಸಿದ್ದಾರೆ.

ಪರಿಸ್ಥಿತಿ ಹೀಗಿರುವಾಗ ಮೊನ್ನೆ ಸುಪ್ರೀಂ ಕೋರ್ಟು ಇದ್ದಕ್ಕಿದ್ದ ಹಾಗೆ ಒಂದು ಆದೇಶವನ್ನು ನೀಡಿ ಪೊಲೀಸ್ ವ್ಯವಸ್ಥೆಯನ್ನು ಮಾನವೀಯಗೊಳಿಸಬೇಕು ಮತ್ತು ವೃತ್ತಿಪರಗೊಳಿಸಬೇಕು.. ಆ ನಿಟ್ಟಿನಲ್ಲಿ ಸರ್ಕಾರ ಕ್ರಮಗಳನ್ನು ಕೈಗೊಂಡು 2006ರ ಡಿಸೆಂಬರ್ ಒಳಗೆ ವರದಿ ಸಲ್ಲಿಸತಕ್ಕದ್ದು ಎಂದು ಆದೇಶ ನೀಡಿದೆ. ಒಂದೆಡೆ ಪೊಲೀಸರ ಅಮಾನವೀಯ ಮುಖಕ್ಕೆ ಕಾನೂನುಬದ್ಧ ಮಾನ್ಯತೆಯನ್ನು ನೀಡುತ್ತಲೇ ಮತ್ತೊಂದು ಕಡೆ ಆ 'ಸುಧಾರಣೆಯ' ಆದೇಶ ನೀಡುವ ಗುಟ್ಟೇನು?

ಸುಧಾರಣೆ ಪೊಲೀಸರ ಸೇವಾಕ್ಷಮತೆಯನ್ನು ಹೆಚ್ಚಿಸಲೆಂದೇ ವಿನಃ ಮಾನವೀಯಗೊಳಿಸಲಲ್ಲ..!

ವಾಸ್ತವವಾಗಿ ಜಾಗತೀಕರಣದ ಈ ಕಾಲಘಟ್ಟದಲ್ಲಿ ಸುಧಾರಣೆ ಎಂಬ ಪದವೇ ಅತ್ಯಂತ ನಿಂದನೆಗೊಳಗಾಗಿದೆ. ಮೊದಲು ಸುಧಾರಣೆ ಎಂದರೆ ಹದಗೆಟ್ಟಿದ್ದ ವ್ಯವಸ್ಥೆಯನ್ನು ಮೊದಲಿಗಿಂತ ಸಹನೀಯವಾಗಿ ಮಾಡುವುದು ಎಂದರ್ಥವಿತ್ತು. ಅದೂ ಯಾರಿಗೆ ಸಹನೀಯವಾಗಿ ಎಂದರೆ.. ಸಾಮಾನ್ಯ ಜನರ ಪರವಾಗಿ ಎಂಬ ಉತ್ತರ ದೊರೆಯುತ್ತಿತ್ತು. ಆದರೆ ಜಾಗತೀಕರಣದ ಕಾಲಘಟ್ಟದಲ್ಲಿ ಎಲ್ಲವೂ ಅದಲು ಬದಲು. ಈಗ ಎಲ್ಲವೂ ಸುಧಾರಣೆಗೊಳ್ಳುತ್ತದೆ. ಆದರೆ ಸಾಮಾನ್ಯ ಜನರ ಪರವಾಗಲ್ಲ, ಸರ್ಕಾರ ಉದಾರವಾಗುತ್ತದೆ. ಆದರೆ ಜನರ ಬಗ್ಗೆ ಅಲ್ಲ, ಈ ದೇಶದ ಮತ್ತು ಪರದೇಶದ ಶ್ರೀಮಂತರ ಬಗ್ಗೆ.. ತನ್ನ ಜನರ ಬಗ್ಗೆ ಮೊದಲಿಗಿಂತ ಹೆಚ್ಚು ಕಠಿಣವೇ ಆಗುತ್ತಾ ಹೋದರೂ ಅದನ್ನೇ ಉದಾರೀಕರಣ ಎಂತಲೂ, ಸುಧಾರಣೆ ಎಂತಲೂ ಸಾಮಾನ್ಯ ಜನರನ್ನು ಗೊಂದಲಕ್ಕೆ ದೂಡುವಂತ ವ್ಯಾಖ್ಯಾನಗಳು ಮುಂದುವರೆದೇ ಇರುತ್ತವೆ. ಈ ಪೊಲೀಸ್ ಸುಧಾರಣೆಯಲ್ಲೂ ಅದೇ ನಡೆದಿದೆ ಅಷ್ಟೆ.

ರಟ್ಟು



ಸುಪ್ರೀಂ ಕೋರ್ಟಿನ ಆದೇಶದ ಪ್ರಕಾರ ಪೊಲೀಸ್ ವ್ಯವಸ್ಥೆಯಲ್ಲಿ ಬರಬೇಕಿರುವ ಸುಧಾರಣೆಯೆಂದರೆ ಕೆಳಹಂತದ ಅಧಿಕಾರ ವಲಯದಲ್ಲಿ ರಾಜಕೀಯ ಮಧ್ಯಪ್ರವೇಶ ಕಡಿತಗೊಳ್ಳಬೇಕು. ಅದೇ ರೀತಿ ಕಾನೂನು ಸುವ್ಯವಸ್ಥೆ ಮತ್ತು ತನಿಖಾ ಜವಾಬ್ದಾರಿಗಳೆರಡನ್ನೂ ಹೊತ್ತಿರುವ ಪೊಲೀಸ್ ಇಲಾಖೆಯಿಂದ ತನಿಖೆ ಜವಾಬ್ದಾರಿಯನ್ನು ಬೇರ್ಪಡಿಸಿ ಕೇವಲ ಕಾನೂನು ಸುವ್ಯವಸ್ಥೆಗೆ ಮಾತ್ರ ಸೀಮಿತಗೊಳಿಸುವ ಪ್ರಸ್ತಾಪಗಳಿವೆ.

ಅಂದರೆ ಇವೆಲ್ಲವೂ ಪೊಲೀಸರ ಕಾರ್ಯಕ್ಷಮತೆಯನ್ನು ಹೆಚ್ಚಿಸುವ ಪ್ರಸ್ತಾಪಗಳೇ ವಿನಃ ಪೊಲೀಸರನ್ನು ಮಾನವೀಯಗೊಳಿಸುವ ಪ್ರಸ್ತಾಪಗಳೂ ಅಲ್ಲ, ಬಡ ಜನತೆಗೆ ಅನುಕೂಲಕಾರಿಯಾಗಬಹುದಾದಂತ ಪ್ರಸ್ತಾಪಗಳೂ ಅಲ್ಲ, ಪೊಲೀಸ್ ವ್ಯವಸ್ಥೆಯಲ್ಲಿ ರಾಜಕೀಯ ಮಧ್ಯಪ್ರವೇಶವಾಗುತ್ತಿರುವುದೇ ಈ ದೇಶದ ಎಲ್ಲಾ ಅನಾಹುತಗಳಿಗೆ ಕಾರಣವೆಂದು ಪೊಲೀಸರು ಹೇಳುತ್ತಾರೆ. ಅದನ್ನೇ ಎಲ್ಲ ಕಮರ್ಶಿಯಲ್ ಅಂಬರೀಶ್ ಚಿತ್ರಗಳೂ ಹೇಳುತ್ತವೆ. ಹಾಗೆ ಇದೀಗ ಸುಪ್ರೀಂಕೋರ್ಟ್ ಸಹಾ ಅದೇರೀತಿಯ ಸಲಹೆಗಳನ್ನು ನೀಡಿದೆ. ಆದರೆ ರಾಜಕೀಯ ಮಧ್ಯಪ್ರವೇಶವಿರಬಾರದೆಂದಾಗ ಸ್ವಹಿತಾಸಕ್ತಿಯ ಮಧ್ಯಪ್ರವೇಶ ಎಂಬುದೇ ವಿನಃ ಅದರಲ್ಲಿ ರಾಜಕೀಯವೇ ಇರುವುದಿಲ್ಲವೆಂದರ್ಥವಲ್ಲ.

ಆ ರೀತಿ ನೋಡಿದರೆ ಎಲ್ಲಾ ಅಪರಾಧಗಳೂ-ಅದರಲ್ಲೂ ಕೋಮುವಾದ ಮತ್ತು ಜಾಗತೀಕರಣದ ಭರಾಟೆಯಲ್ಲಿ ಎಸಗಲಾಗುತ್ತಿರುವ ಅಪರಾಧಗಳೆಲ್ಲಾ-ಒಂದರ್ಥದಲ್ಲಿ ರಾಜಕೀಯ ಅಪರಾಧಗಳೇ. ಇಲ್ಲಿ ಸರ್ಕಾರ ಹಾಗೂ ಸಂವಿಧಾನವೇ ತಟಸ್ಥವಾಗಿರಲು ಸಾಧ್ಯವಿಲ್ಲ. ಬದಲಿಗೆ ಕಾನೂನುಗಳೇ ನಿರ್ಣಯಾತ್ಮಕವಾಗಿ ಶ್ರೀಮಂತರ ಪರವಾಗಿ ಆಗುತ್ತಿದೆ. ಹೀಗಾಗಿ ಕಾನೂನು ಬದ್ಧ ಆಡಳಿತವೆಂದರೇನೇ ಜನವಿರೋಧಿ ವ್ಯವಸ್ಥೆಯೆಂದರ್ಥ. ಹೀಗಿರುವಾಗ ಪೊಲೀಸರ ಕಾನೂನು ಬದ್ಧತೆ ಮತ್ತು ಸೇವಾಕ್ಷಮತೆ ಹೆಚ್ಚಿಸುವುದೆಂದರೆ ಅಷ್ಟು ಯಶಸ್ವಿಯಾಗಿ ಜನರನ್ನು ಸುಲಿಯಲು ಅವಕಾಶ ಮಾಡಿಕೊಡುವುದೆಂದರ್ಥ.

ಕಾನೂನು ಮತ್ತು ಸಾಮಾಜಿಕ ನ್ಯಾಯಗಳೆರಡೂ ಪರಸ್ಪರ ವಿರುದ್ಧ ಧ್ರುವಗಳಾಗಿರುವಾಗ ಕಾನೂನುಬದ್ಧ ಅನ್ಯಾಯ, ಕಾನೂನು ಬಾಹಿರ ನ್ಯಾಯಗಳೆರಡರ ನಡುವೆ ಸಂಗ್ರಾಮ ನಡೆಯುತ್ತಿರುವಾಗ ಕಾನೂನು ಪಾಲಕರ ಕಾರ್ಯಕ್ಷಮತೆ ಹೆಚ್ಚುವುದೆಂದರೆ ಜನರ ಪರಿಸ್ಥಿತಿ ಶೋಚನೀಯವಾಗುತ್ತದೆಂದರ್ಥ. ಇದೇ ಅದರ ಗುಟ್ಟು..

No Comments

"ಆದಿವಾಸಿಗಳ ಸ್ಥಳಾಂತರಕ್ಕೆ ಸರ್ಕಾರ ಬದ್ಧ"

-ಚನ್ನಿಗಪ್ಪ



"ಹಿಂದೂತ್ವ ಎಂಬುದರ ವಿವರಣೆ ಕಷ್ಟ"

-ಎಸ್.ಗುರುಮೂರ್ತಿ, ಹಿಂದೂತ್ವವಾದಿ ಅಂಕಣಕಾರ

"ಬೆಳಗಾವಿಯ ಐದು ದಿನದ ಸಮಾವೇಶವನ್ನು ಒಂದೇ ದಿನಕ್ಕೆ ಮೊಟಕುಗೊಳಿಸಿ ಶಾಸಕರನ್ನು ಗೋವಾ ಪ್ರವಾಸಕ್ಕೆ ಕೊಂಡೊಯ್ಯ... ಲಾಗುವುದು"

-ಪತ್ರಿಕಾ ವರ...

"ಅಮೆರಿಕದ ಸಿ.ಐ.ಎ. ಕೆಲವು ಅನುಮಾನಾಸ್ಪದ... ಆಲ್ ಖೈದ ಕಾರ್ಯಕರ್ತರನ್ನು ಹಸ್ತಾಂತರ ಮಾಡಲು... ಲಕ್ಷಾಂತರ ಡಾಲರ್ ನೀಡಿದ್ದು ನಿಜ"

-ಮುಷರಫ್, ಪಾಕಿಸ್ತಾನದ ಅಧ್ಯಕ್ಷ...

"ಶೋಭಾಯಾತ್ರೆ 75ರ ಪೂರ್ವದ ಆಚರಣೆಯ... ಎನ್ನುವುದಾದರೆ ಕಾಂಗ್ರೆಸ್ ಏಕೆ ಅದಕ್ಕೆ ಅವಕಾ... ಕೊಟ್ಟಿತು?"

-ಮೈ.ಚ.ಜಯದೇವ, ಆರೆಸ್ಸೆಸ್ ಮುಖ್ಯ...

ನಂಬಿದ್ರೆ ನಂಬಿ ಬಿಟ್ರೆ ಬಿಡಿ:




"ನಮ್ಮ ಪಕ್ಷ ಅಧಿಕಾರಕ್ಕೆ ಬಂದರೆ ತಿಂಗಳಿಗೆ 1000ರೂ. ನಿರುದ್ಯೋಗ ಭತ್ಯೆ ಕೊಡುತ್ತೇವೆ"

- ಎಸ್. ಬಂಗಾರಪ್ಪ

"ಜಾರ್ಜ್ ಸಾಹೇಬರನ್ನು ನಾನು ಹೃದಯಾಂತರಾಳದಿಂದ ಗೌರವಿಸುತ್ತೇನೆ. ಅವರು ನಮ್ಮ... ಪಕ್ಷ ಬಿಟ್ಟು ಎಸ್.ಪಿ.ಪಕ್ಷ ಸೇರಲಾರರು ಎಂದು... ಭಾವಿಸುತ್ತೇನೆ"

-ನಿತೀಶ್ ಕುಮಾರ್, ಜೆ.ಡಿ.ಯು.ಪಕ್ಷ... ಬಿಹಾರದ ಮುಖ್ಯಮಂತ್ರಿ



"ನಮ್ಮ ಕವಿ ನಿಸಾರ್ ಅಹ್ಮದ್ ಚಳಿಯ ಪಾಚ್ಕೋ ನೆರೂಡ ಇದ್ದಂತೆ"

-ವೀರಪ್ಪ ಮೊಯಿಲಿ

"ನಾನೇನೂ ಸಿಟ್ಟುಗೊಂಡಿರುವುದಿಲ್ಲ, ನನ್ನ ಮುಖವಿರುವುದೇ ಹಾಗೇ.."

-ಗ್ರೆಗ್ ಚಾಪೆಲ್... ಭಾರತ ತಂಡದ ಕ್ರಿಕೆಟ್ ಕೋಚ್...

ವಾರದ ಘೋಷಣೆ:



"ಇನ್ನು ನಮ್ಮ... ತಂಟೆಗೆ ಬಂದರೆ... ನಾವು ಆತ್ಮಹತ್ಯೆಯನ್ನಲ್ಲ... ಹತ್ಯೆ ಮಾಡುತ್ತೇವೆ"

-ವಿದರ್ಭ... ರೈತ...

ಸತ್ಯವಾಕ್ಯ

"ನೀವು ಒಂದು ಸ್ಲಮ್ಮನ್ನು ನಾಶ ಮಾಡಿದರೆ ಪ್ರತಿಯಾಗಿ ಹತ್ತು ಸ್ಲಮ್ಮುಗಳು ಹುಟ್ಟಿಕೊಳ್ಳುತ್ತವೆ... ಏಕೆಂದರೆ ಅದರಿಂದ ನಿರ್ವಸಿತರಾದವರು ವಾಪಸ್... ಅವರ ಹಳ್ಳಿಗಳಿಗೆ ಹೋಗುವುದಿಲ್ಲ"

-ಭರೂ...

ಡಾಕ್ಯುಮೆಂಟರಿ ಚಿತ್ರಗಳ ನಿರ್ಮಾ...



ಹನ್ನೆರಡೆಯ ಶತಮಾನದಲ್ಲೇ 21ನೇ ಶತಮಾನಕ್ಕೂ ಆಧುನಿಕವೆನಿಸಬಹುದಾದ ಕಾಣ್ಕೆಗಳನ್ನು ಲೋಕಕ್ಕೆ ಕೊಟ್ಟ ಬಸವಣ್ಣ ತನ್ನ ಹಾಗು ತನ್ನ ಜೊತೆಗಿನ ಜಂಗಮರ ಮಾತುಗಳಿಂದಲೇ... ಸರ್ವಕಾಲಕ್ಕೂ ಸಲ್ಲುವ ತತ್ವಗಳನ್ನು... ಬಿತ್ತಿದವರು. ಇಂದಿನ ಸಾಮಾಜಿ... ಸಂಕ್ಷೋಭೆಗೆ, ಹಿಪಾಕ್ರಸಿಗೆ ಮದ್ದಾ... ಬಹುದಾದ ಬಸವಣ್ಣನವರ ಕೆಲ ವಚನಗ... ತುಣುಕುಗಳನ್ನು ಈ ಸಲವೂ ಸೂಕ್ತಿಗಳಾ... ಕೊಡುತ್ತಿದ್ದೇವೆ. ಇವು "ಮಾತಿನಂ... ಮನವಿಲ್ಲದ ಜಾತಿಡಂಬರಿಗಲ್ಲ"......

-ಮೊ...


ಸಾಧಿಸಲಾಗದವರ ಸಮಯಸಾಧಕತನ

ಕಂಡಹಾಗೆ



ಬೆಳಗಾವಿಯಲ್ಲಿ ಅಧಿವೇಶನ ಎಂಬ ಪ್ರಹಸನ ಇದೀಗ ಮುಗಿದಿದೆ. ಇದರಿಂದ ಬೆಳಗಾವಿಗೆ ಏನು ಸಿಕ್ಕಿತು, ಉತ್ತರ ಕರ್ನಾಟಕಕ್ಕೆ ಏನು ಪ್ರಯೋಜನ ವಾಯಿತು, ಅಲ್ಲಿನ ಜನರ ಸಮಸ್ಯೆಗಳ ಬಗ್ಗೆ ಸಮ್ಮಿಶ್ರ ಸರ್ಕಾರ ಎಷ್ಟು ಕಾಳಜಿ ವಹಿಸಿ ಪರಿಹಾರಗಳನ್ನು ಕಂಡುಕೊಂಡಿತು.... ಇಂತಹ ಪ್ರಶ್ನೆಗಳಿಗೆ ಉತ್ತರಗಳನ್ನು ಹುಡುಕುತ್ತಾ ಹೋದರೆ ಕೊನೆಗೂ ಗೊತ್ತಾಗುವುದು ಇದು: ಒಂದು ಬೋಗಸ್ ಸರ್ಕಾರದಿಂದ ಒಂದು ಬೋಗಸ್ ಅಧಿವೇಶನ ನಡೆಯಿತು ಎಂಬುದಷ್ಟೇ.

ಉದಾಹರಣೆಗೆ ನೋಡಿ: ಈ ಅಧಿವೇಶನಕ್ಕೆ ಖರ್ಚಾಗಿದ್ದು ಹತ್ತು ಕೋಟಿ ರೂಪಾಯಿಗಳು. ಇದಲ್ಲದೆ ನೂರಾರು ಶಾಸಕರ, ಸಾವಿರಾರು ಅಧಿಕಾರಿಗಳ ವಾಸ್ತವ್ಯ ಊಟ, ಪ್ರಯಾಣ, ಟಿಎ-ಡಿಎ ಇತ್ಯಾದಿಗಳನ್ನು



ಸೇರಿಸಿಕೊಂಡರೆ ಇನ್ನಷ್ಟು ಕೋಟಿಗಳು ಖರ್ಚಾಗಿರುವುದು ಗ್ಯಾರಂಟಿ. ಈ ಕೋಟಿ ಕೋಟಿ ರೂಪಾಯಿಗಳು ಬಂದದ್ದು ಕುಮಾರಸ್ವಾಮಿ-ಯಡಿಯೂರಪ್ಪ ಮತ್ತವರ ಪಟಾಲಂನ ಸ್ವಂತ ತಿಜೋರಿಯಿಂದಲ್ಲ, ಬದಲಾಗಿ, ಈ ರಾಜ್ಯದ ರೈತರು, ಕಾರ್ಮಿಕರು, ಜನಸಾಮಾನ್ಯರು, ಬೆವರು ಸುರಿಸಿ ದುಡಿದ ಹಣದಿಂದ ಕಟ್ಟಿದ ತೆರಿಗೆಗಳಿಂದ. ಇದರಿಂದ ರಾಜ್ಯದ ಜನರಿಗೆ, ಅದರಲ್ಲೂ ಬೆಳಗಾವಿ ಮತ್ತು ಉತ್ತರ ಕರ್ನಾಟಕದ ಇತರೆ ಪ್ರದೇಶಗಳಲ್ಲಿನ ಜನರಿಗೆ ಆದ ಲಾಭ ಮಾತ್ರ ಶೂನ್ಯ!

ಹೋಗಲಿ, ಬೆಳಗಾವಿಗೆ ವೀರಾವೇಷದಿಂದ ಹೊರಟ ಸರ್ಕಾರ ಅಲ್ಲಿನ ಒಡೆದ ಮನಸ್ಸುಗಳನ್ನು ಬೆಸೆಯುವ ಕೆಲಸವನ್ನಾದರೂ ಮಾಡಿತ? ನೊಂದ ಜೀವಗಳಿಗೆ ನೀರೆರೆಯುವ ಪ್ರಯತ್ನವನ್ನಾದರೂ ಮಾಡಿತ? ಆ ನಿಟ್ಟಿನಲ್ಲೂ ಈ ಅಧಿವೇಶನ ಸಾಧಿಸಿದ್ದು ಶೂನ್ಯ!

ಈ ಸರ್ಕಾರಕ್ಕೆ ಜನರ ಬಗ್ಗೆ ಎಷ್ಟು ಕಾಳಜಿ ಎಂದರೆ, ಐದು ದಿನದ ಅಧಿವೇಶನದಲ್ಲಿ ಭಾಗವಹಿಸಿದ್ದ ಶಾಸಕರ ಸಂಖ್ಯೆ ಅತಿ ಕಡಿಮೆ. ಮೊದಲನೆ ದಿನ ಹಾಜರಾದ ಜನ ಮರುದಿನದಿಂದಲೇ "ಬೋರ್, ಬೋರ್" ಎನ್ನುತ್ತಾ ಸುತ್ತಮುತ್ತಲಿನ ಪ್ರವಾಸಿ ಕ್ಷೇತ್ರಗಳಿಗೆ ಭೇಟಿ ನೀಡಲು ಹೊರಟರು. ಇದಕ್ಕೆ ತಕ್ಕಂತೆ ಸರ್ಕಾರ ಕೂಡ ಐದು ದಿನಗಳ ಅಧಿವೇಶನವನ್ನು ನಾಲ್ಕು ದಿನಗಳಿಗೆ ಇಳಿಸಿ, ಎಲ್ಲರೂ ಗೋವಾದಲ್ಲಿ ಒಂದು ದಿನ ಎಂಜಾಯ್ ಮಾಡಲು ಹೊರಟೇಬಿಟ್ಟರು.

ಈ ಅಧಿವೇಶನ ಹೇಗಿತ್ತೆಂದರೆ ಬೆಂದ ಮನೆಯಲ್ಲಿ ಜಂತಿ ಹಿರಿಯುವುದಕ್ಕೆ ಸಮಾನವಾಗಿತ್ತು. ಗಡಿನಾಡಿನ ಜನಗಳ ಸಮಸ್ಯೆಗಳ ಬಗ್ಗೆಯಾಗಲಿ, ಹಿಂದುಳಿದಿರುವ ಆ ಪ್ರದೇಶಗಳ ಅಭಿವೃದ್ಧಿ ಬಗ್ಗೆಯಾಗಲಿ, ಸರ್ಕಾರದಿಂದ ಯಾವ ತಯಾರಿಯೂ ನಡೆದಿರಲಿಲ್ಲ ಮಾತ್ರವಲ್ಲ, ಅವುಗಳ ಬಗ್ಗೆ ಚರ್ಚೆ, ನಿರ್ಣಯಗಳೂ ನಡೆಯಲಿಲ್ಲ. ಈ ಮಸಿಯನ್ನು ನಿವಾರಿಸಿಕೊಳ್ಳಲು ಕೊನೆ ದಿನ "ನಂಜುಂಡಪ್ಪ ವರದಿ ಜಾರಿಗೆ" ಎಂದು ಸರ್ಕಾರ ಘೋಷಿಸಿತು. ವಾಸ್ತವವಾಗಿ ನಂಜುಂಡಪ್ಪನವರ ವರದಿ ಕೇವಲ ಬೆಳಗಾವಿ ಜಿಲ್ಲೆಯ ತತ್‌ಕ್ಷಣದ ಅಭಿವೃದ್ಧಿಗೆ 1500 ಕೋಟಿ ಸಂಪನ್ಮೂಲ ಆಗ್ರಹಿಸುತ್ತದೆ. ಆದರೆ ಈ ಸಂಪನ್ಮೂಲದ ಕೊರತೆಯನ್ನು ಹೇಗೆ ನಿರ್ವಹಿಸಬೇಕೆಂಬುದರ ಬಗ್ಗೆ ಚಿಂತಿಸುವುದಿರಲಿ, ಈ ಸರ್ಕಾರ ಆ ಸಮಸ್ಯೆಯ ಬಗ್ಗೆ ಪ್ರಸ್ತಾಪಿಸಲೂ ಇಲ್ಲ.

ತಾವು ಕಳೆದ ಮಾರ್ಚ್ ತಿಂಗಳಲ್ಲಿ ಮಂಡಿಸಿದ ಬಜೆಟ್‌ನಲ್ಲೇ ಸರ್ಕಾರದ ಮುಂದಿರುವ ಯೋಜನೆಗಳಿಗೆ ಹಣವಿಲ್ಲ ಎಂದಿದ್ದ ಉಪಮುಖ್ಯಮಂತ್ರಿ ಯಡಿಯೂರಪ್ಪನವರು ಈಗ ಬೆಳಗಾವಿಗೆಂದು ಘೋಷಿಸಿರುವ ಒಂದು ಸಾವಿರ ಕೋಟಿ ರೂಪಾಯಿಗಳನ್ನು ಎಲ್ಲಿಂದ ಹೊಂಚುತ್ತಾರೆ? ಇಲ್ಲಿಯವರೆಗೂ ಈ ಸರ್ಕಾರ ತನ್ನ ಸಾಧನೆಗಳನ್ನು ಸಾರುತ್ತಾ ಬಂದಿರುವಂತೆ, ಬೆಳಗಾವಿಗೆ 'ನೀಡಲಿರುವ' ಈ ಹಣವೂ ಕೇವಲ ಪತ್ರಿಕಾ ವರದಿಗಳಿಗೆ, ಸರ್ಕಾರಿ ಜಾಹೀರಾತುಗಳಿಗೆ ಸೀಮಿತವಾಗುವುದರಲ್ಲಿ ಅನುಮಾನಗಳೇ ಇಲ್ಲ.

ಇವತ್ತು ಬೆಳಗಾವಿ, ಬಾಗಲಕೋಟೆ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ನೇಕಾರರು ದಿನನಿತ್ಯ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ. ಆತ್ಮಹತ್ಯೆಯ ಅಂಚಿನಲ್ಲಿರುವವರು ಅಲ್ಪ ಕೂಲಿ, ಕಡಿಮೆ ದರದ ವಿದ್ಯುತ್, ರೇಷನ್ ಕಾರ್ಡ್ ಇಂತಹ ಕನಿಷ್ಠ ಸೌಲಭ್ಯಗಳನ್ನು ಬೇಡಿ ಸಾವಿಗೆ ತಮ್ಮನ್ನು ದೂಡಬೇಡಿ ಎಂದು ಕೇಳಿಕೊಳ್ಳುತ್ತಿದ್ದಾರೆ. ಇದು ಇಡೀ ರಾಜ್ಯಕ್ಕೆ ಗೊತ್ತಿರುವ ವಿಷಯ. ಆದರೆ, ಈ ಸಮಸ್ಯೆಯ ಬಗ್ಗೆ ನಮ್ಮ ಶಾಸಕರು ಒಂದು ದಿನವಿರಲಿ, ಅರ್ಧ ಗಂಟೆಯೂ ಚರ್ಚೆ ಮಾಡಲಿಲ್ಲ. ಅಂದರೆ ಇವರ ವಿಶೇಷ ಅಧಿವೇಶನ ಯಾವ ಪುರುಷಾರ್ಥಕ್ಕೆ?

ಪ್ರಸ್ತುತ ಸರ್ಕಾರದ ಮೂಲಭೂತ ಸಮಸ್ಯೆ ಯಾವುದೆಂದರೆ ಜನಪರ ಚಿಂತನೆ ಮತ್ತು ಕಾಳಜಿ ಸಂಪೂರ್ಣವಾಗಿ ಇಲ್ಲದಿರುವುದು. ಆಡಳಿತ ನಡೆಸುವುದು ಹೇಗೆ, ಹಣ ಸದುಪಯೋಗವಾಗುವಂತೆ ನೋಡಿಕೊಳ್ಳುವುದು ಹೇಗೆ, ಕಾರ್ಯಕ್ರಮಗಳನ್ನು ಅನುಷ್ಠಾನಕ್ಕೆ ತರುವುದು ಹೇಗೆ ಎಂಬುದರ ಬಗ್ಗೆ apprentice ಕುಮಾರಸ್ವಾಮಿಗಾಗಲೀ, ಚಿಡ್ಡಿ ಚತುರ ಯಡಿಯೂರಪ್ಪನವರಿಗಾಗಲೀ ಗೊತ್ತೇ ಇಲ್ಲ. ಅದಕ್ಕೆ ಅಧಿಕಾರ ವಿಕೇಂದ್ರೀಕರಣದ ಆಡಳಿತ ಇನ್ನಷ್ಟು ಸುಸೂತ್ರವಾಗಿ ನಡೆಸುವ ಬದಲಾಗಿ, ದಿಕ್ಕುದೆಸೆ ಇಲ್ಲದವರಂತೆ ಸ್ವತಃ ಮುಖ್ಯಮಂತ್ರಿಯೇ ರಾಜ್ಯದ ಯಾವ್ಯಾವುದೋ ಭಾಗಗಳಿಗೆ ಹೋಗಿ 'ಜನತಾ ದರ್ಶನ' ಎಂಬ ಢೋಂಗಿ ಕಾರ್ಯಕ್ರಮ ನಿರ್ವಹಿಸುತ್ತಾರೆ. ಹಾಗೆಯೇ ಯಡಿಯೂರಪ್ಪನವರು ಸಂಘ ಪರಿವಾರ ಪ್ರೋಷಿತ 'ಶೋಭಾಯಾತ್ರೆ', 'ದತ್ತಮಾಲೆ', 'ದತ್ತ ಜಯಂತಿ'ಯಂತಹ ಕಿಡಿಗೇಡಿ ಕಾರ್ಯಕ್ರಮಗಳೇ ಜನರ ಅಭಿವೃದ್ಧಿ ಎಂದು ನಂಬಿದ್ದಾರೆ.

ಕ್ರಿಯಾಶೀಲ ಚಿಂತನೆ, ಅಭಿವೃದ್ಧಿ ಬಗೆಗೆ ಸ್ಪಷ್ಟ ಆಲೋಚನೆ ಇಲ್ಲದಿರುವ ಈ ಕೋ-ಜಾ ಸರ್ಕಾರಕ್ಕೆ ಹೇಗಾದರೂ ಮಾಡಿ ಒಂದು 'ಸಾಧನೆ' ಎಂಬುದನ್ನು ಜನರಿಗೆ ತೋರಿಸಬೇಕಿದೆ. ಆದರೆ ಭ್ರಷ್ಟಾಚಾರ, ಆಡಳಿತದ ದುರುಪಯೋಗದಲ್ಲಿ ಮುಳುಗಿರುವ ಸರ್ಕಾರಕ್ಕೆ ಮಾನ ಉಳಿಸಬಲ್ಲಂತಹ ಒಂದು ಹುಲ್ಲುಕಡ್ಡಿಯಂತಹ ಸಾಧನೆಯೂ ಎಟುಕದಂತಾಗಿದೆ. ಅದಕ್ಕೆ ಕಂಡಕಂಡಲ್ಲಿ ಹೋಗಿ ಮಲಗುವುದು, ಸಮಸ್ಯೆ ಇದ್ದಲ್ಲಿ ಕೋಟ್ಯಂತರ ರೂಪಾಯಿ ಖರ್ಚು ಮಾಡಿ ಅಧಿವೇಶನ ನಡೆಸುವುದು, ಕೈಯಲ್ಲಿ ಕಾಸಿಲ್ಲದಿದ್ದರೂ ಸಾವಿರ ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡುವುದಾಗಿ ಘೋಷಿಸುವುದು... ಇಂತಹ ಸಾಂಕೇತಿಕ ನಾಟಕಗಳು ನಡೆಯುತ್ತಿವೆ. ಜನರ ದುಡ್ಡು, ಕೋ-ಜಾಗಳ ಜಾತ್ರೆ.... ಇನ್ನೆಷ್ಟು ದಿನ ನಡೆದೀತು?

-ಗೌರಿ ಲಂಕೇಶ್

ದಸರಾ ಬಿರುಸು ಬಾಣ-ಸರ್ಕಾರಕ್ಕೇ ತಿರುಗುಬಾಣ



ದಸರಾ ಹಬ್ಬ ಆಚರಿಸುವಾಗ ಸದರವಾಗಿ ನಡೆದುಕೊಂಡ ಹಾಲಿ ಕೋ-ಜಾ ಸರ್ಕಾರ ಕ್ರಿಮಿನಲ್ ಕೇಸೊಂದನ್ನು ಮೈಮೇಲೆ ಎಳೆದುಕೊಂಡಿದೆ.

ಇಂತಾದ್ದೊಂದು ಕಾನೂನಿನ ಚಾಟಿ ಹಿಡಿದು ನಿಂತಿರುವವರು ಮೈಸೂರಿನ ಖ್ಯಾತ ಲಾಯರ್ ವೇಣುಗೋಪಾಲ್. ಹಾಗೇನೇ ಈ ಕೇಸು ಬೀಳುತ್ತಿರುವುದು ಜಿಲ್ಲಾ ಉಸ್ತುವಾರಿ ಮಂತ್ರಿ ಡಿ.ಟಿ. ಜಯಕುಮಾರ್, ಜಿಲ್ಲಾಧಿಕಾರಿ ಸೆಲ್ವಕುಮಾರ್ ಹಾಗೂ ಅರಣ್ಯ ಸಂರಕ್ಷಣಾಧಿಕಾರಿ ಗಾ.ನಂ. ಶ್ರೀಕಂಠಯ್ಯನವರ ಮೇಲೆ. ನಡೆದಿರುವುದೇನೆಂದರೆ ದಸರಾ ಹಬ್ಬ ಉದ್ಘಾಟನೆಯಾದ ಸೆಪ್ಟೆಂಬರ್ 23 ರ ರಾತ್ರಿ 9 ಗಂಟೆಗೆ ಚಾಮುಂಡಿ ಬೆಟ್ಟದ ಮೇಲೆ ಸುಮಾರು 6 ಲಕ್ಷ ರೂಪಾಯಿಗಳಷ್ಟು ಪಟಾಕಿ, ಸಿಡಿಮದ್ದು, ಬಾಣ, ಬಿರುಸುಗಳನ್ನು ಸಿಡಿಸಲಾಗಿತ್ತು, ಆದರೆ ಚಾಮುಂಡಿಬೆಟ್ಟ ಒಂದು ರಕ್ಷಿತ ಅರಣ್ಯ ಪ್ರದೇಶ. ಅಲ್ಲಿ ಇಂತಹ ಚೇಷ್ಟೆ, ತಲಹರಟೆಗಳಿಗೆಲ್ಲಾ ನಿಷೇಧವಿದೆ. ಆದರು ಇದಕ್ಕೆ ದುಡ್ಡು ರಿಲೀಸ್ ಮಾಡಿದ್ದು ಜಿಲ್ಲಾಧಿಕಾರಿ ಸೆಲ್ವಕುಮಾರ್. ಅದೇ ರೀತಿ 'ಈ ಪಟಾಕಿ-ಗಿಟಾಕಿ ಬೇಡಾ ಸಾರ್' ಎಂದ ಡಿಸಿಎಫ್ ಶ್ರೀಕಂಠಯ್ಯನವರನ್ನೇ 'ನಾನ್ ಮಿನಿಸ್ಟ್ರು, ನಾನೇಳಿದಂಗೆ ನೀವ್ ಕೇಳಬೇಕು' ಎಂದು ಗದರಿಸಿದ್ದ ಸಚಿವ ಡಿ.ಟಿ. ಜಯಕುಮಾರ್ ಈ ಪಟಾಕಿ ಸಿಡಿತ ಹಾಗೂ ಅರಣ್ಯ ಕಾಯ್ದೆ ಉಲ್ಲಂಘನೆಗೆ ಹೊಣೆಯಾಗಿದ್ದಾರೆ.



ಚಾಮುಂಡಿ ಬೆಟ್ಟದ ಪ್ರದೇಶವನ್ನು 1996 ರಲ್ಲೇ ರಕ್ಷಿತ ಅರಣ್ಯ ಪ್ರದೇಶವೆಂದು ಸರ್ಕಾರ ಘೋಷಿಸಿದೆ. ಈ ಪ್ರದೇಶದಲ್ಲಿ ಅತಿಕ್ರಮ ಪ್ರವೇಶ, ಮರ ಕಡಿಯುವುದು, ಪ್ರಾಣಿ-ಪಕ್ಷಿಗಳ ಶಿಕಾರಿ, ಬೆಂಕಿ ಹಚ್ಚುವುದು ಎಲ್ಲವೂ ಶಿಕ್ಷಾರ್ಹ ಅಪರಾಧಗಳೇ. ಅಷ್ಟೇ ಅಲ್ಲ ಬೀಡಿ ಸಿಗರೇಟ್ ಹಚ್ಚಿದರೂ ಹಿಡಿದು ಶಿಕ್ಷೆ ವಿಧಿಸಬಹುದಾದಷ್ಟು ಕಠಿಣವಾಗಿವೆ ಈ ಕಾನೂನುಗಳು.

ಆದರೇನು ಅವಿವೇಕಿ ಮಂತ್ರಿ ಡಿ.ಟಿ.ಜಯಕುಮಾರ್‌ಗೆ ಈ ಕಾಯ್ದೆಗಳ ತಲೆಬುಡ ಗೊತ್ತಿಲ್ಲ. ಗೊತ್ತಿದ್ದ ಡಿಸಿಎಫ್, ಡಿಸಿಗಳಿಗೆ ಮಂತ್ರಿಗೆ ಬುದ್ಧಿ ಹೇಳುವಷ್ಟು ಧೈರ್ಯವಿಲ್ಲ. ಹೀಗಾಗಿ ಸೆಪ್ಟೆಂಬರ್ 23 ರ ರಾತ್ರಿ ಭಾರಿ ಸ್ಫೋಟಕಗಳ ಸಿಡಿತದ ನಡುವೆ ದಸರಾ ಶುರುವಾಗಿತ್ತು. ಇದೆಲ್ಲಾ ಟಿವಿ-ಪತ್ರಿಕೆಗಳಲ್ಲೂ ವ್ಯಾಪಕವಾಗಿ ವರದಿಯಾಯಿತು.

ಆಗ ಸಿಟ್ಟಿಗೆದ್ದವರೆ ವಕೀಲ ವೇಣುಗೋಪಾಲ್. ಈ ಮಾನ್ಸೂನ್ ಅವಧಿಯಲ್ಲಿ ಬೆಟ್ಟದಲ್ಲಿ ಸಾವಿರಾರು ಪಕ್ಷಿಗಳು ಮೊಟ್ಟೆ ಇಟ್ಟು ಮರಿ ಮಾಡುತ್ತವೆ. ಆದರೆ ಭಾರಿ ಪಟಾಕಿ ಸ್ಫೋಟಗಳ ಸದ್ದಿನಿಂದ ಮೊಟ್ಟೆಗಳೆಲ್ಲಾ ಬಿರುಕುಬಿಟ್ಟು ನಾಶವಾಗುತ್ತವೆ. ಪಟಾಕಿ ಕಸವನ್ನೆಲ್ಲಾ ಬೆಟ್ಟದಲ್ಲೇ ಎಸೆದು ಬಂದಿದ್ದಾರೆ ಅಧಿಕಾರಿಗಳು ಎಂದು ಜಗಳಕ್ಕಿಳಿದಿದ್ದಾರೆ ವೇಣುಗೋಪಾಲ್. ಈಗ ಡಿಸಿಎಫ್ ಒಂದೋ ಸಚಿವ ಡಿಟಿಜೆ ಹಾಗೂ ಜಿಲ್ಲಾಧಿಕಾರಿ ವಿರುದ್ಧ ಕ್ರಿಮಿನಲ್ ಕೇಸ್ ಹಾಕಬೇಕು, ಇಲ್ಲದಿದ್ದರೆ ವಕೀಲ ವೇಣುಗೋಪಾಲ್ ತಾವೇ ಈ ಮೂವರ ವಿರುದ್ಧ ಕ್ರಿಮಿನಲ್ ಕೇಸ್ ಹಾಕಲು ರೆಡಿಯಾಗಿದ್ದಾರೆ.

ಮೈಸೂರು ಅರಣ್ಯ ಇಲಾಖೆ ಅಧಿಕಾರಿಗಳಿಗೆ ಇದೊಂದು ಅನಿರೀಕ್ಷಿತ ಸಂದರ್ಭ. ಅದೇ ಬೆಟ್ಟದಲ್ಲಿ ಮೊನ್ನೆ ತಾನೆ ರೈತನೊಬ್ಬ ನಿಷೇಧಿತ ಪ್ರದೇಶಕ್ಕೆ ಬಂದು ಹುಲ್ಲು ಕುಯ್ಯುತ್ತಿದ್ದ ಎಂದು ಎಳೆದೊಯ್ದು ಎರಡು ದಿನ ಬಂಧಿಸಿಟ್ಟುಕೊಂಡಿದ್ದರು. ಕೆಲ ತಿಂಗಳ ಹಿಂದೆ ಡಿಸಿಎಫ್ ಅಣ್ಣಯ್ಯ ಮೂವರು ಪತ್ರಕರ್ತರು ನಿರ್ಬಂಧಿತ ಅರಣ್ಯ ಪ್ರದೇಶದಲ್ಲಿ ಫೋಟೋ ತೆಗೆದರೆಂದು ಅರೆಸ್ಟ್‌ಮಾಡಿ ಕೇಸಾಕಿದ್ದರು. ಕ್ಯಾಮರಾದ ಫ್ಲಾಷ್ ಬೆಳಕಿನಿಂದ ಕಾಡಿನ ಪ್ರಾಣಿಗಳಿಗೆ ತೊಂದರೆಯಾಗುತ್ತದೆ ಎಂಬ ಆರೋಪದ ಮೇರೆಗೆ....!

ಇಷ್ಟೆಲ್ಲಾ ಕಾನೂನನ್ನು ಅರೆದು ಕುಡಿದಿರುವ ಮೈಸೂರು ಡಿಸಿಎಫ್ ಈಗೇನು ಹೇಳುತ್ತಾರೆ?

ಸಚಿವ ಹಾಗೂ ಡಿಸಿ ವಿರುದ್ಧವೇ ಕೇಸ್ ಹಾಕಬೇಕು ತಾನೆ?

ಖರಾಬ್ ಕುಡುಕನೇ ಪ್ರಸಿದ್ಧ ಸಾಹಿತಿ!

ಕ್ಷಮಿಸಿ... ಇದು ತಮಾಷೆಗಾಗಿ

ಖ್ಯಾತ ಸಾಹಿತಿಗಳೊಬ್ಬರು ಅಂದು ಗುಂಡು ಪಾರ್ಟಿಯೊಂದಕ್ಕೆ ಹೋಗಿದ್ದರು. ನಾಟಕ-ಚಲನಚಿತ್ರ ಮತ್ತು ಜನಪದ ಕ್ಷೇತ್ರದಲ್ಲೂ ಹೆಸರು ಮಾಡಿದ್ದ ಸಾಹಿತಿಗಳು ಬೆಂಗಳೂರು ವಿಶ್ವವಿದ್ಯಾನಿಲಯದ ಪ್ರಾಧ್ಯಾಪಕರೂ ಆಗಿದ್ದರು. ಸಾಮಾನ್ಯವಾಗಿ ಗುಂಡು ಪಾರ್ಟಿಯ ನಂತರ ಅವರಿಗೆ ತಮ್ಮ ಮನೆ-ಮಠ ಇತರೆ ವಿವರಗಳು ಮರೆಯುವುದು ಸಂಪ್ರದಾಯವಾದುದರಿಂದ ಮುಂಜಾಗ್ರತ ಕ್ರಮವಾಗಿ ತಮ್ಮೊಂದಿಗೆ ಇಬ್ಬರು ಮಧ್ಯಪಾನ ಸಂಯಮಿ ವಿದ್ಯಾರ್ಥಿಗಳನ್ನು ಕಡ್ಡಾಯವಾಗಿ ಮತ್ತು ಒತ್ತಾಯವಾಗಿ ಪಾರ್ಟಿಗಳಿಗೆ ಕರೆದೊಯ್ಯುತ್ತಿದ್ದರು. ಪಾರ್ಟಿಯ ನಂತರ ಸಾಹಿತಿಗಳನ್ನು ವಿಶ್ವವಿದ್ಯಾಲಯದ ಅವರ ಮನೆಗೆ ಸೇರಿಸುವುದು ಆ ಇಬ್ಬರು ವಿದ್ಯಾರ್ಥಿಗಳ ಜವಾಬ್ದಾರಿ.

ಅಂದು ಸಹ ಪಾರ್ಟಿ ಮುಗಿಯಿತು. ಸಖತ್ ಟೈಟಾಗಿದ್ದ ಸಾಹಿತಿಗಳನ್ನು ಆಟೋ ರಿಕ್ಷಾಗೆ ಎತ್ತಾಕಿಕೊಂಡ ವಿದ್ಯಾರ್ಥಿಗಳು ಸರಿ ರಾತ್ರಿಯ ಹೊತ್ತಿಗೆ ಜ್ಞಾನಭಾರತಿಯ ಕ್ವಾರ್ಟರ್ಸ್‌ಗೆ ತಲುಪಿದರು. ಬಹಳ ಪ್ರಯಾಸದಿಂದ ಸಾಹಿತಿಗಳನ್ನು ಅವರ ಮನೆ ಒಳಗೆ ಸೇರಿಸಲಾಯ್ತು (ಅವರ ಶ್ರೀಮತಿಯವರ ಸಹಸ್ರ ನಾಮದ ನಡುವೆ). ಈ ಮಧ್ಯೆ ರಿಕ್ಷಾ ಚಾಲಕ ಮನೆಯ ಮುಂದೆ ಸಾಹಿತಿಗಳ ನಾಮದೇಯವಿದ್ದ ಬೋರ್ಡನ್ನು ಓದಿದ. ಆತ ಸಹ ವಿದ್ಯಾವಂತ, ಅಲ್ಪಸ್ವಲ್ಪ ಸಾಹಿತ್ಯ-ಸಾಹಿತಿಗಳ ಬಗ್ಗೆ ತಿಳಿದಿದ್ದವ. ಈ ವಿದ್ಯಾರ್ಥಿಗಳನ್ನು ಕೇಳಿದ "ಸಾರ್ ಇದು ಇಂತಹ ಪುಸ್ತಕ ಬರೆದಿರೊ ಸಾಹಿತಿಗಳ ಮನೆ ಅಲ್ವಾ?" ವಿದ್ಯಾರ್ಥಿಗಳು ಹೌದಪ್ಪ ಅಂದ್ರು.

ರಿಕ್ಷಾ ಚಾಲಕ ಕೂಡಲೆ ಮರುಪ್ರಶ್ನೆ ಹಾಕಿದ "ಅಪ್ಪ್ ದೊಡ್ಡವ್ರು ಮನೆಗೆ ಮಧ್ಯರಾತ್ರಿಲಿ ಇವನ್ಯಾರೊ ಖರಾಬ್ ಕುಡ್ಕನ್ ಕರ್ಕಂಡ್ ಬಂದ್ ಬಿಟ್‌ಬಿಟ್ರಲ್ಲ ಸಾರ್ ಅವ್ರ ಮನೇಲ್ ಬೇರೆ ಒಬ್ರೇ ಹೆಂಗ್‌ಸ್ರು ಇರೋ ಹಂಗಿದೆ?" ಪಾಪ ರಿಕ್ಷಾ ಚಾಲಕನಿಗೇನು ಗೊತ್ತು, ಖರಾಬ್ ಕುಡುಕನೇ ಪ್ರಸಿದ್ಧ ಸಾಹಿತಿ ಎಂದು. ಸದರಿ ಸಾಹಿತಿ ಬೇರ್‍ಯಾರೂ ಅಲ್ಲ, ನಮ್ಮ ನಿಮ್ಮೆಲ್ಲರ ಪ್ರೀತಿಯ ಅಚ್ಚುಮೆಚ್ಚಿನ ಹಿರಿಯ ಸಾಹಿತಿ ಡಾ. ಚಂದ್ರಶೇಖರ ಕಂಬಾರ.



ಡಿಕೆಶಿ ಮಗ್ಗಲು ಮುರಿಯಲು ಲಾಯಕ್ಕಾದ ಹೆಣ್ಣು!

ಕಳೆದ ಬಾರಿಯ ಲೋಕಸಭಾ ಚುನಾವಣೆ ಸಂದರ್ಭದಲ್ಲಿ ಕನಕಪುರ ಕ್ಷೇತ್ರದಿಂದ ಅನಿರೀಕ್ಷಿತವಾಗಿ "ಮುಖಾ-ಮುಖಿ" ಕುಖ್ಯಾತಿಯ ತೇಜಸ್ವಿನಿಗೆ ಕಾಂಗ್ರೆಸ್ ಟಿಕೆಟ್ ದೊರೆತಾಗ. ಅದೂ ಹೆವಿವೈಟ್ ದೇವೇಗೌಡರ ಎದುರು, ಆಶ್ಚರ್ಯಕ್ಕಿಂತಾ ಅಪಹಾಸ್ಯ ಮಾಡಿ ನಕ್ಕವರೇ ಹೆಚ್ಚು. ದೇವೇಗೌಡರಂತಹ ಸೀಜನ್ಡ್ ರಾಜಕಾರಣಿ, ಜೊತೆಗೆ ಮಾಜಿ ಪ್ರಧಾನಿ ಎದುರು, ಬಾಯಿ ಬಡಿಯುತ್ತಾಳೆ ಎಂಬ ಕೇವಲ ಕಾರಣಕ್ಕೆ ತೇಜಸ್ವಿನಿ ಗೆಲ್ಲುವುದು ಸಾಧ್ಯವೆ? ಎಂದು ಎಲ್ಲರೂ ಪ್ರಶ್ನಿಸಿದರು. ಆದರೆ ಟಿಕೆಟ್ ಸಿಕ್ಕಷ್ಟೇ ಅನಿರೀಕ್ಷಿತವಾಗಿ ಆಕೆ ಗೆದ್ದಾಗ ಎಲ್ಲರ ಬಾಯಿ ಬಂದ್ ಆಗಿತ್ತು.

ಒಂದು ಪತ್ರಿಕೆಯಂತು "ಇಂತಹ ಮುಖ ಲಕ್ಷಣದ ಹಿನ್ನೆಲೆಯ ಮತ್ತು ಹಾವಭಾವದ ಹೆಂಗಸನ್ನು ದೇವೇಗೌಡರ ಎದುರು ನಿಲ್ಲಿಸಿದರೆ ಅವರು ಸೋಲುತ್ತಾರೆಂದು ಕೇರಳದ ಕಡೆ ಮಾಂತ್ರಿಕರು ಡಿಕೆಶಿಗೆ ಭವಿಷ್ಯ ಹೇಳಿದ್ದಾರಂತೆ" ಎಂದು ಮುಖಪುಟದಲ್ಲಿ ಬರೆಯಿತು!


ಆದರೆ ಈಗ ಕಾಂಗ್ರೆಸ್ಸಿನ ಮೊಗಸಾಲೆಯಲ್ಲಿ ಕೇಳಿಬರುತ್ತಿರುವ ಗುಸುಪಿಸು ಸುದ್ದಿ ಎಂದರೆ; ತೇಜಸ್ವಿನಿ ಟಿಕೆಟ್ ಗಿಟ್ಟಿಸಿದ್ದೆ ಡಿಕೆಶಿಯನ್ನು ಬೆದರಿಸಿ ಎಂದು. ಈ ಗುಸುಗುಸುಗಳ ಪ್ರಕಾರ, ಆಗಿನ್ನೂ ಪತ್ರಕರ್ತೆಯಾಗಿದ್ದ ತೇಜಸ್ವಿನಿಗೆ ಆ ಕಾಲಕ್ಕೆ ಛಾಪಾ ತೆಲಗಿಯ ಒಂದು ಸಿಡಿ ಸಿಕ್ಕಿತ್ತಂತೆ. ಕಾಂಗ್ರೆಸ್ಸಿಗರ ಪ್ರಕಾರ ಆ ಸಿಡಿಯಲ್ಲಿ ಶಿವಕುಮಾರ್, ತೆಲಗಿ ಮತ್ತು ರೋಷನ್‌ಬೇಗ್ ಸಹೋದರ ಡಾ. ರೆಹಾನ್‌ಬೇಗ್ ಕೂತು ಮಾತನಾಡುತ್ತಿರುವ ದೃಶ್ಯವಿತ್ತಂತೆ. ಮತ್ತೂ ಇನ್ನೇನೊ ಇತ್ತಂತೆ. ಈ ವಿಷಯ ಹೇಳಿ ಬೆದರಿಸಿ ಶಿವಕುಮಾರ್‌ರೊಂದಿಗೆ ಡೀಲ್ ಕುದುರಿಸಿದ ತೇಜಸ್ವಿನಿ ಎಂ.ಪಿ. ಸೀಟು ಮತ್ತು ಗೆಲ್ಲಿಸುವ ಭರವಸೆಯನ್ನು ಸಹ ಪಡೆದರಂತೆ.

ಇದು ನಿಜವೋ ಸುಳ್ಳೋ ಗೊತ್ತಿಲ್ಲ, ಈ ರೀತಿ ಶಿವಕುಮಾರ್ ನಡೆದುಕೊಂಡಿದ್ದಂತೂ ನಿಜ. ತೇಜಸ್ವಿನಿಗೆ ಟಿಕೆಟ್ ಕೊಡಿಸಿದ್ದಲ್ಲದೆ, ಕನಕಪುರದ ಸಮಸ್ತ ಲ್ಯಾಂಡ್ ಮತ್ತು ಗ್ರಾನೈಟ್ ಮಾಫಿಯಾ ಹಾಗು ಲಿಕ್ಕರ್ ಲಾಬಿಗಳಿಂದ ಎಲೆಕ್ಷನ್ ಫಂಡ್ ಕಲೆಕ್ಷನ್ ಮಾಡಿದ ಡಿಕೆಶಿ ಅದನ್ನೆಲ್ಲಾ ತೇಜಸ್ವಿನಿ ಮಡಿಲಿಗೆ ಸುರಿದು ಆಕೆಯನ್ನು ಗೆಲ್ಲಿಸಿದರು. ಅಷ್ಟೆ ಮಾಡಿ ಸುಮ್ಮನಿದ್ದಿದ್ದರೆ ಚೆನ್ನಾಗಿರುತ್ತಿತ್ತೇನೊ, ತನ್ನ ತಾಳಕ್ಕೆ ಆಕೆ ಕುಣಿಯಬೇಕೆಂದು ಬಯಸಿದ್ದು ತಪ್ಪಾಯ್ತು, ಸಾಮಾನ್ಯವಾಗಿ ತಾಳ ಹಾಕಿಯೇ ಅಭ್ಯಾಸವಾಗಿರುವ ತೇಜಸ್ವಿನಿಗೆ ಡಿಕೆಶಿ ತಾಳ, ತಪ್ಪಿದ ತಾಳದಂತೆ ಕೇಳಿರಬೇಕು. ತೇಜಸ್ವಿನಿ ತಿರುಗಿಬಿದ್ದಳು. ಡಿ.ಕೆ. ಶಿವಕುಮಾರ್, ಚನ್ನಪಟ್ಟಣ, ಸಾತನೂರು, ರಾಮನಗರ ಮುಂತಾದ ಕಡೆ ನಡೆಸುತ್ತಿದ್ದ ಗಣಿಗಾರಿಕೆಗೆ ತೇಜಸ್ವಿನಿಯೇ ಮುಳ್ಳಾದಳು. ಡಿ.ಕೆ. ಶಿವಕುಮಾರ್ ತೇಜಸ್ವಿನಿಯ ವಿರುದ್ಧ ರಾಮನಗರದ ಮಾಜಿ ಶಾಸಕ ಸಿ.ಎಂ. ಲಿಂಗಪ್ಪ ಹಾಗು ಮಾಗಡಿಯ ಎಚ್.ಎಂ. ರೇವಣ್ಣನನ್ನು ಛೂ ಬಿಟ್ಟರು. ತೇಜಸ್ವಿನಿಯೇನು ಸುಮ್ಮನೆ ಕೂರುವ ಹೆಣ್ಣೇ? ತನ್ನ ಬಲವರ್ಧನೆಗೆ ಚನ್ನಪಟ್ಟಣ ಶಾಸಕ ಸಿ.ಪಿ. ಯೋಗೇಶ್ವರ, ಆನೇಕಲ್ ಕ್ಷೇತ್ರದಲ್ಲಿ ಸೋತಿದ್ದ ಶಿವಣ್ಣ, ಉತ್ತರಹಳ್ಳಿಯಲ್ಲಿ ಪರಾಭವಗೊಂಡಿದ್ದ ಕರ್ನಾಟಕ ವಸತಿ ಮಹಾಮಂಡಲದ ಅಧ್ಯಕ್ಷ ಎಸ್.ಟಿ. ಸೋಮಶೇಖರ್‌ರವರನ್ನು ತನ್ನ ಮಗ್ಗಲಿಗೆ ಸೆಳೆದುಕೊಂಡರು. ಮಾಗಡಿಯಲ್ಲಿ ರೇವಣ್ಣನಿಗೆ - ಸೆಡ್ಡು ಹೊಡೆಯಲು ಜೆಡಿಎಸ್ ಶಾಸಕ ಎಚ್.ಸಿ. ಬಾಲಕೃಷ್ಣನೊಂದಿಗೆ ವೇದಿಕೆ ಏರಿದರು. ಮಾಜಿ ಭೂಗತ ದೊರೆ ಜೇಡರಹಳ್ಳಿ ಕೃಷ್ಣಪ್ಪನೊಂದಿಗೆ ಕೈ ಮಿಲಾಯಿಸಿ 'ಮಾಗಡಿ ಉಳಿಸಿ' ಚಳವಳಿ ನಡೆಸಿದರು.

ಅಲ್ಲಿಗೆ ಕಾಂಗ್ರೆಸ್ಸಿನ ಡಿ.ಕೆ. ವಿರೋಧಿ ಗುಂಪಿಗೆ ಈ ಕೆಲಸಕ್ಕೆ ತೇಜಸ್ವಿನಿಯೇ ಲಾಯಕ್ಕಾದ ಹೆಣ್ಣು ಎಂದು ಮನವರಿಕೆಯಾಗಿದೆ. ಒಟ್ಟಲ್ಲಿ ಡಿಕೆಶಿ ಮತ್ತು ತೇಜಸ್ವಿನಿ ಜಗಳ ತಾರಕಕ್ಕೇರಿ ಇವರಿಬ್ಬರ ಮುಖಾಮುಖಿ ಯಾವಾಗ ಏರ್ಪಡುತ್ತದೆಂಬುದು ಖಚಿತವಾಗಿಲ್ಲ, ತೆಲಗಿ ಮತ್ತು ಡಿಕೆಶಿ ಮುಖಾಮುಖಿಯ ಸಿಡಿ ತೇಜಸ್ವಿನಿಯ ಬಳಿ ಇರುವುದೇ ಆದರೆ ಅದನ್ನು ಆಕೆಯೇ ಬಿಡುಗಡೆ ಮಾಡುತ್ತಾರಾ? ಅಥವಾ ಅದ್ಯಾವುದಾದರು ನಿಗೂಢ ಮೂಲದ ಮೂಲಕ ಟಿವಿ ಚಾನೆಲ್ ತಲುಪುತ್ತದಾ? ಕಾದು ನೋಡಬೇಕು.

ಡಿಕೆಶಿ ಹೆಗಲೇರಲಿದೆ ಶನಿ ಹೆಣ್ಣಿನ ರೂಪದಲ್ಲಿ

ಎಂ.ಎಸ್. ಸತೀಶ್




ಎಸ್.ಎಂ. ಕೃಷ್ಣ ರಾಜ್ಯದ ಮುಖ್ಯಮಂತ್ರಿ ಆಗಿದ್ದ ಅವಧಿಯಲ್ಲಿ ಅಕ್ಷರಶಃ ರಾಜ್ಯವನ್ನು ತನ್ನ ದರ್ಪ, ದಬ್ಬಾಳಿಕೆ ಮತ್ತು ಗತ್ತಿನಿಂದ ಆಳಿದ ಡಿ.ಕೆ.ಶಿವಕುಮಾರ್ ಹೆಗಲಿಗೆ ಏಳರ ಮನೆ ಶನಿ ಏರಿರುವ ಎಲ್ಲ ಸೂಚನೆಗಳು ಸ್ಪಷ್ಟವಾಗಿ ಕಂಡು ಬರುತ್ತಿವೆ. ಹೀಗೆ ಶನಿರೂಪದಲ್ಲಿ ಹೆಗಲೇರಿರುವುದು ಬೇರ್‍ಯಾರೂ ಅಲ್ಲ, ಅವರೇ ಕೈ ಹಿಡಿದು ಕಾಂಗ್ರೆಸ್ ಎಂಬ ಮಹಾ ಮನೆಗೆ ಅದ್ದೂರಿಯಿಂದ ಕರೆತಂದು ಲೋಕಸಭಾ ಚುನಾವಣೆಗೆ ಟಿಕೆಟ್ ಕೊಡಿಸಿ, ಗೆಲ್ಲಿಸಿ ದೇವೇಗೌಡರಂತಹ ಅತಿರಥರ ಮುಖಭಂಗಕ್ಕೆ ಕಾರಣವಾದ ಮಾಜಿ ಮುಖಾ-ಮುಖಿ ಮಹಿಳೆ ತೇಜಸ್ವಿನಿ ಶ್ರೀರಮೇಶ್. ಹೀಗೆ ಡಿ.ಕೆ.ಶಿವಕುಮಾರ್ ಹೆಗಲೇರಲು ಸೂಚನೆ ಕೊಟ್ಟಿರುವವರು ಅದೇ ಕಾಂಗ್ರೆಸ್ ಪಕ್ಷದ ಮತ್ತಿಬ್ಬರು ದಿಗ್ಗಜರಾದ ಮಲ್ಲಿಕಾರ್ಜುನ ಖರ್ಗೆ ಮತ್ತು ಧರ್ಮಸಿಂಗ್ ಎಂಬುದು ಮತ್ತೊಂದು ಸತ್ಯ.

ಇದೇನು ಇತ್ತೀಚಿನ ಬೆಳವಣಿಗೆಯಲ್ಲ, ಎಸ್.ಎಂ. ಕೃಷ್ಣ ಅಧಿಕಾರ ಕಳೆದುಕೊಂಡು ಮಹಾರಾಷ್ಟ್ರ ರಾಜ್ಯಪಾಲರಾಗಿ ತೆರಳಿದಾಗಿನಿಂದ ಇಂತಹ ಒಂದು ಚಟುವಟಿಕೆ ಆರಂಭವಾಗಿದೆ. ಆದರೆ ತೀರಾ ಇತ್ತೀಚೆಗೆ ಇದಕ್ಕೊಂದು ಸ್ಪಷ್ಟರೂಪ ದೊರಕಿದ್ದು ಕಾಂಗ್ರೆಸ್ ಪಕ್ಷದೊಳಗಿನ ಡಿ.ಕೆ.ಶಿವಕುಮಾರ್ ವಿರೋಧಿ ಶಕ್ತಿಗಳೆಲ್ಲಾ ಒಂದಾಗಿ ಅವರ ಆಟಾಟೋಪಕ್ಕೆ ಫುಲ್‌ಸ್ಟಾಪ್ ಹಾಕಲು ನಿರ್ಧರಿಸಿದಾಗಿನಿಂದ ಅದಕ್ಕೆ ದಾಳವಾಗಿ ಬಳಕೆಯಾಗುತ್ತಿರುವುದೇ "ಎವರ್‌ರೆಡಿ, ಎಲ್ಲದಕ್ಕೂ ಸೈ" ತೇಜಸ್ವಿನಿ ಎಂಬ ಸಂಸದೆ.

ಡಿ.ಕೆ.ಶಿವಕುಮಾರ್ ವಿರುದ್ಧ ಕಾಂಗ್ರೆಸ್ ಪಕ್ಷದಲ್ಲಿ ಇಂಥಹ ಒಂದು ಸಾಂಕ್ರಾಮಿಕ ಸಮಾಧಾನ ಮತ್ತು ವಿರೋಧಕ್ಕೆ ಒಂದು ಇತಿಹಾಸವೇ ಇದೆ. ಒಂದಾನೊಂದು ಕಾಲದಲ್ಲಿ ಕುಖ್ಯಾತ ರೌಡಿ ಕೊತ್ವಾಲ ರಾಮಚಂದ್ರನ ಸಹಚರನೆಂದೇ ಗುರುತಿಸಲ್ಪಟ್ಟಿದ್ದ ಡಿ.ಕೆ.ಶಿವಕುಮಾರ್ ನಂತರ, ಹಂತ-ಹಂತವಾಗಿ ರಾಜಕೀಯದಲ್ಲಿ ಬೆಳೆದ ರೀತಿ ಅದಕ್ಕೆ ಬಳಸಿದ ತಂತ್ರ ಪ್ರಯೋಗಗಳು ಈಗ ಎಲ್ಲರಿಗೂ ಗೊತ್ತಿರುವುದೆ. ಇಂತಹ ವ್ಯಕ್ತಿಯ ಕೈಗೆ ಅಸಲಿ ಅಧಿಕಾರ ಸಿಕ್ಕರೆ ಪರಿಸ್ಥಿತಿ ಹೇಗಾಗುತ್ತದೆಂದು ಅರಿವಾಗಿದ್ದು ಮಾತ್ರ ಆತ ಎಸ್. ಎಂ. ಕೃಷ್ಣ ಸಂಪುಟದಲ್ಲಿ ಸಹಕಾರಿ ಸಚಿವರಾದ ಸಂದರ್ಭದಲ್ಲಿ.


ಮುಖ್ಯಮಂತ್ರಿ ಪಟ್ಟದಲ್ಲಿ ಅಂದು ಎಸ್.ಎಂ. ಕೃಷ್ಣ ಕೂತಿದ್ದರೂ ಪ್ರಾಕ್ಸಿ ಆಡಳಿತ ನಡೆಸಿದ್ದು ಡಿ.ಕೆ.ಶಿವಕುಮಾರ್. ಡಿ.ಕೆ. ಶಿವಕುಮಾರ್‌ರನ್ನು ಸೂಪರ್ ಚೀಫ್ ಮಿನಿಸ್ಟರ್ ಎಂದೇ ಆಗ ಎಲ್ಲರೂ ಕರೆಯುತ್ತಿದ್ದರು. ಶಿವಕುಮಾರ್ ಅಹಂಕಾರ ಆಗ ಯಾವ ಮಟ್ಟದಲ್ಲಿತ್ತೆಂದರೆ ಹಿರಿಯ ಸಚಿವರುಗಳನ್ನು "ರೀ ಖರ್ಗೆ, ರೀ ಧರ್ಮಸಿಂಗ್ ಬನ್ರಿ ಇಲ್ಲಿ" ಎಂದು ಕರೆಯುವಲ್ಲಿಗೆ ಹೋಗಿತ್ತು.



> ಮುಖ್ಯಮಂತ್ರಿ ಪಟ್ಟದಲ್ಲಿ ಅಂದ
> ಎಸ್.ಎಂ. ಕೃಷ್ಣ ಕೂತಿದ್ದರೂ ಪ್ರಾ
> ಆಡಳಿತ ನಡೆಸಿದ್ದು ಡಿ.ಕೆ.ಶಿವಕುಮಾರ್
> ಡಿ.ಕೆ. ಶಿವಕುಮಾರ್‌ರನ್ನು ಸೂಪರ
> ಚೀಫ್ ಮಿನಿಸ್ಟರ್ ಎಂದೇ ಆ
> ಎಲ್ಲರೂ ಕರೆಯುತ್ತಿದ್ದರು. ಶಿವಕುಮಾ
> ಅಹಂಕಾರ ಆಗ ಯಾ
> ಮಟ್ಟದಲ್ಲಿತ್ತೆಂದರೆ ಹಿರಿ
> ಸಚಿವರುಗಳನ್ನು "ರೀ ಖರ್ಗೆ, ರಿ
> ಧರ್ಮಸಿಂಗ್ ಬನ್ರಿ ಇಲ್ಲಿ" ಎಂದ
> ಕರೆಯುವಲ್ಲಿಗೆ ಹೋಗಿತ್ತು

2001ರಲ್ಲಿ ಬೆಂಗಳೂರಿನಲ್ಲಿ ನಡೆದ ಎ.ಐ.ಸಿ.ಸಿ. ಅಧಿವೇಶನ ಸಂದರ್ಭದಲ್ಲಿ ಅಂದಿನ ರಾಷ್ಟ್ರೀಯ ಸೇವಾದಳದ ಅಧ್ಯಕ್ಷ ಬಿ.ಕೆ. ಹರಿಪ್ರಸಾದ್‌ರವರನ್ನು ವೇದಿಕೆ ಹತ್ತಲು ಅಡ್ಡಿಪಡಿಸುವಷ್ಟರ ಮಟ್ಟ
ಶಿವಕುಮಾರ್ ಅಹಂಕಾರ ಬೆಳೆದಿ
ಎಸ್.ಎಂ. ಕೃಷ್ಣ ಸಂಪುಟದ
ಗುಲ್ಬರ್ಗ ಜಿಲ್ಲೆಯನ್ನು ಪ್ರತಿನಿಧಿಸುತ್ತಿ
ಖರ್ಗೆ ಮತ್ತು ಧರ್ಮಸಿಂಗ್‌ರ
ಸಲಹೆಯನ್ನೂ ಕೇಳದೆ ಮು
ಲೀಗ್ ಮತ್ತು ಜನತಾದಳದಲ್ಲಿ ಹ
ಮೂನ್ ಮುಗಿಸಿ ಬಂದಿದ್ದ ಖ
ರುಲ್ಲಾ ಇಸ್ಲಾಂರನ್ನು ಸಂಪುಟ
ಸೇರಿಸಲಾಯ್ತು, ಅದೇ ರೀತಿ ಬಾ
ರಾವ್ ಚವ್ಹಾಣ್ ಮತ್ತು ಬಾಬುರಾವ್ ಚಿಂಚನಸೂರ್ ಸಹ ಶಿವಕುಮಾರ್ ಕೃಪಾಕಟಾ
ದಿಂದ ಮಂತ್ರಿಗಳಾದರು. ನಂತರ ವಿಧಾನಸಭಾ ಚುನಾವಣೆಯಲ್ಲಿ ಈ ಮೂವರ
ಸಚಿವರು ಧರ್ಮಸಿಂಗ್ ಮತ್ತು ಖರ್ಗೆಯ ಅವಕೃಪೆಗೆ ಒಳಗಾಗಿ ಸೋತಿದ್ದು ಈ
ಹಳೆ ಕಥೆ.

ಇದೆಲ್ಲಕ್ಕಿಂತ ಹೆಚ್ಚಾಗಿ ಜನತಾದಳದ ಶಾಸಕರನ್ನು ಸಾರಾಸಗಟಾಗಿ ಕಾಂಗ್ರೆಸ
ಸೆಳೆಯಲು ಹೈಕಮಾಂಡ್‌ನಿಂದ ಗ್ರೀನ್ ಸಿಗ್ನಲ್ ಪಡೆದು ಬಂದ ಡಿ.ಕೆ.ಶಿವಕುಮಾ
ಶ್ರೀನಿವಾಸಪುರದ ರಮೇಶ್ ಕುಮಾರ್, ಬಸವರಾಜ ರಾಯರೆಡ್ಡಿ ಮತ್ತು ಕೃಷ್ಣ ಬೈರೇಗೌ
ರಾಧಿಯಾಗಿ ಸುಮಾರು ಹದಿನೆಂಟು ಶಾಸಕರನ್ನು ಕಾಂಗ್ರೆಸ್ಸಿಗೆ ಸೆಳೆದು ತಂದ ನಂತ
ಹಿರಿಯ ಕಾಂಗ್ರೆಸ್ ಮುಖಂಡರಲ್ಲಿ ಶಿವಕುಮಾರ್ ಬಗ್ಗೆ ಅಸಹನೆ ಹೆಚ್ಚಾಯಿತು. ಹ
ಕೇಳಿ ಕಾಂಗ್ರೆಸ್ ಪಕ್ಷ ತುಂಬಿ ತುಳುಕುತ್ತಿದೆ, ಅಂತದ್ದರಲ್ಲಿ ಮತ್ತಿಷ್ಟು ಜನ ನಾಯಕರ ಸೇರ್ಪಡೆಯಾದರೆ ನಮ್ಮ ಗತಿ ಏನು? ಎಂಬುದು ಅವರ ಅಳಲು.




ಎಸ್.ಎಂ. ಕೃಷ್ಣ ಅಧಿಕಾರ ಅವಧಿಯುದ್ದಕ್ಕೂ ಡಿ.ಕೆ.ಶಿವಕುಮಾರ್ ಇಂಥ ಪಾತ್ರವನ್ನೇ ನಿರ್ವಹಿಸಿ ಹಿರಿಯ ಕಾಂಗ್ರೆಸ್ ಮುಖಂಡರ ಕಣ್ಣು ಕೆಂಪಾಗಿಸಿದ್ದಾರೆ. ಆದರೆ ಡಿ.ಕೆ.ಶಿಯ ದುರಾದೃಷ್ಟ ಹೇಗಿದೆ ಎಂದರೆ ಅವರೇ ಬೇರೆ ಪಕ್ಷದಿಂದ ಕರೆತಂದ ಯಾವುದೇ ಶಾಸಕರು ಮತ್ತು ಮುಖಂಡರು ಇವತ್ತು ಅವರೊಂದಿಗಿಲ್ಲ, ಸಂಸದ ಆರ್.ಎಲ್. ಜಾಲಪ್ಪನವರ ಮೂಲಕ ಜಾತ್ಯತೀತ

ಪರಿಷತ್ತಿನಲ್ಲಿ ಉಗ್ರಪ್ಪನೆಂಬ ಬಾವಲಿ

"ಇವರು ನಮ್ಮ ಪಕ್ಷಕ್ಕೆ ಬಂದರೆ ದೇವೇಗೌಡರ ಟವಲ್ ಪೆಟ್ಟು, ಮುದ್ದೆ ಏಟು ಎಲ್ಲಾ ನಮಗೆ ಗೊತ್ತಾಗಿ ನಾವು ತಿರುಗೇಟು ನೀಡಬಹುದು ಮೇಡಂ" ಎಂದು ನಂಬಿಸಿ ಜಾತ್ಯತೀತ ಜನತಾದಳದಿಂದ ವಿ.ಎಸ್. ಉಗ್ರಪ್ಪ ಎಂಬ ಕೀರಲು ಕಂಠದ ಮಾಜಿ ಕ್ರಾಂತಿಕಾರಿಯನ್ನು ಕಾಂಗ್ರೆಸ್ಸಿಗೆ ಕರೆತಂದ ಕ್ರೆಡಿಟ್ಟು ಸಂಸದ ಆರ್.ಎಲ್. ಜಾಲಪ್ಪನವರಿಗೆ ಸಲ್ಲಬೇಕು. ಅನಂತರ 2001 ರಲ್ಲಿ ಎಐಸಿಸಿ ಪ್ರಧಾನ ಕಾರ್ಯದರ್ಶಿ ವೈಲಾರವಿ ಮುಂದೆ ನಿಂತ ಉಗ್ರಪ್ಪ ಜಾಲಪ್ಪನವರ ಮೂಲಕ ಎಂಎಲ್ಸಿ ಉದ್ಯೋಗಕ್ಕಾಗಿ ಅರ್ಜಿ ಹಾಕಿ ಸಂದರ್ಶನದಲ್ಲಿ ಫೇಲ್ ಆದರು. ಆಗ ಆಶ್ರಯ ನೀಡಿದವರೇ ಡಿ.ಕೆ. ಶಿವ ಕುಮಾರ್.

1975-77 ತುರ್ತು ಪರಿಸ್ಥಿತಿ ಸಂದರ್ಭದಲ್ಲಿ ವಿನಾಕಾರಣ ಜೈಲು ಸೇರಿ ಅದೇ ಕಾರಣವನ್ನು ಮುಂದಿಟ್ಟುಕೊಂಡು ಯುವ ಜನತಾ ಸೇರಿ; ದೇವೇಗೌಡರ ಆಶೀರ್ವಾದದಿಂದ ಆಕಸ್ಮಿಕವಾಗಿ ರಾಜ್ಯ ಘಟಕದ ಅಧ್ಯಕ್ಷರೂ ಆಗಿದ್ದವರು ಉಗ್ರಪ್ಪ, ವಿಚಾರವಿಲ್ಲದಿದ್ದರೂ ವಿನಾಕಾರಣ ಮಾತನಾಡಬಲ್ಲ ವಾಗ್ಮಿ, ಕೀರಲು ಧ್ವನಿಯಲ್ಲಿ ಕೂಗುವುದೇ ವಾದ ಎಂದು ಭಾವಿಸಿರುವ ಮೊಂಡ. ಈತನನ್ನು ಬುದ್ಧಿ ಜೀವಿ ಎಂದು ಗುರುತಿಸಿ 2004 ರಲ್ಲಿ ವಿಧಾನಪರಿಷತ್ತಿಗೆ ಆರಿಸಿಬರುವಂತೆ ಮಾಡಿದವರು ಯಥಾಪ್ರಕಾರ "ಮನೆಗೆ ಮಾರಿ ಪರರಿಗೆ ಉಪಕಾರಿ" ಎಂದು ಕಾಂಗ್ರೆಸ್‌ನಲ್ಲಿ 'ಪ್ರಖ್ಯಾತರಾಗಿರುವ ಡಿ.ಕೆ. ಶಿವಕುಮಾರ್.

ಇವರನ್ನು ಪರಿಷತ್ತಿನಲ್ಲಿ ಕೂರಿಸಿಬಿಟ್ಟರೆ ಜೆಡಿಎಸ್‌ನವರೆಲ್ಲಾ ಬಾಯಿ ಮುಚ್ಚಿಕೊಂಡು ಬಿಡುತ್ತಾರೆ, ದೇವೇಗೌಡರ ಕುಟುಂಬದವರ ಹಿಂದಿನ ಅಕ್ರಮವನ್ನೆಲ್ಲಾ ಉಗ್ರಪ್ಪ ಹೊರ ಹಾಕಿಬಿಡುತ್ತಾರೆಂದು ಭಾವಿಸಿದ್ದ ಡಿ.ಕೆ. ಶಿವಕುಮಾರ್‌ಗೆ ಈಗ ತೀವ್ರ ನಿರಾಸೆಯಾದಂತಿದೆ. ಉಗ್ರಪ್ಪ ಪ್ರಥಮ ಬಾರಿಗೆ ಪರಿಷತ್ತಿನಲ್ಲಿ ಧ್ವನಿ ಎತ್ತಿದಾಗಲೇ ಸಭಾಂಗಣದಲ್ಲಿದ್ದವರೆಲ್ಲಾ ಯಾವುದೋ ತೊಗಲು ಬಾವಲಿ ಕರ್ಕಶ ಕಂಠದಲ್ಲಿ ಕಿರುಚುತ್ತಿದೆ ಎಂದು ಭಾವಿಸಿದ್ದರಂತೆ. ಕೆಪಿಸಿಸಿ ಪತ್ರಿಕಾಗೋಷ್ಠಿಗಳಲ್ಲೂ ಅಷ್ಟೇ. ಇವರು ವಾದ ಮಂಡಿಸುವುದಕ್ಕಿಂತಾ ಹೆಚ್ಚಾಗಿ ಆಹಂಕಾರ, ಉಡಾಫೆ ಮತ್ತು ಕಟಕಿಯೇ ಹೆಚ್ಚಾಗಿರುತ್ತದೆ. ವಿಷಯ, ಅಂಕಿ, ಅಂಶಗಳ ಸ್ಪಷ್ಟತೆಯೇ ಇರುವುದಿಲ್ಲ.



ಇವರ ಇಂತಹ ಚೇಷ್ಟೆಯಿಂದಾಗಿ ಆಗಾಗ ಸ್ವಪಕ್ಷದವರಿಂದಲೇ ಧರ್ಮದೇಟು ಬೀಳುತ್ತಿರುತ್ತದೆ. ವರ್ಷದ ಕೆಳಗೆ ತುಮಕೂರು ಜಿಲ್ಲಾ ಪಂಚಾಯ್ತಿ ಸಭೆಯಲ್ಲಿ, ಆರು ತಿಂಗಳ ಹಿಂದೆ ಮಾಜಿ ಮೇಯರ್ ಹಾಗು ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ರಾಮಚಂದ್ರಪ್ಪನ ಕೈಯಲ್ಲಿ ಮತ್ತು ತೀರಾ ಇತ್ತೀಚೆಗೆ ರಾಜಭವನದ ಮುಂದೆ ಕೆಪಿಸಿಸಿ ಸದಸ್ಯ ಹಾಗೂ ಯುವ ಕಾಂಗ್ರೆಸ್ ಮುಖಂಡ ಸೋಮಸುಂದರ್ ಉಗ್ರಪ್ಪನವರಿಗೆ ಕಜ್ಜಾಯದ ರುಚಿ ತೋರಿಸಿದ್ದಾರೆ.

ಇಂತಹ ಉಗ್ರಪ್ಪ ಈಗ ಡಿ.ಕೆ. ಶಿವಕುಮಾರರನ್ನು ಕೇರ್ ಮಾಡುವುದಿಲ್ಲ, ಈಗ ಅವರದ್ದೇನಿದ್ದರೂ ನೇರ ಡೀಲಿಂಗ್. ಈ ಡೀಲಿಂಗ್ ಸಂಪ್ರದಾಯ ಹೇಗಿದೆ ನೋಡಿ. ಪರಿಷತ್ ಕಲಾಪದಲ್ಲಿ ಯಾವುದೋ ಇಲಾಖೆಗೆ ಸಂಬಂಧಿಸಿದ ಅವ್ಯವಹಾರದ ಚರ್ಚೆ ಇರುತ್ತದೆ. ಅದ
ಸಂಬಂಧಿಸಿದ ಅಧಿಕಾರಿಗೆ ಹಿಂದಿನ ದಿನ
ಫೋನಾಯಿಸುವ ಉಗ್ರಪ್ಪ "ಏನ್ರಿ ನಾಳೆ ನಿಮ್ಮ ಇಲಾ
ಬಗ್ಗೆ ಚರ್ಚೆ ನಡೀತಾ ಇದೆ. ಯಾಕ್ರಿ ಹಿಂ
ಮಾಡ್ತಂದ್ರಿ?" ಅಂತ ಒಂದ್ ಬಾಂಬ್ ಎಸಿತಾ
ಹೇಳಿಕೇಳಿ ಮೊದ್ಲೇ ಬಿದ್ದ ಬಾಯಿ, ಪಾಪ ಅಧಿಕಾ
ಕೈಕೈ ಹಿಸುಕಿಕೊಂಡು "ಸಾ
ಹೇಗಾದ್ರು ಮ್ಯಾನೇಜ್ ಮಾ
ಸಾರ್" ಎಂದು ವಿನಂತಿಗೆ ಇ
ತಾನೆ. ಆಗ ಆರಂಭವಾಗುತ
ತುರ್ತುಪರಿಸ್ಥಿತಿ ಕ್ರಾಂತಿಕಾರಿಯ
ಭಾಷಣ.

"ನೋಡ್ರಿ ನಾನು ಶಾಸಕ
ಜೊತೆಗೆ ಕೆಪಿಸಿಸಿ ಪ್ರಧಾ
ಕಾರ್ಯದರ್ಶಿ, ಜೊತೆಗೆ ಪಕ್ಷ
ವಕ್ತಾರ ಬೇರೆ. ಪಕ್ಷದ ಎಲ
ಫಂಕ್ಷನ್ ಜವಾಬ್ದಾರಿ ನಂ
ನಾಳಿದ್ದು ಒಂದ್ ಕಾರ್ಯಕ್ರಮ
ಇದೆ ಅದ್ರದ್ದು ಸ್ವಲ್ಪ ಜವಾಬ್ದಾ
ವಹಿಸ್ಕಂಬಿಡಿ". ಅಧಿಕಾರಿ ಅದ
ಶಿರಸಾವಹಿಸಿ ವಹಿಸಿಕೊಳ್ಳುತ್ತಾನೆ ಎಂದು ಬೇ
ಹೇಳಬೇಕಿಲ್ಲ. ಹೀಗೆ ಡೀಲ್ ಕುದುರಿಸುವ ಉಗ್ರ
ವಿಧಾನಪರಿಷತ್ತಿಗೆ ಆಯ್ಕೆ ಆಗಿ ಕೇವಲ 2 ವರ್ಷದ
ಒಂದೂವರೆ ಕೋಟಿ ರೂಪಾಯಿ ಮನೆ ಕೊಳ್ಳಲ
ಓಡಾಡುತ್ತಿದ್ದಾನೆಂದರೆ ದಾರಿ ತೋರಿದ ಗು
ಡಿಕೆಶಿಗೆ ಹೊಟ್ಟೆ ಉರಿಯದೆ ಇರುತ್ತದೆಯೆ?

ಜನತಾದಳದಿಂದ ಕಾಂಗ್ರೆಸ್‌ಗೆ ಬಂದು, ನಂತರ ಡಿ.ಕೆ.ಶಿ. ಬಲಗೈನಂತಿದ್ದ ವಿಧಾನಪರಿಷತ್ ಸದಸ್ಯ ವಿ.ಎಸ್. ಉಗ್ರಪ್ಪ ಇವತ್ತು ಡಿಕೆಶಿಯನ್ನೇ ಮೀರಿಸುವಷ್ಟು ಬಾಯಿಬಡುಕರಾಗಿದ್ದಾರೆ (ಬಾಕ್ಸ್ ನೋಡಿ). ಜೆಡಿಎಸ್‌ನಿಂದ ಬಂದ ಮತ್ತೊಬ್ಬ ಯುವ ಮುಖಂಡ ನೆ.ಲ. ನರೇಂದ್ರಬಾಬು ಶಾಸಕರಾದ ನಂತರ ಡಿಕೆಗೆ ಸಾಷ್ಟಾಂಗ ನಮಸ್ಕಾರ ಹಾಕಿ "ನಿನ್ಯಾಕೋ ನಿನ್ನ ಹಂಗ್ಯಾಕೋ" ಎಂದು ಧ್ಯಾನಮಗ್ನರಾಗಿದ್ದಾರೆ. ಸಂಸದೆ ತೇಜಸ್ವಿನಿಯಂತು ತಮ್ಮ ಎದೆಗಾರಿಕೆಯಿಂದ ಶಿವಕುಮಾರ್ ಎದುರಿಸಿ ನಿಂತಿದ್ದಾರೆ. ಇನ್ನು ಜೆಡಿಎಸ್‌ನಿಂದ ಬಂದ 18 ಶಾಸಕರ ಗುಂಪು ಮೂಲ ಕಾಂಗ್ರೆಸ್ಸಿಗರಿಗಿಂತ ಮದಿವಂತರಂತಾಡುತ್ತಿದ್ದಾರೆ.

ಮಾಜಿ ಉಪಮುಖ್ಯಮಂತ್ರಿ ಸಿದ್ಧರಾಮಯ್ಯ ಕಾಂಗ್ರೆಸ್ ಸೇರ್ಪಡೆ ವಿಚಾರದಲ್ಲೂ ಇದೇ ಪುನರಾವರ್ತನೆಯಾಯ್ತು. ರಾಜ್ಯದ ಕಾಂಗ್ರೆಸ್ ಮುಖಂಡರಲ್ಲಿ ಬೆರಳೆಣಿಕೆಯಷ್ಟು ಜನರನ್ನು ಹೊರತು ಪಡಿಸಿದರೆ ಸಿದ್ಧರಾಮಯ್ಯ ಸೇರ್ಪಡೆ ಬಗ್ಗೆ ಬೇರ್‍ಯಾರೂ ಅಂತಹ ಉತ್ಸಾಹವನ್ನು ತೋರ್ಪಡಿಸಲಿಲ್ಲ. ಈ ವಿಚಾರದಲ್ಲೂ ನಾಯಕತ್ವ ವಹಿಸಿದ ಶಿವಕುಮಾರ್, ಸಿದ್ಧರಾಮಯ್ಯ ಸೇರ್ಪಡೆಯಿಂದ ಕಾಂಗ್ರೆಸ್ ಪಕ್ಷಕ್ಕೆ ಆಗುವ ಲಾಭ, ಕುರುಬ ಜನಾಂಗದ ಪ್ರಭಾವ ಮತ್ತು ಮಹತ್ವವನ್ನು ಮೇಡಂ ಸೋನಿಯಾಗೆ ಮನದಟ್ಟು ಮಾಡಿ ಸಿದ್ಧರಾಮಯ್ಯ ಕಾಂಗ್ರೆಸ್ ಪ್ರವೇಶಕ್ಕೆ ಕ್ಲಿಯರೆನ್ಸ್ ಕೊಡಿಸಿದರು. ಇದನ್ನು ಸಹ ಕಾಂಗ್ರೆಸ್ಸಿನ ಹಿರಿಯ ಮುಖಂಡರು ಮನಸ್ಸಿಲ್ಲದ ಮನಸ್ಸಲ್ಲಿ ಸಹಿಸಿಕೊಂಡಿದ್ದಾರೆ. ಈ ಕಾರಣಕ್ಕಾಗಿ ಸಿದ್ಧರಾಮಯ್ಯ ತಮ್ಮ ಬೆನ್ನಿಗೆ ನಿಲ್ಲುತ್ತಾರೆಂದು ಡಿಕೆಶಿ ಭಾವಿಸಿದ್ದರೆ ಅದು ತಪ್ಪು ಲೆಕ್ಕಾಚಾರ. ಸಿದ್ಧರಾಮಯ್ಯನವರಿಗೆ ತಮ್ಮದೇ ಆದ ಸಿದ್ಧಾಂತ, ಬೆಂಬಲಿಗರು ಮತ್ತು ನಿಲುವಿದೆ. ಒಟ್ಟಿನಲ್ಲಿ ಹೈಕಮಾಂಡ್ ಮೆಚ್ಚಿಸುವ ಆತುರದಲ್ಲಿ ಡಿಕೆಶಿ ತಮ್ಮ ಸುತ್ತ ಹಳ್ಳ ತೋಡಿಕೊಂಡಿರುವುದಂತೂ ಸತ್ಯ.

ಕೃಷ್ಣ ಅಧಿಕಾರ ಅವಧಿಯಲ್ಲಿ ಡಿಕೆಶಿ ದುಡ್ಡು ಬಾಚಿದ ರೀತಿಯೂ ಕಾಂಗ್ರೆಸ್ ಮುಖಂಡರ ತೀವ್ರ ಅಸಮಾಧಾನಕ್ಕೆ ಕಾರಣವಾಗಿದೆ. 2003ರಲ್ಲಿ ಮಹಾರಾಷ್ಟ್ರ ಕಾಂಗ್ರೆಸ್ಸಿನಲ್ಲಿ ಬಿರುಕು ಉಂಟಾಗಿ ಶರದ್ ಪವಾರ್ ಬಂಡೆದ್ದಾಗ ಅಲ್ಲಿನ ಕಾಂಗ್ರೆಸ್ ಶಾಸಕರು ಬೆಂಗಳೂರಿಗೆ ಬಂದರು. ಅವರನ್ನು ಹದಿನೈದು ದಿನ ನೆಲಮಂಗಲ ಸಮೀಪದ ನಟ ಸಂಜಯ್ ಖಾನ್ ಒಡೆತನದ ಗೋಲ್ಡನ್ ಪಾಮ್ ರಿಸಾರ್ಟ್‌ನಲ್ಲಿಟ್ಟು ಮೈಸೂರು, ಊಟಿ, ಕೊಡೈಕೆನಾಲ್ ಸುತ್ತಿಸಿ ಭರ್ಜರಿಯಾಗಿ ನೋಡಿಕೊಂಡಿದ್ದು ಇದೇ ಡಿ.ಕೆ.ಶಿವಕುಮಾರ್. ಮಹಾರಾಷ್ಟ್ರದ ಇಂದಿನ ಮುಖ್ಯಮಂತ್ರಿ ವಿಲಾಸ್‌ರಾವ್ ದೇಶ್‌ಮುಖ್‌ರವರ ವಿನಂತಿಯ ಮೇರೆಗೆ ಈ ಆತಿಥ್ಯ ನೀಡಲಾಗಿತ್ತು. ವಿಲಾಸ್‌ರಾವ್ ದೇಶ್‌ಮುಖ್, ಡಿ.ಕೆ.ಶಿವಕುಮಾರ್‌ರವರ ಬೆಂಗಳೂರಿನ 'ಶೋಭಾಮಾಲ್' ಶಾಪಿಂಗ್ ಸಂಕೀರ್ಣದ ಪಾಲುದಾರರು ಸಹ ಎಂಬುದು ಇಲ್ಲಿ ಮುಖ್ಯ.

ಇಂಥಹ ಭರ್ಜರಿ ಆತಿಥ್ಯಕ್ಕೆ ಶಿವಕುಮಾರ್ ಏನು ಜೇಬಿನಿಂದ ಹಣ ಖರ್ಚು ಮಾಡಿರಲಿಲ್ಲ. ಅಂದಿನ ಸಚಿವರಾದ ಟಿ.ಬಿ. ಜಯಚಂದ್ರ, ಬಿ. ಮುನಿಯಪ್ಪ, ಎ.ಕೃಷ್ಣಪ್ಪ ಸೇರಿದಂತೆ ಎಕ್ಸೈಸ್ ಖದೀಮರು, ಗ್ರಾನೈಟ್ ಖಳ ಗಳು ಮತ್ತು ಭ್ರಷ್ಟ ಅಧಿಕಾರಿಗಳಿಂದ ಹಣ ಸಂಗ್ರಹಿಸಲಾಗಿತ್ತು. ಸ್ವಂತ ಪಕ್ಷದ ಸಚಿವರುಗಳಿಂದಲೇ ಹಣ ಕೀಳುವ ಶಿವಕುಮಾರನ ಈ ದಾದಾಗಿರಿ ಎಲ್ಲ ಸಚಿವರ ಕೋಪಕ್ಕೆ ಕಾರಣವಾಗಿತ್ತು. ಆದರೆ ಮಹಾರಾಷ್ಟ್ರ ಶಾಸಕರ ಆತಿಥ್ಯಕ್ಕೆ ಕರೀಂಲಾಲನ ಛಾಪಾಕಾಗದದ ಹಣ ಬಳಸಲಾಗಿತ್ತೆಂದು ಈಗ ಕೇಳಿ ಬರುತ್ತಿರುವ ಸುದ್ದಿ. ಈ ವಿಷಯವನ್ನೇ ಶಿವಕುಮಾರನ ವಿರುದ್ಧ ಅಂತಿಮ ಅಸ್ತ್ರವನ್ನಾಗಿ ಬಳಸಲು ಕಾಂಗ್ರೆಸ್ಸಿನ ಕೆಲವು ಹಿರಿಯ ಮುಖಂಡರು ತಂತ್ರ ರೂಪಿಸಿದ್ದಾರಂತೆ(ಬಾಕ್ಸ್ ನೋಡಿ).

ಡಾ.ರಾಜ್‌ಕುಮಾರ್ ಅಪಹರಣ ಸಂದರ್ಭದಲ್ಲೂ ಡಿಕೆಶಿ ಕಲೆಕ್ಷನ್‌ಗೆ ಇಳಿದರು. ವೆಸ್ಟ್‌ಎಂಡ್ ಹೋಟೆಲ್‌ನಲ್ಲಿ ಕ್ಯಾಂಪ್ ಹಾಕಿ ಎಸ್.ಎಂ. ಕೃಷ್ಣರ ಅಳಿಯ ಸಿದ್ಧಾರ್ಥರೊಂದಿಗೆ ಕೂತು, ಮಂತ್ರಿಗಳು, ಶಾಸಕರು ಎಂದು ಯೋಚಿಸದೆ ಎಲ್ಲರನ್ನೂ ಕರೆಸಿ ಕರೆಸಿ ದುಡ್ಡು ಬಾಚಿದರು. ಮಂಡಳಿ ಮತ್ತು ನಿಗಮಗಳ ನೇಮಕಾತಿಗಳಲ್ಲಿ ಸಹ ಕೈ ಆಡಿಸಿದ ಡಿಕೆಶಿ ಶೇಕಡ 5ರಷ್ಟನ್ನು ಮಾತ್ರ ಪಕ್ಷದ ಕಾರ್ಯಕರ್ತರಿಗೆ ಕೊಡಿಸಿ ಉಳಿದ ಪ್ರಮುಖ ಮತ್ತು ಆದಾಯಕಾರಿ ನಿಗಮ ಮತ್ತು ಮಂಡಳಿಗಳನ್ನು ಪಕ್ಷದ ಮನಿಮೆಂಟಾಲಿಟಿಯವರಿಗೆ ಮಾರಿಕೊಂಡಿದ್ದರ ಬಗ್ಗೆ ಭಾರೀ ಗೊಂದಲವಾಗಿತ್ತು.

ಮತ್ತೊಂದೆಡೆ ಒಕ್ಕಲಿಗರ ಏಕೈಕ ನಾಯಕ ನಾನೇ ಎಂದು ಬಿಂಬಿಸುವ ಆತುರದಲ್ಲಿ ಪಕ್ಷದಲ್ಲಿದ್ದ ಇತರೇ ಒಕ್ಕಲಿಗ ಮುಖಂಡರಾದ ತುಮಕೂರು ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಎಸ್.ಪಿ. ಮುದ್ದಹನುಮೇಗೌಡ, ಯುವ ಕಾಂಗ್ರೆಸ್ ಮಾಜಿ ಅಧ್ಯಕ್ಷ, ಆರ್. ಮಂಜುನಾಥ್, ಮಾಜಿ ಸಚಿವ ಟಿ.ಬಿ. ಜಯಚಂದ್ರ, ವಿಧಾನಪರಿಷತ್ ಸದಸ್ಯ ಎಂ. ಕೃಷ್ಣಪ್ಪ ಮುಂತಾದವರನ್ನು ಮಟ್ಟಹಾಕಲು ಹೋದ ಡಿಕೆಶಿ ಒಕ್ಕಲಿಗರ ವಿರೋಧವನ್ನು ಕಟ್ಟಿಕೊಳ್ಳಬೇಕಾಯ್ತು.

ಗ್ರಾಮಾಂತರ ಜಿಲ್ಲೆಯಿಂದ ಆಯ್ಕೆಯಾಗಿದ್ದರೂ ಬೆಂಗಳೂರು ನಗರ ಕಾಂಗ್ರೆಸ್ ರಾಜಕೀಯದಲ್ಲಿ ಕೈಯಾಡಿಸುವ ಚಾಳಿ ಬೆಳೆಸಿಕೊಂಡಿರುವ ಡಿ.ಕೆ.ಶಿವಕುಮಾರ್, ರಾಜಾಜಿನಗರ ಕ್ಷೇತ್ರದ ಶಾಸಕ ನರೇಂದ್ರಬಾಬುವಿನ ಅವರಸ ಮುಂಗಾಟಗಳಿಗೆ ನಿರಂತರ ಸಹಾಯ ಹಸ್ತ ನೀಡಿ ನಗರದ ಶಾಸಕರ ಮತ್ತು ನಗರ ಕಾಂಗ್ರೆಸ್ ಪಧಾದಿಕಾರಿಗಳ ವಿರೋಧವನ್ನು ಎದುರಿಸುತ್ತಿದ್ದಾರೆ. ರಾಜಾಜಿನಗರದ ದಾಸಾಶ್ರಮದ ಜಮೀನು ನುಂಗುವ ಏಕೈಕ ಉದ್ದೇಶದಿಂದ ಸುಬ್ರಹ್ಮಣ್ಯನಗರ ಪಾಲಿಕೆ ಸದಸ್ಯೆ ಪದ್ಮಾವತಿಗೆ ಬೆಂಬಲವಾಗಿ ನಿಂತಿರುವ ಶಿವಕುಮಾರ್, ರಾಜಾಜಿನಗರದ ಸಮಸ್ತ ಕಾಂಗ್ರೆಸ್ ಪಾಲಿಕೆ ಸದಸ್ಯರುಗಳ ಬೇಸರಕ್ಕೆ ಕಾರಣವಾಗಿದ್ದಾರೆ.

ಈಗ ಡಿ.ಕೆ.ಶಿವಕುಮಾರ್ ಪರವಾಗಿ ನಿಲ್ಲಬಲ್ಲ ಗಟ್ಟಿಯಾದ ನಾಯಕರ್‍ಯಾರು ರಾಜ್ಯದಲ್ಲಿಲ್ಲ. ಬೆನ್ನಹಿಂದಿರುವ ಮಾಗಡಿ ಎಚ್.ಎಂ. ರೇವಣ್ಣ ಮತ್ತು ರಾಮನಗರದ ಸಿ.ಎಂ. ಲಿಂಗಪ್ಪನಂತವರ ಬೆನ್ನುಮೂಳೆಯೇ ಗಟ್ಟಿ ಇಲ್ಲ. ಈ ಸಂದರ್ಭವನ್ನು ಬಳಸಿಕೊಂಡು ಶಿವಕುಮಾರರನ್ನು ಬಲಿಹಾಕಲು ಕಾಂಗ್ರೆಸ್ಸಿನ ಹಿರಿ-ಕಿರಿ ಪುಢಾರಿಗಳೆಲ್ಲಾ ಒಂದಾಗಿದ್ದು ಶುಭ ಮುಹೂರ್ತಕ್ಕಾಗಿ ಕಾದಿದ್ದಾರೆ. ಬೆಳಗಾವಿ ಅಧಿವೇಶನ ಕಳೆದ ನಂತರ ಯಾವುದೇ ಸಂದರ್ಭದಲ್ಲಿ ಈ ಮುಹೂರ್ತ ಒದಗಿ ಬರುವ ಸಂಭವವಿದೆ. ಆದರೆ ಮುಹೂರ್ತ ವಿಡುವವರು ಯಾರು?

ಚಿ.ಮೂ.ಗೆ ಬಾಧಿಸಿದ 'ಐತಿಹಾಸಿಕ ದೃಷ್ಟಿದೋಷ'


ಚಿದಾನಂದ ಮೂರ್ತಿಯವರು ಶಂಕರಮೂರ್ತಿಯವರ ಟಿಪ್ಪು ವಿರೋಧವನ್ನು ಬೆಂಬಲಿಸಿ ನೀಡಿರುವ ಹೇಳಿಕೆಯಲ್ಲಿ ಹಲವು ಐತಿಹಾಸಿಕ ದೃಷ್ಟಿ ದೋಷಗಳು ಮತ್ತು ಕೆಲವು ಅರ್ಧ ಸತ್ಯಗಳು ತುಂಬಿಕೊಂಡಿವೆ.

ಮೊದಲನೆಯದಾಗಿ ಟಿಪ್ಪುವಿನ ಆಡಳಿತ ಭಾಷೆ ಕೇವಲ ಪರ್ಷಿಯನ್ ಆಗಿತ್ತೆಂದು ಚಿ.ಮೂ. ಹೇಳುತ್ತಾರೆ. ಆದರೆ ಫ್ರಾಕ್ಸಿ ಫೆರ್ನಾಂಡೀಸ್ ಎಂಬ ಇತಿಹಾಸಕಾರ ಬರೆದಿರುವ ಪುಸ್ತಕ **Storm over Sriranga pattana: The incredible story of Hyder Ali and Tippu Sultan** ದ ಪುಟ 221 ರಲ್ಲಿ ದಾಖಲಿಸಿರುವಂತೆ ಹೈದರಾಲಿಯ ಆಡಳಿತದ ಎಲ್ಲಾ ದಾಖಲೆಗಳು ಪರ್ಷಿಯನ್, ಕನ್ನಡ ಮತ್ತು ಮರಾಠೀ ಭಾಷೆಗಳಲ್ಲಿ ಇರುತ್ತಿದ್ದವು. ಅಲ್ಲದೆ ನಿಖಿಲೇಶ್ ಗುಹಾ ಎಂಬ ಮತ್ತೊಬ್ಬ ಇತಿಹಾಸಕಾರರು ದಾಖಲಿಸಿರುವಂತೆ ಕೆಳ ಹಂತದ ನಾಯಕರು, ಮನ್ಸುಬ್‌ದಾರರು ದಿನನಿತ್ಯದ ವರದಿಗಳನ್ನು ಕನ್ನಡದಲ್ಲಿಯೇ ಸಲ್ಲಿಸಬೇಕಾಗಿತ್ತು.



ಚಿದಾನಂದ ಮೂರ್ತಿಯವರ ಮತ್ತೊಂದು ಆರೋಪವೆಂದರೆ ಪರ್ಷಿಯನ್ ಭಾಷೆ ತಿಳಿಯದ ಉನ್ನತ ಮಟ್ಟದ ಅಧಿಕಾರಿಗಳಿಂದಾಗಿ ಸಂಸ್ಥಾನದ ಆದಾಯ ಕುಸಿದಿತ್ತು ಎಂಬುದು. ಆದರೆ ಮಾರ್ಕ್ ವಿಲ್ಕ್ಸ್ ಎಂಬ ಇತಿಹಾಸಕಾರ ತನ್ನ **Report on interior administration, Resources expenditure of Mysore** ಎಂಬ ಪುಸ್ತಕದ ಪುಟ 56, 57 ರಲ್ಲಿ ದಾಖಲಿಸಿರುವಂತೆ ಹೈದರಾಲಿಗೆ ಮುನ್ನ ಮೈಸೂರು ಸಂಸ್ಥಾನದ ಒಟ್ಟಾರೆ ಆದಾಯ 1.29 ಕೋಟಿ ರೂಪಾಯಿಗಳಷ್ಟು ಮಾತ್ರ ಇತ್ತು. ಆದರೆ ಹೈದರಾಲಿ ಆಡಳಿತದಲ್ಲಿ ಕೇವಲ ನಂಜನಗೂಡು ತಾಲ್ಲೂಕಿನ ಆದಾಯವೊಂದೇ 3.30 ಕೋಟಿ ರೂಪಾಯಿಗಳಿಗೆ ಏರಿತ್ತು.

ಚಿದಾನಂದಮೂರ್ತಿಯವರು ಕುಹಕದಿಂದ ಹೇಳಿರುವಂತೆ 'ಈ ಆದಾಯ ಕುಸಿದಿದ್ದರಿಂದಾಗಿ ದೇವಸ್ಥಾನಗಳಿಗೆ ಟಿಪ್ಪು ಸುಲ್ತಾನ್ ದತ್ತಿಯನ್ನು ನಿಲ್ಲಿಸಿದ. ಆದರೆ ಫ್ರಾನ್ಸಿಸ್ ಬುಕಾನನ್ ಎಂಬ ಇತಿಹಾಸಕಾರ 1806 ರಲ್ಲೇ ದಾಖಲಿಸಿದ **A journey from Madras through contries of Mysore, Malabar and Cannerese** ನಲ್ಲಿ ಇರುವಂತೆ 1792 ರಲ್ಲಿ ಟಿಪ್ಪು ಜಾರಿಗೆ ತಂದ ಭೂಕಂದಾಯ ನಿಯಂತ್ರಣ ನೀತಿಯಂತೆ ಎಲ್ಲಾ ದೇವಸ್ಥಾನಗಳಿಗೂ ನೀಡಲಾಗಿದ್ದ ಭೂ ಕಂದಾಯ ಸಂಗ್ರಹಾಧಿಕಾರವನ್ನು ಮೊಟಕುಗೊಳಿಸಿದ್ದರ ಪರಿಣಾಮವಾಗಿ ದೇವಸ್ಥಾನದ ಆದಾಯ ಕುಸಿಯಿತು. ಏಕೆಂದರೆ ಮೇಲುಕೋಟೆಯ ದೇವಸ್ಥಾನವೊಂದರಲ್ಲಿಯೇ ಶ್ರೀ ವೈಷ್ಣವ ಬ್ರಾಹ್ಮಣರು 60,000 ಪಗೋಡಾಗಳಷ್ಟು ತೆರಿಗೆಯನ್ನು ರೈತರಿಂದ ವಸೂಲು ಮಾಡುತ್ತಿದ್ದರು. ಅದನ್ನು ಟಿಪ್ಪು ಕೇವಲ 1000 ಪಗೋಡಾಗಳಿಗೆ ಇಳಿಸಿದನು.



ಬುಕಾನನ್ ದಾಖಲಿಸುವ ಮತ್ತೊಂದು ಉದಾಹರಣೆಯೆಂದರೆ ನಂಜನಗೂಡಿನಲ್ಲಿ ಒಬ್ಬ ಒಡೆಯರ್‌ರ ಕಾಲದಲ್ಲಿ ಕೇವಲ 300 ಬ್ರಾಹ್ಮಣ ಕುಟುಂಬಗಳು ಹದಿನಾಲ್ಕು ಸಾವಿರ ಪಗೋಡಾಗಳಷ್ಟು ಆದಾಯವನ್ನು ಅನುಭವಿಸುತ್ತಿದ್ದವು. ಆದರೆ ಟಿಪ್ಪು ಅದನ್ನು ಕ್ರಮೇಣ 100 ಪಗೋಡಾಗೆ ಇಳಿಸಿದನು.

ಹೀಗಾಗಿ ದೇವಸ್ಥಾನಗಳ ಆದಾಯ ತಗ್ಗಿದ್ದು ಅವುಗಳ ಸುಲಿಗೆಯ ಮೇಲೆ ಟಿಪ್ಪು ಪ್ರಜ್ಞಾಪೂರ್ವಕವಾಗಿ ಹೇರಿದ ನಿಯಂತ್ರಣದಿಂದಲೇ ವಿನಃ ಟಿಪ್ಪುವಿನ ಅಧಿಕಾರಿಗಳಿಗೆ ಪರ್ಷಿಯನ್ ಬರುತ್ತಿರಲಿಲ್ಲ ಎಂಬ ಕಾರಣಕ್ಕಲ್ಲ.

ಇದೇ ರೀತಿ ಹಲವಾರು ದೇವಸ್ಥಾನಗಳನ್ನು ನಾಶ ಮಾಡಿದ ಆರೋಪವನ್ನು ಟಿಪ್ಪುವಿನ ಮೇಲೆ ಹೊರಿಸಿದ್ದಾರೆ. ಈಗಾಗಲೇ ಶೃಂಗೇರಿ ಮಠವನ್ನು ರಕ್ಷಿಸಿದ್ದರ ಬಗ್ಗೆ ಹಲವಾರು ಇತಿಹಾಸಕಾರರು ಹೇಳಿದ್ದಾರೆ. ಆದರೆ ಗಮನಿಸಬೇಕಾದ ಬಹುಪ್ರಮುಖವಾದ ಸಂಗತಿಯೆಂದರೆ ಟಿಪ್ಪುವಿನ ಪ್ರಮುಖ ಹನ್ನೆರಡು ಕಚೇರಿಗಳಲ್ಲಿ ದೇವಸ್ಥಾನ ನಿರ್ವಹಣಾ ಇಲಾಖೆಯೂ ಒಂದು. ಚಿದಾನಂದ ಮೂರ್ತಿಯವರು ಹಿಂದೂ ಸಾಮ್ರಾಟ ಹರ್ಷವರ್ಧನನ ಕಾಲದಲ್ಲಿ ದೇವೋತ್ಪಾಟನಾ ನಾಯಕನೆಂಬ ದಂಡಾಧಿಕಾರಿಯೊಬ್ಬನಿದ್ದ ಎಂಬುದನ್ನು ನೆನಪಿಸಿಕೊಂಡು ಟಿಪ್ಪುವನ್ನು ಅರ್ಥ ಮಾಡಿಕೊಳ್ಳಬೇಕು.

ಇದಲ್ಲದೆ ಟಿಪ್ಪುವಿನ ಕಾಲದಲ್ಲಿ ಹಿಂದೂ ಅಧಿಕಾರಿಗಳಿರಲಿಲ್ಲ ಎಂಬ ಆರೋಪವನ್ನು ಪದೇಪದೇ ಮಾಡಲಾಗುತ್ತದೆ. ಚಿದಾನಂದ ಮೂರ್ತಿಯವರೇ ಉಲ್ಲೇಖಿಸಿರುವ ಸಿ. ಹಯವದನರಾವ್ ಎಂಬ ಇತಿಹಾಸಕಾರರು ಬರೆದ **History of Mysore** ನ ಮೂರನೇ ಸಂಪುಟದಲ್ಲಿ ಹೈದರಾಲಿ ಮತ್ತು ಟಿಪ್ಪುವಿನ ಮಂತ್ರಿ ಮಂಡಲದಲ್ಲಿದ್ದವರ ದೊಡ್ಡ ಪಟ್ಟಿಯನ್ನೇ ನೀಡಲಾಗಿದೆ. ಅದು ಈ ಕೆಳಕಂಡಂತೆ ಇದೆ. ಪೂರ್ಣಯ್ಯ, ಸಲಾಬತ್ ಖಾನ್, ಷಣ್ಮುಖ ವೆಂಕಟಶೆಟ್ಟಿ, ಶರಾಫ್ ಶ್ರೀನಿವಾಸಯ್ಯ, ಮಹಮ್ಮದ್ ಗೌಸ್, ಆನಂದ ಶೆಟ್ಟಿ, ಮುಸ್ತಫಾ ಅಲೀಖಾನ್, ನರಸ ಶೆಟ್ಟಿ ಮತ್ತು ನಲ್ಲಪ್ಪ ಶೆಟ್ಟಿ.

ಇವೆಲ್ಲಕ್ಕಿಂತ ಮುಖ್ಯವಾಗಿ ಟಿಪ್ಪು ಕನ್ನಡ ದ್ರೋಹಿ ಎಂಬುದಕ್ಕೆ ಎಸ್.ಎಲ್. ಭೈರಪ್ಪ ಮತ್ತು ಚಿದಾನಂದಮೂರ್ತಿಯಂಥವರು ನೀಡುವ ಉದಾಹರಣೆಯೆಂದರೆ ಟಿಪ್ಪು ತನ್ನ ಆಡಳಿತದಲ್ಲಿ ಖಾತೆ, ಕಿರ್ದಿ, ಕಚೇರಿ, ಟಕಾವಿ ಎಂಬ ಪರ್ಷಿಯನ್ ಪದಗಳನ್ನು ಬಳಸಿದ್ದ ಎಂಬುದು. ವಾಸ್ತವವಾಗಿ ಯಾವುದೇ ಪದದ ಬಳಕೆ ಆ ವ್ಯವಸ್ಥೆಯಲ್ಲಿ ಆ ಪದದ ಉಪಯುಕ್ತತೆ ಇತ್ತೇ ಎಂಬುದನ್ನು ಅವಲಂಬಿಸಿರುತ್ತದೆ. ಉದಾಹರಣೆಗೆ ಟಕಾವಿ ಎಂದರೆ ರೈತರ ಬೆಳೆ ನಾಶವಾದಾಗ ಸರ್ಕಾರ ಕೊಡುತ್ತಿದ್ದ ಅನುದಾನ ಮತ್ತು ಬಡ್ಡಿ ರಹಿತ ಸಾಲ. ಅದೇ ರೀತಿ ಖಾತೆ ಎಂದರೆ ರೈತನೊಬ್ಬನ ಜಮೀನಿನ ಮೇಲಿನ ಒಡೆತನದ ದಾಖಲೆ. ಟಿಪ್ಪುವಿಗೆ ಮುಂಚೆ ರೈತನಿಗೆ ಜಮೀನಿನ ಒಡೆತನವಾಗಲಿ ಸರ್ಕಾರ ರೈತರಿಗೆ ಸಾಲ ಕೊಡುವಂಥ ವ್ಯವಸ್ಥೆಯೇ ಇರಲಿಲ್ಲ ಎಂಬುದು ಕಾದಂಬರಿಕಾರ ಭೈರಪ್ಪನವರಿಗೆ ಗೊತ್ತಿರಲಿಲ್ಲವಾದರೂ ಸಂಶೋಧನಕಾರ ಮತ್ತು ಭಾಷಾ ವಿಜ್ಞಾನಿಯೂ ಆದ ಚಿದಾನಂದಮೂರ್ತಿಗಳಿಗೆ ಗೊತ್ತಿರಬೇಕಿತ್ತು. ಹೀಗಾಗಿ ಖಾತೆ, ಟಕಾವಿಯಂಥ ಪದಗಳ ಅಗತ್ಯ ಟಿಪ್ಪುವಿಗೆ ಮುಂಚೆ ಈ ನಾಡನ್ನಾಳಿದ ಯಾವುದೇ ರಾಜ ವ್ಯವಸ್ಥೆಗೆ ಇರಲಿಲ್ಲ. ಹಾಗಾಗಿ ಅಂಥ ಅರ್ಥ ಕೊಡುವ ಪದಗಳೂ ಆ ಕಾಲದ ಆಡಳಿತ ಪದಕೋಶಕ್ಕೆ ಸೇರಿರಲಿಲ್ಲ.

ಖಾತೆ, ಕಿರ್ದಿ ಎಂಬ ಪದಗಳು ಶಂಕರಮೂರ್ತಿ ಮತ್ತು ಚಿದಾನಂದ ಮೂರ್ತಿಯವರಗೆ ಎಷ್ಟೇ ಅಸಹನೀಯವಾದರೂ ರೈತರಿಗೆ ಆಪ್ಯಾಯಮಾನವಾಗುತ್ತವೆ. ಅದೇ ರೀತಿ ಟಿಪ್ಪು ಹಾಗೂ ಹೈದರಾಲಿ ಕೂಡಾ ಆಪ್ತರಾಗುತ್ತಾರೆ. ಈ ಕಾರಣಕ್ಕಾಗಿ ಇಡೀ ಕರ್ನಾಟಕದ ಜನತೆಯನ್ನೇ ಚಿದಾನಂದಮೂರ್ತಿಯವರು ಕನ್ನಡ ದ್ರೋಹಿಗಳೆಂದು ಕರೆಯಬಾರದಷ್ಟೇ.

ವಾಸ್ತವವಾಗಿ ಇತಿಹಾಸದಲ್ಲಿ ಟಿಪ್ಪುವನ್ನು ವಿರೋಧಿಸಿದವರು ಬ್ರಿಟಿಷರು ಹಾಗೂ ಪುರೋಹಿತ ಶಾಹಿಗಳು. ಏಕೆಂದರೆ ಟಿಪ್ಪು ಮಾಡಿದ್ದು ಕೇವಲ ಸಾಮ್ರಾಜ್ಯ ವಿಸ್ತರಣೆಯಲ್ಲ. ಆವರೆಗೆ ಶೂದ್ರ ರೈತಾಪಿಗಳನ್ನು ಸುಲಿಗೆ ಮಾಡುತ್ತಿದ್ದ ಪುರೋಹಿತಶಾಹಿ ಮತ್ತು ಊಳಿಗಮಾನ್ಯ ಶಕ್ತಿಗಳ ಒಂದು ಪದರವನ್ನೇ ನಿರ್ನಾಮ ಮಾಡಿದ. ಇತಿಹಾಸದಲ್ಲಿ ಮೊಟ್ಟ ಮೊದಲ ಬಾರಿಗೆ ತನ್ನ ಸೈನ್ಯವನ್ನು ಸೇರಿದ್ದ ಒಂದೂವರೆ ಲಕ್ಷಕ್ಕೂ ಹೆಚ್ಚು ಬೇಡ, ಕುರುಬ, ಈಡಿಗ, ಹೊಲೆಯ, ಮಾದಿಗ, ಒಕ್ಕಲಿಗ ಸಮುದಾಯಗಳಿಗೆ ಸೇರಿದ ರೈತರಿಗೆ ಜಮೀನಿನ ಒಡೆತನವನ್ನು ನೀಡಿದ. ಆ ಮೂಲಕ ಅವರ ಬದುಕಿಗೆ ಬೆಳಕಾದ. ಹೀಗಾಗಿ ಅಂದಿಗೂ ಇಂದಿಗೂ ಟಿಪ್ಪು ಪುರೋಹಿತಶಾಹಿಗಳ ವೈರಿಯಾಗಿಯೇ ಮುಂದುವರಿದಿದ್ದಾನೆ. ಶಂಕರಮೂರ್ತಿ, ಎಸ್.ಎಲ್. ಭೈರಪ್ಪ ಹಾಗೂ ಚಿದಾನಂದಮೂರ್ತಿಯವರ ಅಸಹನೆಗಳಿಗೆ ಈ ಐತಿಹಾಸಿಕ ಕಾರಣಗಳಿವೆ ಎಂಬುದನ್ನು ಕನ್ನಡ ನಾಡಿನ ಜನತೆ ಅರಿಯಬೇಕು.


-ಕೆ.ಎಲ್. ಅಶೋಕ್

ಸಾಮಾನ್ಯ ಕನಿಷ್ಟ ಕಾರ್ಯಕ್ರಮ ಅಂದ್ರೇನ್ಲ?

ಬೆಳಗಾವಿಗೆ ವಿಧಾನ ಸಭೆಯನ್ನು ಹೊತ್ತುಕೊಂಡು ಹೋಗಿದ್ದಾರೆ ಎಂಬ ಕುತೂಹಲದ ವಿಷಯದ ಪರಿಣಾಮವನ್ನು ತಿಳಿದುಕೊಳ್ಳಲು ಕಾಳಮಾವ ಉತ್ಸುಕನಾಗಿದ್ದ. ಅದರಂತೆ ಉಗ್ರಿ ಬಂದ ಕೂಡಲೇ,

"ಬೆಳಗಾವಿ ಸಭೆಲಿ ಏನು ಮಾಡಿದರ್ಲ ಉಗ್ರಿ?" ಎಂದ.

"ಏನೂ ಮಾಡಲಿಲ್ಲ ಕಣಮಾವ, ಇಲ್ಲಿ ಜಗಳ ತಗಂಡೋಗಿ ಅಲ್ಲಿ ಮಾಡಿಕಂಡು ಇನ್ನು ವಸಿ ಮಿಗಿಸಿಗಂಡು ಬಂದವೆ."



"ಅಷ್ಟೆ ಅಂತಿಯಾ?"

"ಊ, ಹರಿಯ ಮುರಿಯ ಜಗಳಾಡಿಕಂಡಿದ್ದು ಬುಟ್ರೆ ಇನ್ನೇನು ಮಾಡದಂಗೆ ಯಲ್ಲಾ ವಂಟು ಬಂದವೆ."

"ಮತ್ತೇನೊ ಬೆಳಗಾವಿಲಿ ಕಡದೆತ್ತಾಕ್ತಿವಿ ಅಂತ ಹೋಗಿದ್ರು" ಎಂದ ಸೀರ.

"ಅಲ್ಲ ಕಣಮಾವ, ಇಲ್ಲಿ ಮಲ ಹಿಡಿಯಕ್ಯಾಗದೆಯಿರೊ ನಾಯಿ ಬೆಳಗಾವಿಲಿಡದತೆ? ಅಂಗಾಯ್ತು ಇವುರ ಕತೆ."

"ಮತ್ಯಾಕೆ ತರಿಯಕ್ಹೋಗಬೇಕಾಗಿತ್ತೆ ಅಲ್ಲಿಗೆ?"

"ಹೋದ್ರು, ಆ ಮಾರಾಷ್ಟ್ರದ ಬಡ್ಡೆತ್ತವು ಬೆಳಗಾವಿ ಬಾಡ್ರಿಗೆ ಬಂದು ಗುಟರಾಕ್ತಿದ್ದವಂತೆ."

"ಏನಂತವಾ?"

"ಬೆಳಗಾವಿ ಜಿಲ್ಲೆಯ ನಮಿಕ್ಕೊಡಿ, ಕೊಡದಿದ್ರೆ ಕಿತಗತಿವಿ ಅಂತವ"

"ಏನು ಶಾಟ ಕಿತಗಂಡರವುರು, ಸುಮ್ಮನಿದ್ದೊರ ಶಾಟ ಊರ್‍ನಲ್ಲ ಕಿತಗಂಡ್ರು ಅಂತವ ನಾವು ಸುಮ್ಮನಿರೋವತ್ಗೆ ಅಲವೆ ಈ ನನ ಮಕ್ಕಳು ಹೆಚ್ಚಗಂಡಿರದು" ಎಂದು ಸೀರ ಸಿಟ್ಟಾದ.

"ಏ, ಅದೇನು ಇವತ್ತಿನ ಸಮಸ್ಸೆ ಅಲ್ಲ ಕಣೊ, ಬಾಳ ಹಿಂದಿನಿಂದ ಅದೆ. ಮಾರಾಷ್ಟ್ರದಲ್ಲಿ ಯಕರ ಮುಂಡೆಮಕ್ಕಳು ಅಧಿಕಾರಕ್ಕೆ ಬಂದಾಗ್ಯಲ್ಲ ಅದ ಕೆದುಕ್ತರೆ."

"ಕೆದುಕ್ತರೆ ಅಂತ ಅಂಗೆ ಬುಟಗಂಡೋಗಬಾರ್ದು ಕಂಡ್ಯ. ಆ ಕಡೆಯೋರು ಈ ಕಡಿಯೋರ ಕರದು ಅಳದು ಕಲ್ಲಾಕಿ ಇದು ನಮ್ಮ ಜಾಗ, ಅದು ನಿಮ್ಮ ಜಾಗ ಅಂತ ತೀರ್ಮಾನ ಮಾಡಿ ಬುಡಬೇಕು" ಎಂದ ಕಾಳಮಾವ ಜಮೀನು ಅಳತೆ ವಿಷಯದಂತೆ ಸರಾಗವಾಗಿ ಹೇಳಿದ.

"ಸಮಸ್ಯೆ ನೀನೇಳೊ ತರನೂ ಇಲ್ಲ ಕಣಮಾವ, ಈ ಕರ್ನಾಟಕದೋರು ಬೆಂಗಳೂರನೆ ಇಂದ್ರಲೋಕ ಮಾಡಿಕಂಡು ಬೆಳಗಾವಿ ಕಡೆ ಹಳ್ಳಿಯ ಮರುತುಬುಟ್ರು. ಅಲ್ಲಿ ಇಸುಗೂಲಿಲವಂತೆ, ಆಸುಪತ್ರೆ ಇಲವಂತೆ, ರಸ್ತೆ ಇಲವಂತೆ. ಕೇಳೋರು ದಿಕ್ಕಿಲವಂತೆ. ಅದು ಅಲ್ದೆ ಅಲ್ಲಿ ಜನ ಯಲ್ಲಾ ತುಕೂ ಬೊಂಬಾಯಿಗೆ ಹೋಗಂಗಾಯ್ತು. ಅವರು ಈ ಕರ್ನಾಟಕವ ಮರಯಕ್ಕೆ ಸುರು ಮಾಡಿದ್ರು."

"ಓಹೊಹೊ ಕ್ಕರೆ ಅಚ್ಚುಗಟ್ಟನಲ್ಲಿ ಕಡೆಗದ್ದೋರಾಗಿ ಬುಟ್ರು ಅನ್ನು?"

"ಊ, ಕಡೆಗದ್ದೆ ಮಡಿಕಂಡೋನಿಗೆ ಯಾರು ನೀರು ಬುಟ್ಟರೂ? ಅಗೊ ಅಂಗೆ. ಅಲ್ಲಿ ಜನ ಮರಾಠಿ ಜನಗಳ ಜ್ಯತೆ ಸೇರಿಕಂಡು ಕನ್ನಡನೂ ಮರಿಯಕ್ಕೆ ಸುರು ಮಾಡಿದ್ರು."

"ಆದೋ ಮಾತು ಬದ್ಲಾದ ಮ್ಯಾಲೆ ಅವುರ್‍ಯಾಕಿಲ್ಲಿದ್ದರೇಳು?"

"ಊ ಕನ್ನಡ ಮಾತಾಡೋರು ಕಡಿಮಾಗಿದ್ದರಂತೆ. ಪರಿಸ್ಥಿತಿ ಈ ಮಟ್ಟಕೆ ಹೋಗಿರುವಾಗ ಇಲ್ಲಿಂದ ಅಲ್ಲಿಗೆ ಇದಾನಸಭೆ ತಗಂಡೋದೋರು ಏನು ಮಾತಾಡಬೇಕಪ್ಪ?"

"ಇನ್ನೇನು ಮಾತಾಡ್ಯರು, ಬೆಳಗಾವಿ ಸಮಸ್ಯೆ ಏನದೆ ಅದ ಕುಂತು ಮಾತಾಡಿ ಸರಿಮಾಡಿ ಬರಬೇಕು."

"ಈ ಮುಂಡ್ಯತ್ತವು ಬೆಳಗಾವಿ ಸಮಸ್ಯೆಯ ಅಪ್ಪಿತಪ್ಪಿ ಮಾತಾಡಲಿಲವಂತೆ?"

"ಅಯ್ಯೋ ಮಾವ, ಟಿವಿಲಿ ನೋಡಬೇಕಾಗಿತ್ತು ನೀನು. ನಮ್ಮ ಪಂಚಾತಿ ಸಭೆಯ ಏಟೊ ಮಾನ ಮರಿಯಾದಿ ಇಟಗಂಡು ನ್ಯಡುಸ್ತಿವಿ. ಬೆಳಗಾವಿ ಇದಾನ ಸಭೆಲಿ ಅವುನ್ಯಾವನೋ ಕೂಗತಿದ್ದ ಅಂದ್ರೆ ಅಂಗಿಂಗಲ್ಲ. ನಾನು ಇವುನ್ಯಾಕೆ ಸೇರಿಸ್ಯವುರೆ ಅದರ್‍ವಳಿಕೆ ಅಂತ ಉಗ್ರಿ ಕೇಳಿದೆ ಕಣಮಾವ. ಅವುನು ಎಮ್ಮೆಲ್ಲೆ ಅಂದ್ರು. ಒಂಥರಾ ಯಮ್ಮಿದ್ದಂಗವುನೆ" ಎಂದಳು ಜುಮ್ಮಿ.

"ಅವುನು ವೆಂಕಟೇಶ್ ಕಣೆ. ಅವುನು, ಚೆನ್ನಿಗಪ್ಪ, ಜಿ.ಟಿ. ದ್ಯಾವೇಗೌಡ, ರೇವಣ್ಣ ಇವುರ್‍ನಲ್ಲ ಒಂತಾಯಿ ಮಕ್ಕಳಿದ್ದಂಗೆ. ಕುಮಾರಸ್ವಾಮಿ ವಿಷಯ ತಗುದ್ರು ಸಾಕು ನಾಯಿ ಬಿದ್ದಂಗೆ ಬೀಳತರೆ ಮ್ಯಾಲೆ."

"ಇವುರವುತಾರ ನೋಡಿ ಬೆಳಗಾವಿ ಜನ ಏನನ್ನಕಂಡ್ರೊ ಏನೊ?"

"ಅನ್ನಕಳದೇನು ಇಂತ ಜಗಳ ಆಡಕ್ಕೆ ಇಲ್ಲಿಗಂಟ ಬರಬೇಕಾಗಿತ್ತೆ ಈ ಬಡ್ಡೆತ್ತವು, ಅನ್ನಕಂಡಿರತರೆ."

"ಅಂಗರೆ ಬೆಳಗಾವಿಗೆ ಏನು ಮಾಡಬೇಕು ಅಂತ ತೀರ್ಮಾನ ತಗಳ್ಳಿಲವೇನ್ಲ?"

"ತಗಳದೇನು? ಮಾತೆತ್ತಿದರೆ ಎಡೂರಪ್ಪ ನೂರಾರು ಕೋಟ ಮಾತಾಡ್ತನೆ. ಅಂಗೆ ಬೆಳಗಾವಿಗೂ ಒಂದು ಸವುರು ಕೋಟ ಕೊಡ್ತಿನಿ ಅಂದವುನೆ. ಆದೇನಾಯ್ತದೆ ಅಂತ ಗೊತ್ತಿಲವೆ?" ಎಂದು ಉಗ್ರಿ ಹೇಳುತ್ತಿರುವಾಗ ಕಾಣಿಸಿಕೊಂಡ ವಾಟಿಸ್ಸೆ,

"ಬಲು ಅಪರೂಪ ನಂಜೋಡಿ
ಎಂತಹ ಕೆಲಸಕು ನಾವ್ ರೆಡಿ
ಬೆಳಗಾವಿಗೋಗಿ ನಾವು
ಸೀಡಿ-ಸೀಡಿ ಜಗಳ ಆಡಿ
ಬೇಗನೆ ಬೆಂಗಳೂರಾದಿ
ಹಿಡಿದೇವು. ಬಲು ಅಪರೂಪ ನಂಜೋಡಿ.
ಯಂಗದ್ಯಕ್ಕ ಹಾಡು?"

"ಇದ್ಯಾವುದ್ಲ ಹಾಡು ವಚ್ನೆ ಹೇಳಿಕಂಡು ಬತ್ತಿಯಲ್ಲ?" ಎಂದಳು ಜುಮ್ಮಿ...

"ಇದು ಕುಮಾರಸ್ವಾಮಿ ಎಡೂರಪ್ಪ ಕೈ ಹಿಡಕಂಡು ಮೇಲೆತ್ತಿ ತಗಿಸಿಗಂಡಿರೊ ಪೋಟಾ ನೋಡಿದಾಗ್ಲಿಂದ ಹೇಳ್ತಾಯಿರೊ ಹಾಡು ಕಣಕ್ಕ. ನೋಡಕ್ಕ ಪೋಟಾ ಯಂಗದೆ?"

"ಅದ್ಯಾಕಿಂಗೆ ತಗಿಸಿಗಂಡವುರ್ಲ?" ಎಂದಳು ಜುಮ್ಮಿ.

"ಇದು ಸಾಮಾನ್ಯ ಕನಿಷ್ಠ ಕಾರ್ಯಕ್ರಮದ ಸಕ್ಸಸ್ ಪೋಟ ಅಂತೆ ಕಣಕ್ಕ."

"ಅದ್ನೆ ಕೇಳನಾ ಅಂತಿದ್ದೆ ನಾನು, ಸಾಮಾನ್ಯ ಕನಿಸ್ಟ ಕಾರ್ಯಕ್ರಮ ಅಂದ್ರೇನ್ಲ?"

"ಅಯ್ಯೋ ಅಷ್ಟು ಗೊತ್ತಿಲವೇನಕ್ಕ. ಇಷ್ಟೊತ್ತಿಗೆ ಗೊತ್ತಾಗಬೇಕಾಗಿತ್ತಲ್ಲ ನಿನಿಗೆ?"

"ಅದ್ಯಂಗೆ ಗೊತ್ತಾಗಬೇಕ್ಲ?"

"ಓಹೊ ಆ ವರಕು ಕಣ್ಣಿಗೆ ಕಾಣದಿಲ್ಲ. ಅದ್ಕೆ ನಿನಿಗೆ ಇಲ್ಲಿವರಿಗೂ ಗೊತ್ತಾಗಿಲ್ಲ. ಸಾಮಾನ್ಯ ಕನಿಷ್ಠ ಕಾರ್ಯಕ್ರಮ ಅಂದ್ರೆ, ಏನವ್ವ ಅಂದ್ರೇ, ಮೂಲಭೂತ ಸೌಕರ್ಯಗಳ ಕಾರ್ಯಕ್ರಮ ಅಂತ."



"ಅದೇನು ಸರಿಯಾಗೇಳ್ಳ ಅಣಕ ವಡಿಬ್ಯಾಡ."

"ಸಾಮಾನ್ಯ ಕನಿಷ್ಠ ಕಾರ್ಯಕ್ರಮ ಅಂದ್ರೆ ಅಕ್ಕ, ಸಾವಮಾನ್ಯ ಜನರಿಗೆ ಅನ್ನದ ಸಮಸ್ಯೆಯಿಲ್ಲದಂಗೆ ಮಾಡಬೇಕು, ವಸತಿ ಸಮಸ್ಯೆಯಿಲ್ಲದಂಗೆ ಮಾಡಬೇಕು, ಅಕ್ಷರ ಜ್ಞಾನ ಕೊಡಬೇಕು. ಆದ್ರೆ ನಮ್ಮ ಈ ಅಪರೂಪದ ಜೋಡಿ ಟೀಮಿಗೆ ಅದ್ಯಲ್ಲ ಇದೆ."

"ಇಲ್ದೆಯಿರದ್ಯಾವುದು?"

"ಅದನ್ನೆ ಪೂರೈಸಿಗೊತ್ತಾ ಅವುರೆ. ರಾಜಕಾರ... ಮಾಡಕ್ಕೆ ಏನು ಬೇಕೇಳು?"

"ಅಧಿಕಾರ ಬೇಕು."

"ಪರವಾಗಿಲ್ಲ ನೀನು ತಿಳಕಂಡಿದ್ದಿ, ಆ ಅಧಿಕಾ... ಪ್ರಾಪ್ತಿಯಾಗಬೇಕಾದ್ರೆ ಹಣ ಬೇಕು ಅಂತ ಈ ಅ... ರೂಪದ ಜೋಡಿ ತಿಳಕಂಡಿರದ್ರಿಂದ, ಸಾವಿರಾರು ಕೋ... ಯೋಜನೆ ರೂಪುಸ್ತಾ ಅವುರೆ. ನೂರಾರು ಕೋ... ವಡಿತಾ ಅವುರೆ. ಕುಮಾರಸ್ವಾಮಿ ಭೂಮಿ ಕೊಂ... ಅಂತ ಎಡೂರಪ್ಪ ಕೊಳ್ಳದು, ಅವುರು ಕೊಂಡ್ರು ಅ... ಇವುರು, ಇವುರು ಕೊಂಡ್ರು ಅಂತ ಅವುರು. ಈ... ಈ ಅಪರೂಪದ ಜೋಡಿ ಮಿನಿಮಮ್ ಕಾಮ... ಪ್ರೊಗ್ರಾಮಾಯ್ಕಂಡು ಹಣ ಆಸ್ತಿ ಅಡವು ಮಾಡಿಕಂ... ಸಕ್ಸಸ್ಸಾಗಿರದ್ರಿಂದ್ಲೆ ಈ ತರ ಪೋಟಾ ತಗದು ಪೇಪ್... ಕೊಟ್ಟವುರೆ ಕಣಕ್ಕ."

"ಆ ಬಡ್ಡೆತ್ತುದ್ದು ಹೇಳ್ತದೆ ಅಂತ ನೀನು ಕೇ... ಕುಂತಿದ್ದಿಯಲ್ಲೇ ಅದು ಬಾಯಿಗೆ ಬಂದಿದ್ನೆ ಹೇಳ್ತದ..." ಎಂದ ಕಾಳಮಾವ.

"ದ್ವಡಪ್ಪ ನನ್ನ ಮಾತು ಸುಳ್ಳಾಗಿದ್ರೆ ಬೆಳಗಾ... ಅಧಿವೇಶನದಲ್ಲಿ ಬೆಳಗಾವಿ ಸಾಮಾನ್ಯ ಕನಿಷ್ಠ ಕಾರ್ಯಕ್ರಮ ಚರ್ಚೆ ಮಾಡಬೇಕಾಗಿತ್ತು. ಮಾಡಿದ್ರಾ? ಇ... ಬೆಳಗಾವಿಗೆ ಸವುರಕೋಟ ಕೊಡ್ತಿನಿ ಅಂದವುನೆ ಎಡೂರಪ್ಪ, ಸವುರ ಕೋಟ ಎಲ್ಲಿಂದ ತತ್ತನೇ? ತಿರಿಗಿಬು... ಜಿಲ್ಲೆಗೆಲ್ಲಾ ಸವುರ ಕೋಟ ಕೊಡ... ಹೋದ್ರೆ ಆ ದುಡ್ಡು ಎಲ್ಲಿಂದ ತತ್ತಿ... ಯಂಗೆ ಖರ್ಚು ಮಾಡ್ತೀರಿ. ಅಧಿಕಾ... ಗಳಿಗಂತೂ ಹಬ್ಬ ಕಣೊ ಉಗ್ರಿ."

"ಅಧಿಕಾರಿಗಳಿಡಿಯಕ್ಕೆ ಅವುನ್ಯಾರು... ಯಗ್ಗೆ ಅಂತ ಬಂದವುನಲ್ಲ ತಗ... ಹಿಡಿತನೆ."

"ಅವುನೆ, ಅವುನು ಅಧಿಕಾರಿಗ... ಲಂಚ ಹ್ವಡಿದಂಗೆ ಮನುಸು ಬದ್ಲಾಸ್ತನಂತೆ ಮನಸ. ಹಿಂಗೂ ತಮಾಷಿ ಮಾಡ್ತರೇನೊ?"

"ಯಂಕಂಡಿದ್ದಿ? ಬದ್ಲಾಸಬವುದು..."

"ಅಲ್ಲಾ ಕಣೊ ಉಗ್ರಿ, ಸರ್ಕಾರದ... ಎಷ್ಟಿಲಾಕೆ ಅವೆ ಎಷ್ಟು ಜನ ಭ್ರಷ್ಟರವು... ಅವುರನ್ಯಲ್ಲ ಕೂರಿಸಿಗಂಡು ಇವು... ಸೈಕಾಲಜಿ ಪಾಠ ಮಾಡಕ್ಯಾದತೇನ... ಅಂತೂ ಎಡೂರಪ್ಪನ ಸಾವುರಾರು ಕೋ... ಕಾರ್ಯಕ್ರಮದಿಂದ ಅಧಿಕಾರಿಗಳಿಗ... ಕಣೊ. ನಾವು ಸರ್ಕಾರಿ ಕ್ಯಲಸಕ್ಕಾದ... ಸೇರಲಿಲ್ಲ, ಬ್ಯಾಡಲಕ್ಕು."

"ಈಗ್ಲು ಸೇರಲ?"

"ಯಾವ ಕೆಲಸ ಕೊಡುಸ್ತಿಯಕ್ಕ?"

"ಕುಮಾರಸ್ವಾಮಿಗೇಳಿ ಅವುರಾಪೀಸಲ್ಲಿ ಕುಂತಿರ... ಒಂದು ಕ್ಯಲಸ ಕೊಡುಸ್ತಿನಿ."


"ಊಟ ತಿಂಡಿ ಕೊಟ್ರು, ಕೈಗೆ ಸವುರ ಕೊಟ್ರು... ಆ ಕ್ಯಲಸ ಬ್ಯಾಡ."

" !"

–ಬಿ. ಚಂದ್ರೇಗೌ...

Zero Hour ಮುನ್ನಿ

1. "ಬಜೆಪಿ ಶೋಭಾಯಾತ್ರೆ ಮಾಡಿದರೆ ದೋಸ್ತಿ ಖತಂ...." ಎಂದು ದೇವೇಗೌಡರು ಉತ್ತರ ಭಾರತದಲ್ಲಿ ಹೇಳಿದ್ದಾರೆ.
   ತೀರ್ಮಾನ 1: ಶೋಭಾಯಾತ್ರೆ ಮಾಡಲು ಯತ್ನಿಸಿ ಗಲಾಟೆ ಎಬ್ಬಿಸಿದರೆ ದೋಸ್ತಿ ಖತಂ ಇಲ್ಲ.
   ತೀರ್ಮಾನ 2: ಏಯ್ ಮುನ್ನಿ, ಆ ಮುದುಕ ತಾಸಿಗೊಂದು ಮಾತಾಡುತ್ತೆ, ಅಧಿಕಾರ ಇದ್ರೆ ಸಾಕು ಆತಂಗೆ!
   a) ತೀರ್ಮಾನ (1) ಸರಿ
   b) ತೀರ್ಮಾನ (2) ಸರಿ
   c) ಎರಡೂ ಸರಿ ಅಲ್ಲ
   d) ಎರಡೂ ಸರಿ



2. ಬೆಳಗಾವಿ ಅಧಿವೇಶನ ಕುರಿತು ನೀವೇನು ಹೇಳ್ತೀರಾ?
   a) ಬೆಳಗಾವಿಯಲ್ಲಿ ಬೆಪ್ಪರ ಬಯಲಾಟವದು
   b) ಕುಂದಾ, ಕರದಂಟು ತಿಂದು, ಗ್ಹೋಷ್ಠಾದ ಬೇಚ್‌ಗಳಲ್ಲಿ ಮಿರದೆದ್ದವರು....
   c) ಕೆ.ಎಲ್.ಇ. ಕೋರೆಯ ಕಬಳಿಕೆಗೆ ಗ್ರೀನ್ ಸಿಗ್ನಲ್ ಸಿಕ್ಕಾಯ್ತು....
   d) ಹಳ್ಳಿ ಹಳ್ಳಿಯಲ್ಲಿ ಮಲಗೋ ಹಾಗೇ, ಊರೂರುಗಳಲ್ಲಿ ಅಧಿವೇಶನವಂತೆ!



3. ಶಂಕರಮೂರ್ತಿ ಬೆನ್ನಿಗೆ ಚಿ.ಮೂ. ನಿಂತವರಲ್ಲ?
   a) ಚೆಡ್ಡಿಗಳ ಬೆನ್ನು ತುರಿಸುವ ಕೆಲಸ ಮಾಡ್ತಿರಬೇಕು
   b) ಇವರಿಬ್ಬರ ಬೆನ್ನು ತಟ್ಟಲು ಭೈರ್ಸ್ ಸಹ ಬಂದಾಯ್ತು
   c) ಚಿ.ಮೂ.-ಶಂ.ಮೂ ಸಹೋದರರಿದ್ದಂತೆ!
   d) ಹಂಪಿಯಲ್ಲಿ ನದಿಗೆ ಬೀಳಲು ಹೋದಾಗ ತಡೆದದ್ದೇ ತಪ್ಪಾಯ್ತೇನೊ?

4. ಮುಖ್ಯಮಂತ್ರಿ ಚಂದ್ರು ಗಡಿಯಲ್ಲಿ ಕನ್ನಡ ಜಾಥಾ ಮಾಡುತ್ತಂತೆ.. ಸರೀನಾ?
   a) ಐ ಬಿಡು ಬಿಡು, ಆ ಕಮಂಗಿ ಗಡಿಯಲ್ಲೇ ಮಡಿದು ಹೋಗಲಿ
   b) ಜನ ಡಬಲ್ ಮೀನಿಂಗ್ ಡೈಲಾಗ್‌ಗೆ ಒತ್ತಾಯ ಮಾಡ್ತಿದಾರಂತೆ
   c) ಒತ್ತಾಯವೇನು ಬಂತು, ಈ ಕಪಿ ಮಾತಾಡೋದೆಲ್ಲ ಡಬಲ್ ಮೀನಿಂಗೇ!
   d) ಚೆಡ್ಡಿ ತೊಟ್ಟು ಭಾಷಣ ಮಾಡುತ್ತೇನೋ ಕಮಂಗಿ?

5. ಗುಂಪಿಗೆ ಸೇರದವರನ್ನು ತೆಗೆದು ಕಾರಣ ಕೊಡಿ



ಕಾಸರವಳ್ಳಿ, ಸೀತಾರಾಮ್, ಭೈರಪ್ಪ ಚಿದಾನಂದಮೂರ್ತಿ, ಚೆನ್ನಿಗಪ್ಪ, ದೇವೇಗೌಡ...
   a) ದೇವೇಗೌಡ... ಸೆಕ್ಯುಲರ್ ಅಲ್ವಾ?
   b) ಕಾಸರವಳ್ಳಿ... ಗ್ರೇಟ್ ಡೈರೆಕ್ಟರು....
   c) ಚಿದಾನಂದಮೂರ್ತಿ... ಚೆಡ್ಡಿ ತೊಟ್ಟ ಲಿಂಗವ...
   d) ಪಾಪ, ಚೆನ್ನಿಗಪ್ಪನೇ ವಾಸಿ... ಆತ ಬರೀ ಭ್ರಷ್ಟ, ಚೆಡ್ಡಿಯಲ್ಲ ಬಿಡು....


ಉತ್ತರಗಳು : (1) d (2) d (3) c (4) d (5) d


ಆತನಿಗೆ ಇಪ್ಪತ್ತು ವರ್ಷ, ಆತನ ಎದುರಾಳಿಗೆ 22 ವರ್ಷ. ಬೋರಿಸ್ ಬೆಕರ್ ಮತ್ತು ಸ್ಟೀಫಾನ್ ಎಡ್‌ಬರ್ಗ್. ಜರ್ಮನಿಯ ಬೆಕರ್ ಹದಿನೇಳನೇ ವಯಸ್ಸಿಗೆ ವಿಂಬಲ್ಡನ್ ಟೆನಿಸ್ ಪಂದ್ಯದಲ್ಲಿ ಗೆದ್ದ, ಮತ್ತೆ ಹದಿನೆಂಟಕ್ಕೆ ಕೋಟ್ಯಾಧೀಶನಾದ. ಜರ್ಮನಿಯನ್ನು ಬಿಟ್ಟು ಮಾಂಟೇಕಾರ್ಲೋಗೆ ಹೋಗಿ ನೆಲಸಿ ತನ್ನ ಐಶ್ವರ್ಯ ಕಂಡುಕೊಂಡು ಖೇದಗೊಂಡ, ಮುದಗೊಂಡ, ತನ್ನ ಏಜಂಟ್ ಬದಲಿಸಿದ; ತನ್ನ ಟ್ರೈನರ್‌ನನ್ನು ತಿರಸ್ಕರಿಸಿದ. ಹತ್ತೊಂಭತ್ತನೇ ವಯಸ್ಸಿನಲ್ಲಿ ಮೂರನೇ ಬಾರಿಗೆ ವಿಂಬಲ್ಡನ್ ಗೆಲ್ಲಲು ಯತ್ನಿಸಿ ಸೋತ. ಆತನಿಗೆ ಅದೇನೋ ಆಗಿ ಹೋಗಿತ್ತು. ಸಿರಿಯ ಗರ? ಸೌಖ್ಯದ ಕಾಯಿಲೆ? ಯಶಸ್ಸಿನ ದೌರ್ಬಲ್ಯ? ಮೊನ್ನೆ ನಾಲ್ಕನೆ ಬಾರಿಗೆ ವಿಂಬಲ್ಡನ್ ಗೆಲ್ಲಲು ಯತ್ನಿಸಿ ನನ್ನಂಥ ಅವನ ಅಭಿಮಾನಿಗಳಿಗೆ ನಿರಾಶೆಯಾಗುವಂತೆ ಸೋತ.


ಇವನನ್ನು ಸೋಲಿಸಿದ ಎಡ್‌ಬರ್ಗ್‌ಗೆ 22 ವರ್ಷ. ನೀವು ಬಲ್ಲ ಯಶಸ್ವೀ ಕಲಾವಿದ, ಕವಿ, ನಿರ್ದೇಶಕ, ಆಟಗಾರನತ್ತ ಒಮ್ಮೆ ನೋಡಿ. ಆತ ತನ್ನ ಇಪ್ಪತ್ತೆರಡು, ಇಪ್ಪತ್ಮೂರನೆ ವಯಸ್ಸಿನಲ್ಲಿ ತನ್ನ ಪ್ರತಿಭೆಯ ತೇಜಸ್ಸು ಹೊಮ್ಮಿಸಿರುತ್ತಾನೆ. ವರ್ಡ್ಸ್‌ವರ್ತ್, ಕೀಟ್ಸ್, ಮೈಕೆಲೆಂಜಲೋ, ಪಿಕಾಸೋ ಎಲ್ಲರೂ ತಮ್ಮ 22ರತ್ತ ನೋಡುತ್ತಾರೆ. ಅದು ಪ್ರತಿಭಾವಂತನ ನಿರ್ಣಾಯಕ ಘಟ್ಟ. ಹದಿಹರಯದ ಗೊಂದಲ, ತಳಮಳ ಮುಗಿದಿರುತ್ತದೆ; ಪ್ರಬುದ್ಧನ ಶಕ್ತಿ ಉಕ್ಕತೊಡಗುತ್ತಿರುತ್ತದೆ: ಆಳದ ತನ್ನತನ ರೂಪುಗೊಳ್ಳತೊಡಗಿರುತ್ತದೆ. ಆದ್ದರಿಂದ ಎಡ್‌ಬರ್ಗ್ ಗೆದ್ದರೂ ಗೆಲ್ಲಬಹುದೆಂದು ಅನ್ನಿಸಿತ್ತು. ಈತ ಬೆಕರ್ ತರಹ ವರ್ಣರಂಜಿತನಲ್ಲ, ಲೆಂಡಲ್ ತರಹ ಸಮನ್ವಯದ, ಸ್ತಿಮಿತದ ಹುಡುಗ. ತೆರಿಗೆಯಿಂದ ತಪ್ಪಿಸಿಕೊಳ್ಳಲು ಮಾಂಟೇಕಾರ್ಲೋಗೆ ಓಡದೆ ಸ್ವೀಡನ್ನಿನ ಈತ ಇಂಗ್ಲೆಂಡಿನಲ್ಲಿ ತಂಗಿದ್ದ. ವಿದ್ಯಾರ್ಥಿಯೊಬ್ಬನ ಏಕಾಗ್ರತೆ, ಶಿಸ್ತಿನಿಂದ ಟೆನ್ನಿಸ್ ಅಭ್ಯಸಿಸಿದ. ಏಕಾಂಗಿಯಾಗಿ ಧ್ಯಾನಿಸಿದ, ಕನಸಿದ. ಆಗಲೇ ಗಳಿಸಿದ್ದ ಕೊಪ್ಪರಿಗೆ ಹಣದ ಮದ ತಲೆಗೆ ಹೋಗದಂತೆ ನೋಡಿಕೊಂಡ. ತನ್ನ 22-23ನೇ ವಯಸ್ಸಿಗೆ ತನ್ನ ಶಕ್ತಿ ಹುರಿಗೊಳ್ಳುವಂತೆ ನೋಡಿಕೊಂಡ.

"23"

ಬೆಕರ್‌ನ ಕೋಲ್ಮಿಂಚಿನ ಜಾಣ್ಮೆ, ಎಡ್‌ಬರ್ಗ್‌ನ ಹಣತೆಯಂತಹ ಬುದ್ಧಿವಂತಿಕೆ. ಬೆಕರ್‌ಗೆ ಇಪ್ಪತ್ತು ವರ್ಷ, ಆಗಲೇ ಎರಡು ಸಲ ವಿಂಬಲ್ಡನ್ ಗೆದ್ದಿದ್ದಾನೆ. ಆಗಲೇ ಈತನ ವ್ಯಕ್ತಿತ್ವದ ಸಂಪತ್ತು ಖಾಲಿಯಾಗುತ್ತಿರಬಹುದೆ? ಈತನ 23ನೇ ಮೈಲಿಗಲ್ಲು ಹದಿನೆಂಟಕ್ಕೇ ಬಂದು ಹೋಗಿದೆಯೇ? ನೋಡಬೇಕಾಗಿದೆ.







ಜುಲೈ 17, 1988

ಸೈನಿಕ ಮತ್ತು ಸೋಮಾರಿ

ಮೊನ್ನೆ ಪಂಜಾಬ್‌ನ ಗಡಿಯಲ್ಲಿ ಕಾರ್ಯಾಚರಣೆಯಲ್ಲಿರುವ ನಮ್ಮ ಸೈನಿಕರನ್ನ ಟಿ.ವಿಯಲ್ಲಿ ತೋರಿದರು. ನೀವು ಹಲವು ಸಲ ಸೈನಿಕರನ್ನು, ನಮ್ಮ ರಕ್ಷಣೆಯಲ್ಲಿ ತೊಡಗಿರುವ ಯೋಧರನ್ನು ನೋಡಿದ್ದೀರಿ. ಅವರನ್ನು ನೋಡಿದಾಗಲೆಲ್ಲ ನನ್ನನ್ನು ಚಕಿತಗೊಳಿಸುವ ವಿಷಯವೊಂದಿದೆ. ಅದು, ಸೈನ್ಯದಲ್ಲಿನ ಅತ್ಯಂತ ಕೆಳದುಳ್ಳದ ಜವಾನ ಕೂಡ ಆದಷ್ಟೂ ಸ್ಪಷ್ಟವಾಗಿ ಮಾತಾಡುತ್ತಾನೆ. ಆತನ ವಾಕ್ಯಗಳಲ್ಲಿ ಅನಗತ್ಯ ಓರೆಕೋರೆಗಳು, ಶಬ್ದಗಳು ಇರುವುದಿಲ್ಲ, ಅವನ ಜೀವನ ಶೈಲಿಯಲ್ಲಿ ಕೂಡ. ಚೊಕ್ಕಟವಾದ ಬಟ್ಟೆ, ದೇಹ, ಪರಿಸರ ಇರುತ್ತದೆ. ಶಿಸ್ತು ಎಲ್ಲರಿಗೆ ಇದ್ದಿದ್ದರೆ ಎಷ್ಟು ಚೆಂದ ಅನ್ನಿಸುತ್ತದೆ- ಆದರೆ ನಾಗರಿಕ ಜೀವನದ ಸೊಗಸೇ ಅತೀ ಶಿಸ್ತು ಇಲ್ಲದಿರುವುದು. ಸೈನಿಕ ಅತ್ತ ಇತ್ತ ನೋಡುವುದಿಲ್ಲ; ಆಜ್ಞೆಯನ್ನು ಪಾಲಿಸಲು ಹರಿತವಾದ ಕತ್ತಿಯಂತೆ ವರ್ತಿಸುತ್ತಾನೆ. ಸಾಕ್ಷೀಪ್ರಜ್ಞೆ, ಅನುಮಾನ, ಆಕ್ಷೇಪಣೆ, ಮಾನವೀಯತೆ- ಯಾವುದೂ ಅವನಲ್ಲಿ ಇರುವಂತಿಲ್ಲ; ಆಜ್ಞೆ ಪಾಲಿಸಲೇಬೇಕು. ಆದ್ದರಿಂದಲೇ ಸೈನಿಕರ ವಶಕ್ಕೆ, ಆಡಳಿತಕ್ಕೆ ಒಂದು ರಾಜ್ಯವನ್ನು ಒಪ್ಪಿಸಲು ಹಿಂಜರಿಯುತ್ತಾರೆ. ಥೇಟ್ ಸೈನಿಕನಂತಿರುವ ನಾಗರಿಕ ಥೇಟ್ ಯಂತ್ರವಾಗುತ್ತಾನೆ.



ಆದರೆ ಒಮ್ಮೊಮ್ಮೆ ಅನ್ನಿಸುತ್ತದೆ. ನಮ್ಮ ಜನರ ಚಲನವಲನ, ವರ್ತನೆ, ಪ್ರಮಾಣ ಯಾವುದಕ್ಕೂ ಗುರಿಯೇ ಇರುವಂತಿಲ್ಲ, ಬಸ್ಸಿಗೆಂದು ಪೂರ್ವ ದಿಕ್ಕಿಗೆ ಹೊರಟು ಪಶ್ಚಿಮದತ್ತ ತಿರುಗಿ ನಡೆದು, ಸುತ್ತಿ ಬಸ್ ತಲುಪುತ್ತೇವೆ. ಜಗಲಿಯಲ್ಲಿ ಹರಟೆಗೆ ಕೂತಾಗಲೂ ಆತನ ಆಳದ ಅಶಿಸ್ತು, ಜೋಭದ್ರಗೇಡಿತನ ಹೊರಸೂಸುತ್ತಿರುತ್ತದೆ. ಈ ಜನಕ್ಕೆ ಒಂದೇ ಒಂದು ಸಲ-ಸಾಧ್ಯವಾದರೆ ದಿನಕ್ಕೊಂದು ಸಲ-ಸಾಲಾಗಿ ನಿಂತು ತಮ್ಮ ಹೆಸರು, ವಿಳಾಸ, ಅವತ್ತಿನ ಕೆಲಸದ ಬಗ್ಗೆ ತಿಳಿಸಲು ಒತ್ತಾಯ ತರುವುದಾದರೆ... ಕಾಲ, ಸ್ಥಳ, ಉದ್ದೇಶ ಸ್ಪಷ್ಟವಾಗುತ್ತವೆ.

ಇದು ಆರೆಸೆಸ್ ರೀತಿಯಲ್ಲ, ಆರೆಸೆಸ್ ಬುದ್ಧಿ, ಆರೆಸೆಸ್ ಕವಾಯತು ಶಿಸ್ತಿನವಲ್ಲ, ಗೊಂದಲವನ್ನ ಹೆಚ್ಚಿಸುವ ಕ್ರಿಯೆಗಳು.

ಪೂರ್ಣ ಶಿಸ್ತುಳ್ಳ ಮನುಷ್ಯ ಯಂತ್ರವಾದರೆ ಶಿಸ್ತೇ ಇಲ್ಲದ ಮನುಷ್ಯ ಬೆನ್ನೆಲುಬು ಕಳೆದುಕೊಳ್ಳುತ್ತಾನೆ. ಎಲುಬಿಲ್ಲದ ಜನರ ಮಾತು, ಚಲನೆಯನ್ನ ನೀವು ಬಲ್ಲಿರಿ.

ಹಣ್ಣು ಮಾಗಿದರೆ... ಸವಿ ಹೆಚ್ಚು! ಹೆಣ್ಣು?

ಡಿ.ಎಲ್. ನಾಗರಾಜ್, ಹರಪನಹಳ್ಳಿ
ನನಗೆ-ನೀನು, ನಿನಗೆ ನಾನು, ನಮಗೆ?
* ಶ್ವೇತಾ ಮತ್ತು ಸುರೇಶ್ ಎಂಬ ತುಂಟ ಮಕ್ಕಳು

ಒದುಸಿದ್ದೇಗೌಡ, ಕೆಬ್ಬೇಹಳ್ಳಿ
ಮೈಸೂರು ಹುಲಿ 'ಮೂರ್ತಿಗಳ' (ಚಿದಾನಂದ + ಶಂಕರ) ಹೆಗಲೇರಿದ್ದಾನಂತೆ?
* ಅದಕ್ಕೆ ಈ ಸುಂಡಿಲಿಗಳು ಬೊಬ್ಬೆ ಹಾಕ್ತಿರೋದು ಗೊತ್ತಾ?

ಶಿವಕುಮಾರ, ಶೋರಾಪೂರ
ನಾಡಿಗೂ-ಮಿಡಿಗೂ ಎಂಥಾ ಸಂಬಂಧ?
* ಮಿಡಿ ಚಿಕ್ಕದಾದಷ್ಟೂ ನಿಮ್ಮ ನಾಡಿ ಬಡಿತ ಹೆಚ್ಚಾಗುತ್ತದೆ.

ಸುಫೀಯಾ ಬೇಗಂ, ದೇವದುರ್ಗ
ನಮ್ಮ ಭಾರತ ಎಂದು ಹೇಳಿಕೊಳ್ಳಲು ಯಾವುದಾದರೂ ಹೆಮ್ಮೆಯ ವಿಷಯ ಇದೆಯೇ?
* ಸುಫೀಯಾ ಬೇಗಂನಂತಹ ಸಿಸ್ಟರ್ಸ್ 'ನಮ್ಮ ಭಾರತ' ಅಂತಾರಲ್ಲ, ಅದಕ್ಕಿಂತ ಹೆಮ್ಮೆ ಏನೊಂದಿರುತ್ತಾ?

ಅನಾರ್ಕಲಿ ಸಲೀಂಚಿಣ್ಯ, ಶ್ರೀರಂಗಪಟ್ಟಣ
ಈಗೀಗ ಜಾಸ್ತಿ ಆಕ್ಸಿಡೆಂಟ್ ಆಗ್ತಿರೋದು ಲೇಡಿಸಿಂದ್ಲೆ, ಅಂತಾದ್ರಲ್ಲಿ ಲೇಡೀಸು ಆಕ್ಸಿಡೆಂಟ್ ಮಾಡದಿಲ್ಲ ಅಂತ ಉಗ್ರಿ ಹೇಳೌನಲ್ಲ?
* ಲೇಡಿಸಿಂದ್ಲೆ ಆಗುವುದಕ್ಕೂ, ಲೇಡಿಸೇ ಮಾಡುವುದಕ್ಕೂ ವ್ಯತ್ಯಾಸ ಗೊತ್ತಿಲ್ಲೋದ್ರಿಂದ.

ಎಸ್.ವಿ. ಹಾಲಪ್ಪ, ಶಿವಮೊಗ್ಗ
ಕಾಂಗ್ರೆಸ್ 'ಮಲೇರಿಯಾ', ಬಿಜೆಪಿ 'ಕ್ಯಾನ್ಸರ್', ಜೆಡಿಎಸ್?
* ಪರ್ಸನಾಲಿಟಿ ಡಿಸಾರ್ಡರ್!

ಕೆ. ಶ್ರೀನಿವಾಸ್, ಮಂಡ್ಯ
ಕುಮಾರಸ್ವಾಮಿ ಆಡಳಿತವನ್ನು ಯಾವುದಕ್ಕೆ ಹೋಲಿಸಬಹುದು?
* ಗಮಾರಸ್ವಾಮಿಗೆ.

ಕೆ.ವಿ. ಶಿವಕುಮಾರ್, ಕಾಳೀಹುಂಡಿ
ಹುಟ್ಟು ಉಚಿತ, ಸಾವು ನಿಶ್ಚಿತ, ಪ್ರೀತಿ?
* ಅದೃಷ್ಟ ಇದ್ದರೆ ಲಿಖಿತ!

ಡಿ.ಎಲ್. ಚಂದ್ರಿಕಾ, ಹರಪನಹಳ್ಳಿ
ಲಗ್ನವಾದದ್ದು ರಾತ್ರಿ, ಬಸಿರಾದದ್ದು ನಡುರಾತ್ರಿ, ಹೆರಿಗೆ ಆದದ್ದು?
* ಜ್ಯೋತಿಷಿ ಹೇಳಿದ ಸಿಜೇರಿಯನ್ 'ಶುಭ' ಗಳಿಗೆಯಲ್ಲಿ



ಆರ್. ಗೋವಿಂದರಾಜು, ಬೆಂಗಳೂರು
ರೆಡ್ಡಿಯ ಸೀಡಿಯಿಂದಾಗಿ ಕಾಂಗ್ರೆಸ್ಸಿನವರು "ಸೀಡಿ ಈಸ್ ದಿ ಸಿಕ್ರೆಟ್ ಆಫ್ ಅವರ್ ಎನರ್ಜಿ" ಎನ್ನುತ್ತಿದ್ದಾರಂತಲ್ಲ?
* ಅಷ್ಟೇ ಅಲ್ಲ, 'ಏ ದಿಲ್ ಮಾಂಗೆ ಮೋರ್' ಅಂತಾನೂ ಧರ್ಮು ಸೇರಿಸುತ್ತಿದ್ದಾರಂತೆ



ಜಿ.ಎನ್. ಪ್ರಸನ್ನಕುಮಾರ್, ತುಮಕೂರು
"ತನನಂ ತನನಂ" ಅಂದ್ರೆ 'ಪ್ರೀತಿ' ಕಣೋ! ಅಂತಿದಾಳೆ?
* ಉಹೂಂ... 'ಪ್ರೀತಿಯ ಪಲ್ಲವಿ' ಅಂತ ಹೇಳುತ್ತಿದ್ದಾಳೆ ಬೇಬಿ (ಕವಿತಾ)

ಬಿ.ಎಸ್. ಇಮ್ಮಾನುವೇಲ, ಮಸರಕಲ
ಹರಿಜನ ಮನೆಯಲ್ಲಿ ವಸತಿ ಮಾಡಿ ಏನೇನ್ ಕಂಡಿ....?
* ಕುಂ.. ತೊಳೆದುಕೊಳ್ಳೋ ಕೊಠಡಿ ಕಂಡಿ(?)

ಪಿ.ಜಿ. ಅನುಪಮ, ಅಜ್ಜೀಹಳ್ಳಿ
ಮನುಷ್ಯನಲ್ಲಿ ನಾಯಿಯ ನಿಯತ್ತು ಬರಬೇಕೆಂದರೆ ಏನು ಮಾಡಬೇಕು?
* ಆಯ್ಯೋ, ಚೆನ್ನಿಗಪ್ಪನೇ ಹಂಗೆ ವದರಿದ ಮೇಲೆ ಈ ಪ್ರಶ್ನೆಗೆ ಉತ್ತರಿಸೋದು ಹೇಗೆ?

ರವೀಂದ್ರನಾಥ ಶಿ. ಯದಹಳ್ಳಿ, ಇಲಕಲ್ಲ
ಹೋರಿಗೆ ಸಿಟ್ಟು ಬರುವುದು ಕೆಂಪು ಬಟ್ಟೆಯನ್ನು ಕಂಡಾಗ, ರಾಜಕಾರಣಿಗಳಿಗೆ ಸಿಟ್ಟು ಬರುವುದು...?
* 'ಲಂಕೇಶ್' ಓದಿದಾಗ

ರಾಮುಗೌಡ ಜಿ. ತಳವಾರ, ಬೆಳಗಾವಿ
ಪೆಪ್ಸಿಯ ಸೀರೆ ಇಂದ್ರಮ್ಮನ ಡಾಲರ್ ಧರ್ಮಕ್ಕೂ, ಗೌರಿ ಲಂಕೇಶರ ಪತ್ರಿಕಾ ಧರ್ಮಕ್ಕೂ ವ್ಯತ್ಯಾಸವೇನು?
* ಅದು 'ಪೆಪ್ಸಿ'(ಸ್ಪೈಡ್) ಕೊಲಾ, ಇದು ನೆಲಮಂಗಲದ ಎಳನೀರು!

ಬಹುಮಾನಿತ ಪ್ರಶ್ನೆ

ಅಕ್ಷಯಕುಮಾರ, ಸುರಪೂರ
ಹಣ್ಣು ಮಾಗಿದರೆ... ಸವಿ ಹೆಚ್ಚು! ಹೆಣ್ಣು?
* ಅಷ್ಟು ಸಿಹಿ ಅಲ್ಲದಿದ್ದರೂ, ತಿನ್ನುತ್ತಲೇ ಇರಬೇಕೆನ್ನಿಸುವ ಗೋಡಂಬಿ ತರಹ!

ಛೀ ತುಂಟಿ!

ಆತ ಅತ್ಯಂತ ನಾಚಿಕೆಯ ಸ್ವಭಾವದ ವ್ಯಕ್ತಿ. ಮದುವೆಯಾಗಿದ್ದರೂ ನಾಚಿಕೆ ಹೋಗಿರಲಿಲ್ಲ. ದೊಡ್ಡ ಹುದ್ದೆಯಲ್ಲಿದ್ದ ಕಾರಣ ಟೂರ್ ಮಾಡಬೇಕಾಗುತ್ತಿತ್ತು. ಒಮ್ಮೆ ಆರು ದಿನವೆಂದು ಟೂರ್ ಹೋದವನು ಮೂರೇ ದಿನಕ್ಕೆ ಬಂದ. ಬಾಗಿಲನ್ನು ಸ್ವಲ್ಪವೇ ಸರಿಸಿ ನೋಡಿದಾಗ ತನ್ನ ಮಡದಿ ಬೇರೊಬ್ಬನೊಂದಿಗೆ ಮೋಜು ನಡೆಸುತ್ತಿರುವುದು ಕಂಡಿತು.

"ಏಯ್ ಯಾರೋ ನೀನು ಇಲ್ಲೇನು ಮಾಡುತ್ತಿದ್ದಿ?" ಎಂದು ಅಬ್ಬರಿಸಿ ಕೇಳಿದ.



ತಕ್ಷಣವೇ ಸುಖದ ಉತ್ತುಂಗದಿಂದ ಜಾರಿದ ಹೆಣ್ಣು ಗಂಡ ಎದುರು ನಿಂತಿರುವುದನ್ನು ನೋಡಿ, ಸ್ವಲ್ಪವೂ ಅಳುಕದೆ "ನೀವೇನು ಮಾಡಬೇಕಿತ್ತೋ? ಮಾಡಲಿಲ್ಲವೋ, ಅದನ್ನು ಮಾಡುತ್ತಿದ್ದಾರೆ" ಎಂದಳು.

ನಮ್ಮ ಪ್ರಶ್ನೆಗೆ ನಿಮ್ಮ ಉತ್ತರ!!

ವಾರದ ಪ್ರಶ್ನೆ:

ಬೆಳಗಾವಿಯಲ್ಲೂ ಬೆತ್ತಲಾಯ್ತಲ್ಲ ಈ ಸರಕಾರ?

ಸೆಪ್ಟೆಂಬರ್ 27ರ ಸಂಚಿಕೆಯ ನಮ್ಮ ಪ್ರಶ್ನೆ: ಸಮಸ್ಯೆ ಇದ್ದ ಕಡೆಗಳಲೆಲ್ಲಾ ಮಲಗುವ ಮುಖ್ಯಮಂತ್ರಿ ಮಲೆನಾಡಿನಲ್ಲೇಕೆ ಮಲಗುತ್ತಿಲ್ಲ?


ನಿಮ್ಮ ಉತ್ತರ: ಎಲ್ಲಾ ಖದೀಮರಿಗೂ ನಕ್ಸಲರ ಬಗ್ಗೆ ಇರುವ ಸಹಜವಾದ ಭೀತಿಯಿಂದ.

ಉತ್ತರ ಕಳುಹಿಸಿ ಬಹುಮಾನ ಪಡೆದಿರುವವರು: ಎಚ್.ಸಿ. ಭಾಗ್ಯಕುಮಾರ್, ಬೆಂಗಳೂರು


ಕಬಡ್ಡಿ ಬಾಬು, ದಯಾನಂದ ಪೈ, ಮಂತ್ರಿ ಅಶೋಕ್ ಮತ್ತು ಐಎಎಸ್ ಅಧಿಕಾರಿ?

ಕಾಡು ನುಂಗಿದ ಕಳ್ಳರು


'ಲಂಕೇಶ್' ಮಾಡಿದ್ದ ಸ್ಕೂಪ್!




ಡೀಲು ಕುದುರಿಸಲು ಹೋಗಿ ಸಿಕ್ಕಿ ಬಿದ್ದ ನಾರಾಯಣಗೌಡ



ವಂಚಕ ಜೋಡಿ ಚಂದ್ರಶೇಖರ್ ಮತ್ತು ವೇದಾಚಲಂ



ಬ್ರೋಕರ್ ಯೋಗೇಶ್



ಬೋಗಸ್ ರೆಕಾರ್ಡ್ಸ್ ಮೋಹನ್ ಬೋವಿ

ಹೆಣ್ಣು ಮೆದ್ದವರೆಲ್ಲ ಹಾಯಾಗಿದ್ದಾರೆ. ಸಿಪ್ಪೆ ತಿಂದವರು ಸಿಕ್ಕಿಬಿದ್ದಿದ್ದಾರೆ!

ತುರಳ್ಳಿ ಕಿರು ಅರಣ್ಯಕ್ಕೆ ಬೋಗಸ್ ದಾಖಲೆ ಸೃಷ್ಟಿಸಿ ಆಂಧ್ರದ ಬಿಲ್ಡರ್‌ಗೆ ಮಾರಿದ ಆರೋಪದ ಮೇಲೆ ತಲಘಟ್ಟಪುರ ಪೊಲೀಸರು ಹಿಡಿದು ಜೈಲಿಗೆ ದಬ್ಬಿದವರ ಪೈಕಿ ಮುಖ್ಯಮಂತ್ರಿಯ ಆಪ್ತ ಕಬಡ್ಡಿ ಬಾಬು ಹೆಸರೇನಾದರೂ ಕಾಣುತ್ತಾ ಎಂದು ತಲೆಕೆರೆದುಕೊಂಡವರ ಬಾಯಿಂದ ಬಂದ ಉದ್ಗಾರವಿದು!

ಹೋಗಲಿ ಭೂಕಂಟಕ ದಯಾನಂದ ಪೈ, ಐಎಎಸ್ ಅಧಿಕಾರಿ ಪ್ರಭಾಕರಪ್ಪ, ಆಂಧ್ರದ ಖದೀಮ ಚಂಗಂನಾಯ್ಡು, ಕುಖ್ಯಾತ ಲಾಂಡ್ ಗ್ರ್ಯಾಬರ್ ಚಂದ್ರಶೇಖರ್, ಸ್ಪೆಷಲ್ ತಹಶೀಲ್ದಾರ್ ಸದಾನಂದಪ್ಪ ಇತ್ಯಾದಿ ಅತಿರಥ ಮಹಾರಥರ ಹೆಸರಾದರೂ ತುರಳ್ಳಿ ಕಾಡುಗಳ್ಳರ ಪಟ್ಟಿಯಲ್ಲಿರಬೇಕಿತ್ತಲ್ಲ? ಯಾರೋ ಅಬ್ಬೇಪಾರಿ ರೈತರನ್ನು ಹಿಡಿದು ಜೈಲಿಗೆ ಹಾಕಿ ತುರಳ್ಳಿ ಕಾಡನ್ನು ಉಳಿಸ್ತೀವಿ ಎನ್ನುವ ಕುಮಾರಸ್ವಾಮಿ ಸರ್ಕಾರದ ಪ್ರಾಮಾಣಿಕತೆ ಪ್ರಶ್ನಾರ್ಥಕ ಚಿಹ್ನೆಯಾಗುವುದೇ ಈ ಹಂತದಲ್ಲಿ.

ತುರಳ್ಳಿ ಕಾಡಿಗೆ ನಕಲಿ ದಾಖಲೆ ಸೃಷ್ಟಿಸಿ ಬಿಲ್ಡರುಗಳಿಗೆ ಮಾರುವ ಷಡ್ಯಂತ್ರಕ್ಕೆ ಅಚಾನಕ್ಕಾಗಿ ಸಿಕ್ಕಿಬಿದ್ದವರು ಸಾರಿಗೆ ಕಮಿಷನರ್ ನಾರಾಯಣ ಗೌಡ. CNN-IBN ಸುದ್ದಿ ಚಾನಲ್ಲಿನ ಚೆನ್ನೈ ವರದಿಗಾರ ವೇದಾಚಲಂ ಮತ್ತು ಬೆಂಗಳೂರಿನ ವರದಿಗಾರ್ತಿ ದೀಪಾ ಬಾಲಕೃಷ್ಣನ್ ಸೇರಿ ನಡೆಸಿದ sting operation ನ (ಕುಟುಕು ಕಾರ್ಯಾಚರಣೆ) ವೀಡಿಯೋ ಸಮೇತ ವರದಿಯನ್ನು ಈಗಾಗಲೇ ದೇಶಾದ್ಯಂತ ಜನ ನೋಡಿದ್ದಾರೆ. ಆದರ ಸೀಡಿ ಹಿಡಿದೇ ವಿರೋಧ ಪಕ್ಷದ ನಾಯಕ ಎಚ್.ಕೆ. ಪಾಟೀಲ್ ಬೆಳಗಾವಿ ಅಧಿವೇಶನದಲ್ಲಿ ಗುಡುಗಿದ್ದಾರೆ. ಮುಖ್ಯಮಂತ್ರಿ ಕುಟುಂಬದ ಪರಮಾಪ್ತ ಅಧಿಕಾರಿ ನಾರಾಯಣ ಗೌಡ ತುರಳ್ಳಿ ಕಾಡಿನ ಡೀಲು ಕುದುರಿಸುತ್ತಿರುವುದು, ಅದಕ್ಕೆ ಎನ್ನಾರೈ ಅಮರನಾಥ ಗೌಡರೇ ಸೂಕ್ತ ಎಂದು ಸಲಹೆ ಕೊಟ್ಟಿದ್ದು ಮತ್ತು ಇದೆಲ್ಲವನ್ನೂ CNN-IBN ನ ರಹಸ್ಯ ಕ್ಯಾಮೆರಾ ಚಿತ್ರೀಕರಿಸಿಕೊಂಡಿದ್ದು ಇಡೀ ಕರ್ಮಕಾಂಡಕ್ಕೊಂದು ಹೊಸ ಆಯಾಮವನ್ನು ಕಲ್ಪಿಸಿದ್ದು ಎಷ್ಟು ಸತ್ಯವೋ ಈ ಹಗರಣವನ್ನು ಮೊದಲು ಬಯಲಿಗೆಳೆದದ್ದು 'ಲಂಕೇಶ್' ಎಂಬುದು ಕೂಡ ಅಷ್ಟೇ ಸತ್ಯ.

2006 ರ ಜೂನ್ 21 ರ 'ಲಂಕೇಶ್' ಸಂಚಿಕೆಯಲ್ಲಿ 'ಆರೋಗ್ಯ ಮಂತ್ರಿಗೆ ಭೂರೋಗ' ಎಂಬ ಹೆಡ್ಡಿಂಗ್‌ನ ಅಡಿಯಲ್ಲಿ ಮೊದಲ ಬಾರಿಗೆ ತುರಳ್ಳಿ ಕಾಡು ಕಬಳಿಕೆಯನ್ನು ಪತ್ರಿಕೆ ವರದಿ ಮಾಡಿತ್ತು. ಉತ್ತರಹಳ್ಳಿ ಶಾಸಕ ಮತ್ತು ಆರೋಗ್ಯ ಮಂತ್ರಿ ಆರ್. ಅಶೋಕ್ ಮತ್ತು ಭೂವಂಚಕ ದಯಾನಂದ ಪೈ ಸೇರಿಕೊಂಡು ಸಾವಿರ ದಿನ್ನೂರು ಕೋಟಿ ಮೌಲ್ಯದ ಈ ಕಾಡನ್ನು ನುಂಗಿ ಹಾಕಲು ನಡೆಸುತ್ತಿದ್ದ ಎಲ್ಲಾ ವಿವರಗಳನ್ನು ಬಗೆದಿಡಲಾಗಿತ್ತು. ದುರಂತವೆಂದರೆ ವಿರೋಧಿ ಕಾಂಗ್ರೆಸ್ ಸೇರಿದಂತೆ ಯಾವೊಬ್ಬ ಶಾಸಕನೂ ಪತ್ರಿಕೆಯ ತನಿಖಾ ವರದಿಯ ಈ ಬಗ್ಗೆ ತಲೆ ಕೆಡಿಸಿಕೊಳ್ಳಲಿಲ್ಲ.

ತುರಳ್ಳಿ ಅರಣ್ಯ ಭೂಮಿ ಕಬಳಿಕೆಯ ಸಂಪೂರ್ಣ ವಿವರ

ವಿಧಾನಸೌಧದಿಂದ ಕೇವಲ ಹದಿನಾಲ್ಕು ಕಿ.ಮೀ. ದೂರದ ತುರಳ್ಳಿ ಕಾಡು ಕಬ್ಬನ್‌ಪಾರ್ಕ್ ಮತ್ತು ಲಾಲ್‌ಬಾಗ್ ನಂತರ ಬೆಂಗಳೂರಿಗೆ ಅತ್ಯಗತ್ಯವಾಗಿದ್ದ 'ಶ್ವಾಸಕೋಶ'ವೆಂದೇ 'ಲಂಕೇಶ್' ಪ್ರತಿಪಾದಿಸಿತ್ತು. ಆರೋಗ್ಯ ಮಂತ್ರಿ ಅಶೋಕ್ ತನ್ನ ಬಂಟರನ್ನು ಛೂ ಬಿಟ್ಟು ಅದನ್ನು ಮಾರಿಕೊಳ್ಳದಂತೆ ಛೀಮಾರಿ ಹಾಕಿತ್ತು. ಅಷ್ಟೇ ಏಕೆ: ಕಳೆದ ಸಂಚಿಕೆಯಲ್ಲಿ ಮುಖ್ಯಮಂತ್ರಿಯ ಆಪ್ತ ಕಬಡ್ಡಿಬಾಬು ಇದೇ ತುರಳ್ಳಿ ಕಾಡಿನ ಮತ್ತೊಂದು ಭಾಗವನ್ನು ಆಕ್ರಮಿಸಿ ಅರಣ್ಯಾಧಿಕಾರಿಗಳ ಕೈಗೆ ಸಿಕ್ಕಿಬಿದ್ದಿದ್ದರ ಕುರಿತೂ ವರದಿ ಮಾಡಿತ್ತು.

ಬೇರೆ ಯಾವುದೇ ಪತ್ರಿಕೆ, ಯಾರೇ ಶಾಸಕ ಈ ಬಗ್ಗೆ ತಲೆ ಕೆಡಿಸಿಕೊಳ್ಳದೇ ಹೋದರೂ CNN-IBN ಸುದ್ದಿ ವಾಹಿನಿಯ ವರದಿಗಾರ್ತಿ ದೀಪಾ ಬಾಲಕೃಷ್ಣನ್ 'ಲಂಕೇಶ್' 2006 ರ ಜೂನ್ 21 ರ ಸಂಚಿಕೆಯ ತನಿಖಾ ವರದಿಯನ್ನೇ ಆಧಾರವಾಗಿಟ್ಟುಕೊಂಡು ಕಾರ್ಯಾಚರಣೆಗಿಳಿದರು. ಅದರ ಫಲಶೃತಿಯ... ಸಾರಿಗೆ-ಕಮಿಷನರ್ ನಾರಾಯಣಗೌಡರ ಸೀಡಿ.

ಇದೆಲ್ಲವನ್ನೂ ಒತ್ತಟ್ಟಿಗಿಟ್ಟು ತುರಳ್ಳಿ ಕಾಡಿಗೆ ಗಂ... ಬಿದ್ದ ಭೂಗಳ್ಳರ ಮರ್ಮವನ್ನೇ ಕೆದಕುತ್ತಾ ಹೋರ... ಅಂತಿಮವಾಗಿ ಮುಖ್ಯಮಂತ್ರಿ ಕುಮಾರಸ್ವಾಮಿ ಮ... ಆರೋಗ್ಯ ಮಂತ್ರಿ ಅಶೋಕ್ ಬುಡಕ್ಕೆ ಬಂದು ನಿಲ್ಲುತ್ತ... ಉತ್ತರಹಳ್ಳಿ ಮನವರ್ತೆ ಕಾವಲ್‌ನ ಸ.ನಂ.5ರಲ್ಲಿದ್ದ 342.28 ಎಕರೆ ಮತ್ತು ತುರಳ್ಳಿ ಸರ್ವೆ ನಂಬರ್ ... ರಲ್ಲಿನ 170.19 ಎಕರೆ ಮತ್ತು ಸ.ನಂ. 41 ರಲ್ಲಿದ್ದ 94.8 ಎಕರೆ ಭೂಮಿಯ ಒಟ್ಟು ಮೊತ್ತವೇ ತು... ಕಿರು ಅರಣ್ಯ. ಅದು ಆರುನೂರು ಎಕರೆ ವಿಸ್ತಾ... ಬೆಂಗಳೂರು ನಗರ ವ್ಯಾಪ್ತಿಯ ಏಕೈಕ ಅ... ಪ್ರದೇಶ. 1934 ರಲ್ಲಿ ಅದನ್ನು ಅರಣ್ಯ ಇಲಾ... ವಹಿಸಿದ್ದು ಮೈಸೂರು ಮಹಾರಾಜರ... ಜಯಚಾಮರಾಜ ಒಡೆಯರ್. ಬ್ರಿ... ಕಾಲದ ದಾಖಲೆಗಳಲ್ಲಿ ಅದನ್ನು ಅ... ಇಲಾಖೆಗೆ ವಹಿಸಿಕೊಟ್ಟ ಬಗ್ಗೆ ನಂ. 1746 FT 65342 ದಿನಾ... 24.8.1934 ಎಂಬ ಆದೇಶವಿದೆ.

ಈ ಪೈಕಿ 42 ಎಕರೆಯ... ಜಮೀನಿನಲ್ಲಿ ತುರಳ್ಳಿ ಕಾಡಿಗೆ ಹೊ... ಕೊಂಡೇ ಇರುವ ಗಾಣಿಗರಪಾಳ್ಯದ ಇ... ದಲಿತ ಕುಟುಂಬಗಳು ಬಗರ್‌ಹುಕುಂ ಸಾಗು...


ರಾ. ಸೋಮನಾಥ್

ಮಾಡಿಕೊಂಡಿದ್ದಾರೆ. ಮಿಕ್ಕಂತೆ ಉಳಿಕೆ ಜಮೀ... ಇವತ್ತಿಗೂ ಅರಣ್ಯವಾಗೇ ಉಳಿದಿದೆ.

1990 ರ ತನಕ ತುರಳ್ಳಿ ಕಾಡಿಗೆ ಯಾವ... ಗಂಡಾಂತರವಿರಲಿಲ್ಲ. ಆದರೆ 1991 ರ ಹೊ... ಉತ್ತರಹಳ್ಳಿಗೆ ಶಾಸಕನಾಗಿದ್ದ ಎಂ.ಶ್ರೀನಿವಾಸ್‌ನ ಸಂಬ... ಸಾರಕ್ಕಿ ಮುನಿಭೈರಪ್ಪ ಎಂಬಾತ ಹುಟ್ಟಿಕೊಂಡ... ಹೊತ್ತಿಗಿನ್ನೂ ಭೂಮಿ ಬೆಲೆ ಈಪಾಟಿ ಏರಿರಲಿಲ್ಲ... ದರೂ ಬೆಂಗಳೂರು ಬನಶಂಕರಿಯಿಂದಾಚೆಗೆ ಬೆಳ... ಕನಕಪುರ ರಸ್ತೆಯ ಕೋಣನಕುಂಟೆಯನ್ನೂ ದಾಟುತ್ತಿ... ಅದೇ ಹೊತ್ತಿಗೆ ಬಿಡಿಎ ಬನಶಂಕರಿ 6 ನೇ ಹಂ... ಸಜ್ಜಾಗುತ್ತಿದ್ದರಿಂದ ಪಕ್ಕದ ತುರಳ್ಳಿಕಾಡು ನೆಲಗ... ಕಣ್ಣು ಕುಕ್ಕದಿರುತ್ತಾ?

ಸಾರಕ್ಕಿ ಮುನಿಭೈರಪ್ಪ ಶಾಸಕ ಎಂ. ಶ್ರೀನಿವಾ... ಬೇನಾಮಿ ಮಾತ್ರವಲ್ಲ ಬನಶಂಕರಿ ಭಾಗದ ಕುಖ್ಯಾ... ನೆಲಗಳ್ಳ. ಈತನನ್ನು ತುರಳ್ಳಿ ಕಾಡಿಗೆ ಹೊಂದಿಕೊಂಡ... ಗಾಣಿಗರಪಾಳ್ಯಕ್ಕೆ ಕರೆತಂದವನು ಎಂಎಲ್...

ಕಳ್ಳರ ರಕ್ಷಣೆಗೆ ಆರೋಗ್ಯ ಮಂತ್ರಿ



ತುರಳ್ಳಿ ಹಗರಣಕ್ಕೆ ಸಂಬಂಧಪಟ್ಟಂತೆ ಸದ್ಯ ತಲಘಟ್ಟಪುರ ಪೊಲೀಸರು ಬಂಧಿಸಿರುವ ಬ್ರೋಕರುಗಳಾದ ಕೃಷ್ಣಮೂರ್ತಿ ಮತ್ತು ನರಸಿಂಹಮೂರ್ತಿ ಮತ್ತು ರೈತರಾದ ಹನುಮಯ್ಯ ಕೃಷ್ಣಪ್ಪ, ಅಣ್ಣಯ್ಯಪ್ಪ, ಗೋಪಾಲ್, ವೆಂಕಟಪ್ಪ, ಶ್ರೀರಾಮ್, ಶಂಕ್ರಪ್ಪ ಮುಂತಾದವರ್‍ಯಾರೂ ದೊಡ್ಡ ಕುಳಗಳೇನಲ್ಲ. ಪೊಲೀಸರು ಮೊದಲು ಲಾಕಪ್ಪಿಗೆ ದಬ್ಬಬೇಕಿದ್ದದ್ದು ಬಿಜೆಪಿ ನಾಯಕ ಮತ್ತು ಮಂತ್ರಿ ಅಶೋಕ್ ಬಂಟ ಹೊಸಳ್ಳಿಯ ರಾಮಸ್ವಾಮಿಯನ್ನು. ಕಳೆದ ತಾಲ್ಲೂಕು ಪಂಚಾಯ್ತಿ ಚುನಾವಣೆಯಲ್ಲಿ ಬಿಜೆಪಿಯಿಂದ ತಲಘಟ್ಟಪುರಕ್ಕೆ ನಿಂತು ಸೋತಿದ್ದ ಈ ರಾಮಸ್ವಾಮಿ ಮತ್ತು ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್ ನೌಕರ ಶ್ರೀನಿವಾಸ್ ಇಬ್ಬರೂ ನಕಲಿ ದಾಖಲೆ ಸೃಷ್ಟಿಯ ಕಾರಣಕರ್ತರು. ಇವರೊಂದಿಗೆ ಶಾಮಯ್ಯ, ಗೋಪಾಲ್ ಮುಂತಾದ ಲೋಕಲ್ ಬಿಜೆಪಿಯ ನಾಯಕರೂ ಕೈಜೋಡಿಸಿದ್ದಾರೆ. ಪೊಲೀಸರು ಇವರ್‍ಯಾರನ್ನೂ ಮುಟ್ಟದೇ ಬರೀ ಕಾಂಗ್ರೆಸ್ ಕಾರ್ಯಕರ್ತರನ್ನಷ್ಟೇ ಹಿಡಿದು ಜೈಲಿ... ಹಾಕಿದ್ದಾರೆ. ಇದೆಲ್ಲ ಆರೋಗ್ಯ ಮಂತ್ರಿ ಆರ್. ಅಶೋಕ್ ಲೀಲಿಯಲ್ಲದೇ ಮತ್ತೇನು?

ಹೋಗಲಿ ಮಂತ್ರಿ ಅಶೋಕ್ ಮರ್ಜಿಗೆ ಬಿದ್ದೇ ಪೊಲೀಸರು ಬಿಜೆಪಿ ಖದೀಮರನ್ನು ಮುಟ್ಟಿಲ್ಲ ಎಂದಿಟ್ಟುಕೊಂಡರೂ ಕಬಡ್ಡಿ ಬಾಬು, ದಯಾನಂದ ಪೈ, ಐಎಎಸ್ ಅಧಿಕಾರಿ ಪ್ರಭಾಕರಪ್ಪ, ಆತನ ತಮ್ಮ ಚಂದ್ರಶೇಖರ್, ವೇದಾಚಲಂ, ಲಾಯರ್ ಮಂಜುನಾಥ್, ಬಿಲ್ಡರ್ ದಿನೇಶ್‌ಕುಮಾರ್ ಮುಂತಾದ ನೆಲಗಳ್ಳರನ್ನಾದರೂ ಹಿಡಿಯಬೇಕಲ್ಲ?

ಅವರನ್ನೆಲ್ಲ ಬಿಟ್ಟು ಖಾಲಿಪೋಲಿ ರೈತರನ್ನೋ, ಬ್ರೋಕರುಗಳನ್ನೋ ದಂಡಿಸಿ ಏನು ಫಲ?

ಶ್ರೀನಿವಾಸ್‌ನ ಮತ್ತೊಬ್ಬ ಸಂಬಂಧಿ ಹಾಲಿ ಬಿಜೆಪಿ ಮುಖಂಡ ಮತ್ತು ಮಂತ್ರಿ ಅಶೋಕ್‌ರ ನೆಚ್ಚಿನ ಬಂಟ ಹೊಸಳ್ಳಿಯ ರಾಮುಸ್ವಾಮಿ. ಈತನ ಸಂಬಂಧಿಗಳಾದ ಹೊಸಳ್ಳಿಯ ಗೋಪಾಲ, ಹಾದುಯ್ಯ, ರಾಮುಸ್ವಾಮಪ್ಪರ ಜೊತೆ ಟಾಟಾ ಇನ್ಸ್‌ಟ್ಯೂಟಿನ ಶ್ರೀನಿವಾಸ್ ಕೂಡ ಕೈ ಜೋಡಿಸಿ ಬೋಗಸ್ ದಾಖಲೆ ಸೃಷ್ಟಿಸಲಾರಂಭಿಸಿದರು.

ಈ ಕೆಲಸಕ್ಕೆ ಸಾತು ಕೊಟ್ಟ ಇನ್ನಿಬ್ಬರು ಖದೀಮರೇ ಗಾಣಿಗರ ಪಾಳ್ಯದ ಕೆ.ಟಿ. ಕೃಷ್ಣಮೂರ್ತಿ ಮತ್ತು ಹೊಸಳ್ಳಿಯ ಮೋಹನ್‌ಬೋವಿ!

ಇವರು ಕೈಹಾಕಿದ್ದು ತುರಳ್ಳಿ ಕಾಡಿನ ಸರ್ವೆ ನಂಬರ್ 5ರಲ್ಲಿದ್ದ ಮುನ್ನೂರೈವತ್ತೆಕರೆ ಅರಣ್ಯ ಭೂಮಿಗೆ. ಹಿಂದೆ ಮೈಸೂರು ಮಹಾರಾಜ ಜಯಚಾಮರಾಜ ಒಡೆಯರ್ ಮತ್ತು ಅವರ ದಿವಾನರಾಗಿದ್ದ ಮಿರ್ಜಾ ಇಸ್ಮಾಯಿಲ್ 1941 ರ ಜನವರಿ 25 ರಂದು ಅರಮನೆ ರಿಪೇರಿ ಮಾಡಿದ್ದಕ್ಕೆ ಪ್ರತಿಫಲವಾಗಿ ದಾನಪತ್ರ ಬರೆದು ಕೊಟ್ಟಂತೆ ಛಾಪಾ ಕಾಗದವೊಂದನ್ನು ಸೃಷ್ಟಿಸಿಬಿಟ್ಟರು. ವಿಚಿತ್ರವೆಂದರೆ ಅದಕ್ಕೂ ಮೊದಲೇ ಅರಣ್ಯ ಇಲಾಖೆಗೆ ಈ ಭೂಮಿ ಹಸ್ತಾಂತರವಾಗಿತ್ತು!

ಸದರಿ ನಕಲಿ ದಾನಪತ್ರವನ್ನು ಆಧಾರವಾಗಿಟ್ಟು ಕೊಂಡೇ ಗಾಣಿಗರಪಾಳ್ಯದ ಲಕ್ಷ್ಮಯ್ಯ, ಗೋಪಾಲ, ಜೈರಾಮ, ಸಂಪಂಗಿ, ರಾಮಸ್ವಾಮಪ್ಪ, ಚಂದ್ರಪ್ಪ, ಮಲ್ಲಣ್ಣ ಮುಂತಾದ ತೊಂಬತ್ನಾಲ್ಕು ಮಂದಿ ಇಡೀ ತುರಳ್ಳಿ ಕಾಡನ್ನೇ ಬಗರ್‌ಹುಕುಂ ಸಾಗುವಳಿಯ ಆಧಾರದ ಮೇಲೆ ತಮಗೆ ಬರೆದು ಕೊಡುವಂತೆ ಹೈಕೋರ್ಟಿಗೆ ಹೋದರು. ಕೋರ್ಟು ತಾನೇ ಇನ್ನೇನು ಮಾಡಲು ಸಾಧ್ಯ?

ಅರ್ಜಿದಾರರ ಮನವಿಯನ್ನು ಕಾನೂನುರಿತ್ಯಾ ಪರಿಶೀಲಿಸಿ ಕ್ರಮ ಕೈಗೊಳ್ಳಿ ಎಂದು 2002 ರ ನವೆಂಬರ್ 12 ರಂದು ಕಂದಾಯ ಇಲಾಖೆಗೆ ಆದೇಶಿಸಿತು. ಈ ಪ್ರಕಾರವೇ ಕಂದಾಯ ಇಲಾಖೆ; ಇದು ಅರಣ್ಯ ಭೂಮಿಯಾದ್ದರಿಂದ ಮಂಜೂರಾತಿ ಸಾಧ್ಯವಿಲ್ಲ ಎಂದು ಅರ್ಜಿಯನ್ನು ತಿರಸ್ಕರಿಸಿತ್ತು. ಜೊತೆಗೆ ಮೈಸೂರು ದಿವಾನರ ಹೆಸರಲ್ಲಿ ಸೃಷ್ಟಿಯಾದ ಬೋಗಸ್ ದಾನಪತ್ರದ ಬಗ್ಗೆಯೂ ತನಿಖೆಯಾಗಬೇಕಿತ್ತು.


ಆದರೆ ನಕಲಿ ದಾಖಲೆಯ ಕಾರಣಕರ್ತರಾದ ಹೊಸಳ್ಳಿಯ ರಾಮಸ್ವಾಮಿ ಗ್ಯಾಂಗ್ ಈ ಹೊತ್ತಿಗಾಗಲೇ ಮಾಜಿ ಶಾಸಕ ಎಂ. ಶ್ರೀನಿವಾಸ್‌ಗೆ ಕೈಕೊಟ್ಟು ಬಿಜೆಪಿಯ ಹಾಲಿ ಶಾಸಕ ಅಶೋಕ್ ಪಾಳಯದಲ್ಲಿತ್ತು. ಏಕೆಂದರೆ ಬೆಂಗಳೂರು ದಕ್ಷಿಣ ತಾಲ್ಲೂಕು ದರಖಾಸ್ತು ಮಂಜೂರಾತಿ ಸಮಿತಿಗೆ ಎಮ್ಮೆಲ್ಲೇ ಅಶೋಕರೇ ಅಧ್ಯಕ್ಷರಾಗಿದ್ದರು. ಜೊತೆಗೆ ಈಗ ಮಂತ್ರಿ ಅಶೋಕ್‌ರ ವಿಶೇಷ ಕರ್ತವ್ಯಾಧಿಕಾರಿಯಾಗಿರುವ ರಾಮಚಂದ್ರರನ್ನು ಆಗ ಸ್ವತಃ ಅಶೋಕ್‌ರೇ ನಿಂತು ಬೆಂಗಳೂರು ದಕ್ಷಿಣದ ತಹಶೀಲ್ದಾರ್ ಆಗಿ ಹಾಕಿಸಿಕೊಂಡಿದ್ದರು. ಇಡೀ ತುರಳ್ಳಿ ಕಾಡನ್ನು ಬಗರ್‌ಹುಕುಂ ಸಾಗುವಳಿ ಕಾಯ್ದೆಯ ಆಧಾರದ ಮೇಲೆ ನೆಲಗಳ್ಳರಿಗೆ ಹಂಚುವ ಷಡ್ಯಂತ್ರವೊಂದು ಮಂತ್ರಿ ಅಶೋಕ್ ಒತ್ತಾಸೆಯ ಮೇರೆಗೇ ರೂಪುಗೊಂಡಿತ್ತು.

ತಲಘಟ್ಟಪುರದ ಗ್ರಾಮಲೆಕ್ಕಿಗ ರುದ್ರಯ್ಯ, ತಹಶೀಲ್ದಾರ್ ಕಚೇರಿಯ ಶಿರಸ್ತೇದಾರ್ ಬಿ.ಜಿ. ನಾಗರಾಜ್ ಮತ್ತು ತಹಶೀಲ್ದಾರ್ ರಾಮಚಂದ್ರ ಸೇರಿಕೊಂಡು ಅರ್ಜಿದಾರರ ಪರವಾಗಿ ತುರಳ್ಳಿ ಕಾಡಿನ ಸರ್ವೆ ನಡೆಸಿದರಾದರೂ ಅದಕ್ಕೆ ಆನಂತರ ತಹಶೀಲ್ದಾರ್ ಆಗಿ ಬಂದ ನಾರಾಯಣಸ್ವಾಮಿ ಅಡ್ಡಗಾಲಿಟ್ಟರು. ಹಾಗಂಥ ಎಮ್ಮೆಲ್ಲೆ ಅಶೋಕ್ ಬಂಟರು ಸುಮ್ಮನಾಗಲಿಲ್ಲ. ಕೋರ್ಟ್ ಆದೇಶವನ್ನೇ ಮುಂದಿಟ್ಟುಕೊಂಡು ಭೂಕಂಟಕ ದಯಾನಂದ ಪೈನ ಏಜೆಂಟರಾದ ನಾಯಕ್ ಮತ್ತು ಚಂದ್ರಶೇಖರ್ ಜೊತೆ ಡೀಲು ಕುದುರಿಸಿಬಿಟ್ಟರು.

ಪ್ರಾರಂಭದಲ್ಲಿ ದಯಾನಂದ ಪೈ ಅಡ್ವಾನ್ಸ್ ಎಂದೇ ಎರಡೂವರೆ ಕೋಟಿ ರೂಪಾಯಿ ಕೊಟ್ಟಿದ್ದ. ಅದನ್ನು ಹೊಸಳ್ಳಿ-ಗಾಣಿಗರಪಾಳ್ಯದ ತಲಾ ಅರ್ಜಿದಾರನಿಗೆ ಹತ್ತರಿಂದ ಐವತ್ತು ಸಾವಿರದಂತೆ ಬಟವಾಡೆ ಮಾಡಿದ ರಾಮಸ್ವಾಮಿ-ಶ್ರೀನಿವಾಸ್ ಗ್ಯಾಂಗ್ ದೊಡ್ಡ ಮೊತ್ತವನ್ನು ತಾವೇ ಗುಂಗಿ ಹಾಕಿತ್ತು. ಇದು ಪತ್ರಿಕೆಗೆ ಗೊತ್ತಾಗಿ 2006 ರ ಜೂನ್ 21 ರ ಸಂಚಿಕೆಯಲ್ಲಿ ವರದಿಯಾದದ್ದೇ ತಡ, ದಯಾನಂದ ಪೈ ಹುಷಾರಾಗಿ ಮಿಕ್ಕ ದುಡ್ಡನ್ನು ಸಾಗುವಳಿ ಚೀಟಿ ಬಂದ ನಂತರವೇ ಕೊಡುತ್ತೇನೆ ಎಂದು ಕೈ ಎತ್ತಿಬಿಟ್ಟ. ಮಂತ್ರಿ ಅಶೋಕ್ ಕೂಡ ಗಪ್‌ಚುಪ್ಪಾದರು.

ಯಾವತ್ತು ದಯಾನಂದ ಪೈ ದುಡ್ಡು ಬಿಚ್ಚುವುದು ನಿಂತಿತೋ, ಆತನಿಗೆ ಜಿಪಿಎ ಮಾಡಿಕೊಟ್ಟಿದ್ದ ಅರ್ಜಿದಾರರೆಲ್ಲ ಮೋಹನ್ ಬೋವಿ ಮತ್ತು ಕೃಷ್ಣಮೂರ್ತಿಯ ಮೂಲಕ ಕೋರಮಂಗಲದ ಕುಖ್ಯಾತ ಲ್ಯಾಂಡ್ ಗ್ರಾಬರ್ ಚಂದ್ರಶೇಖರ್‌ನ ಬುಟ್ಟಿಗೆ ಬಿದ್ದರು. ಈತ ಹಾವೇರಿಗೆ ಜಿಲ್ಲಾಧಿಕಾರಿಯಾಗಿದ್ದ ಐಎಎಸ್ ಅಧಿಕಾರಿ ಪ್ರಭಾಕರಪ್ಪನ ತಮ್ಮ. ಈತನಪತ್ನಿ ವಿಜಯಲಕ್ಷ್ಮಿ ಲೋಕಾಯುಕ್ತರಲ್ಲಿ ರಿಜಿಸ್ಟ್ರಾರ್. ಸಾಕಷ್ಟು ಪ್ರಭಾವಿ ವ್ಯಕ್ತಿ.


ಕಬಡ್ಡಿ ಬಾಬು ಪಡೆಯ ಕಾಡು ಸ್ವಾಹಾ



ಈಗ CNN-IBN ಬಯಲಿಗೆಳೆದದ್ದು ತುರಳ್ಳಿ ಕಾಡಿನ ಸರ್ವೆ ನಂಬರ್ 5 ರ ಭೂಕಬಳಿಕೆಯಾದರೆ ಇದೇ ಕಾಡಿನ ಮತ್ತೊಂದು ಭಾಗಕ್ಕೆ ಮುಖ್ಯಮಂತ್ರಿಯ ಬಂಟ ಕಬಡ್ಡಿಬಾಬು ಕೈಯಿಕ್ಕಿದ್ದಾನೆ. ಇಲ್ಲಿಗೆ ಇಪ್ಪತ್ತು ದಿನಗಳ ಹಿಂದೆ ಕಗ್ಗಲಿಪುರದ ಆರ್‌ಎಫ್‌ಓ ಚಿನ್ನಪ್ಪಯ್ಯ ಮತ್ತು ಡಿಎಫ್‌ಓ ಅಣ್ಣಯ್ಯ ಎಂಬಿಬ್ಬರು ಅರಣ್ಯಾಧಿಕಾರಿಗಳು ಸೇರಿಕೊಂಡು ತುರಳ್ಳಿ ಕಾಡಿನ ಸರ್ವೆ ನಂಬರ್ 42 ರಲ್ಲಿ ಬೋರ್‌ವೆಲ್ ಕೊರೆದು ಅಕ್ರಮಿಸುತ್ತಿದ್ದ ಒಂದು ಬುಲ್ಡೋಜರ್ ಮತ್ತೆರಡು ಲಾರಿಗಳನ್ನು ವಶಪಡಿಸಿಕೊಂಡಿದ್ದು ಕಬಡ್ಡಿ ಬಾಬು ಗ್ಯಾಂಗ್‌ನ ಅರಣ್ಯಾಕ್ರಮಣಕ್ಕೆ ಕೊಟ್ಟ ದೊಡ್ಡ ಪೆಟ್ಟಾಗಿತ್ತು.

ಮುಖ್ಯಮಂತ್ರಿಯ ಟೀವಿ ಚಾನೆಲ್‌ನ ಪಾರ್ಟನರ್ ಪ್ರಸಾದ್‌ಬಾಬು ಉರ್ಫ್ ಕಬಡ್ಡಿ ಬಾಬು ಇವತ್ತಿಗೂ ತುರಳ್ಳಿ ಕಾಡಿನ ಇಪ್ಪತ್ತೆಕರೆ ತನಗೇ ಸೇರಿದ್ದೆಂದು ವಾದಿಸುತ್ತಿದ್ದಾನೆ. ಕಂದಾಯ ಇಲಾಖೆ ಸಾಗುವಳಿ ಚೀಟಿಯನ್ನೂ ಕೊಟ್ಟಿದೆ. ಕಮ್ಮಿಯೆಂದರೂ ಅದು ಐವತ್ತು ಕೋಟಿಯ ಆಸ್ತಿ. ಆಚ್ಚರಿಯ ಸಂಗತಿಯೇನೆಂದರೆ ಕಬಡ್ಡಿ ಬಾಬು ಪರವಾಗಿ ತುರಳ್ಳಿ ಕಾಡಿನ ಬೋಗಸ್ ದಾಖಲೆಗಳು ಸೃಷ್ಟಿಯಾಗಿದ್ದು ಜೆಡಿಎಸ್ ಅಧಿಕಾರಕ್ಕೆ ಬಂದ ನಂತರವೆ. 2005 ರ ಏಪ್ರಿಲ್ ಹನ್ನೊಂದರಂದು ಬೆಂಗಳೂರು ದಕ್ಷಿಣ ತಾಲ್ಲೂಕು ತಹಶೀಲ್ದಾರ್ ಸದಾನಂದಪ್ಪ ಬೆಂಗಳೂರು ಉಪವಿಭಾಗದ ಭೂ ದಾಖಲೆಗಳ ಸಹಾಯಕ ನಿರ್ದೇಶಕರಿಗೆ ತುರಳ್ಳಿ ಕಾಡಿನ ಸ.ನಂ. 42 ಅನ್ನು ಪುನರ್ ಯೋಜನೆ ಮಾಡುವಂತೆ ಆದೇಶಿಸುತ್ತಾರೆ. ಅದರ ಪ್ರಕಾರ ಸರ್ವೆಯರ್ 'ದುರಸ್ತು' ಮಾಡಿ 69 ರಿಂದ 74 ರವರೆಗೆ ಐದು ಹೊಸ ಸರ್ವೆ ನಂಬರ್‌ಗಳನ್ನು ಕೊಟ್ಟು, ಗುಬ್ಬಲಾಳದ ಕಾವೇರಪ್ಪ, ಭೈರಪ್ಪ ಮತ್ತು ಮುನಿಯಪ್ಪ ಮುಂತಾದವರಿಗೆ ತಲಾ ಮೂರರಿಂದ ನಾಲ್ಕೆಕರೆಯಂತೆ ಒಟ್ಟು 11.6 ಎಕರೆಗೆ ದಾಖಲೆ ಸೃಷ್ಟಿಸಿಕೊಡುತ್ತಾರೆ. ಹಾಗಂಥ ಇದು ಪಹಣಿಗೆ ದಾಖಲಾಗುವುದಿಲ್ಲ. ಏಕೆಂದರೆ ಅರಣ್ಯಭೂಮಿ!


ಆದರೆ ನೆಲಗಳ್ಳರಿಗೆ ಇಷ್ಟೇ ಸಾಕಲ್ಲ. ಕಂಪ್ಯೂಟರ್ ಪಹಣಿಗೆ ಬದಲಾಗಿ ಕೈಬರಹದ ನಕಲಿ ಪಹಣಿಗಳನ್ನು ಸೃಷ್ಟಿಸಿ ಲೇಔಟ್ ನಿರ್ಮಾಣ ಮಾಡುತ್ತಿದೆ ಕಬಡ್ಡಿ ಬಾಬು ಪಡೆ. ಹಕೀಕತ್ತೇನೆಂದರೆ ಅರಣ್ಯ ಭೂಮಿ ಕಬಳಿಸಿದ್ದಕ್ಕೆ ಅರಣ್ಯ ಇಲಾಖೆಯೇ ಕೈಜೋಡಿಸಿದೆ. 1971 ರಲ್ಲಿ ನಕಲಿ ಸಾಗುವಳಿ ಚೀಟಿಯೊಂದನ್ನು ಆಧಾರವಾಗಿಟ್ಟುಕೊಂಡು ದಾಸಪ್ಪ ಎಂಬ ರೆವಿನ್ಯೂ ಇನ್ಸ್‌ಪೆಕ್ಟರ್ ಖಾತೆ ಅಂಗೀಕಾರ ಮಾಡಿದಂತೆ ದಾಖಲೆ ಸೃಷ್ಟಿಸಿ ಅದನ್ನು 2002 ರಲ್ಲಿ ಕಡತಕ್ಕೆ ತುರುಕಿದ್ದಾರೆ. ಆದರೆ 1971 ರಲ್ಲಾಗಲಿ ಆನಂತರವಾಗಲಿ ದಾಸಪ್ಪ ಎಂಬ ರೆವಿನ್ಯೂ ಇನ್ಸ್‌ಪೆಕ್ಟರ್ ಇರಲೇ ಇಲ್ಲ. ದಾಸಪ್ಪ ಎಂಬ ಗುಮಾಸ್ತನಿದ್ದದ್ದು ಮಾತ್ರ ಸತ್ಯವಾದರೂ ಗುಮಾಸ್ತನಿಗೆ ಖಾತೆ ಅಂಗೀಕಾರ ಮಾಡುವ ಅಧಿಕಾರವಿಲ್ಲ. ಇನ್ನು ಸಾಗುವಳಿ ಚೀಟಿಕೊಟ್ಟ ನಂಜುಂಡಪ್ಪ ತಹಶೀಲ್ದಾರ್ ಬದುಕಿಲ್ಲ. ಇದನ್ನು ಆಧಾರವಾಗಿಟ್ಟುಕೊಂಡು ಸರ್ವೆ ದುರಸ್ತು ಮಾಡಿ ಅದನ್ನು ಅರಣ್ಯದಿಂದ ಪ್ರತ್ಯೇಕಿಸಿ ಹೊಸ ಸರ್ವೆ ನಂಬರ್ ಕೊಡುವಂತೆ ಆದೇಶಿಸುವ ಯಾವುದೇ ಅಧಿಕಾರ ವಿಶೇಷ ತಹಶೀಲ್ದಾರ್ ಸದಾನಂದಪ್ಪನಿಗಿಲ್ಲ. ಇಂಥ ಹೊಸ ಸರ್ವೆ ನಂಬರುಗಳ ಆಧಾರದ ಮೇಲೆ ಅರಣ್ಯಭೂಮಿಯನ್ನು ಪ್ರತ್ಯೇಕಿಸುವ ಅಧಿಕಾರ ಅರಣ್ಯ ಇಲಾಖೆಗೂ ಇಲ್ಲ. ಇಲ್ಲಿ ವಿಶೇಷ ತಹಶೀಲ್ದಾರ್ ಸದಾನಂದಪ್ಪ ನೆಲಗಳ್ಳರ ಜೊತೆ ಕೈಜೋಡಿಸಿದ್ದು ಸುಸ್ಪಷ್ಟ. ಅದಕ್ಕೆ ಅರಣ್ಯ ಇಲಾಖೆ ಕೈಜೋಡಿಸಿದ್ದೂ ಅಷ್ಟೇ ಸತ್ಯ. ಈ ಬಗ್ಗೆ ತನಿಖೆಯಾಗಬೇಕು. ಅರಣ್ಯ ಭೂಮಿಯನ್ನು ಕಬಡ್ಡಿ ಬಾಬು ಬಾಯಿಗಿಕ್ಕುವಲ್ಲಿ ಅರಣ್ಯ ಮಂತ್ರಿ ಚೆನ್ನಿಗಪ್ಪ ಮತ್ತು ಮುಖ್ಯಮಂತ್ರಿ ಕುಮಾರಸ್ವಾಮಿ ಪಾತ್ರವೂ ಬಯಲಾಗಬೇಕು.



ಸ್ಪೆಷಲ್ ತಹಶೀಲ್ದಾರ್ ಸದಾನಂದಪ್ಪ

ತುರಳ್ಳಿ ಸರ್ವೆ ನಂಬರ್ 42 ರಲ್ಲಿದ್ದ 170.19 ಎಕರೆ ಜಮೀನನ್ನು 1 59.13 ಎಕರೆ ಎಂದು ತಿದ್ದಿದ್ದು ಯಾರು? ಅದರ ಹಿಂದಿನ ಕಾಣದ ಕೈ ಯಾವುದು?

ಇದು ಪ್ರಶ್ನೆ. ಏಕೆಂದರೆ ಕಬಡ್ಡಿ ಬಾಬು ಮುಖ್ಯಮಂತ್ರಿ ಪಾರ್ಟನರ್. ಆತನ ಗ್ಯಾಂಗ್ ಕಾಡಿಗೇ ನುಗ್ಗುತ್ತದೆ. ಅದರ ವಿರುದ್ಧ ಅರಣ್ಯಾಧಿಕಾರಿಗಳು ಬುಲ್ಡೋಜರ್ ಜಪ್ತಿ ಮಾಡಿಕೊಂಡರೂ ಕೂಡ ಕಬಡ್ಡಿ ಬಾಬು ಹೆಸರು ಮಾತ್ರ FIR ನಲ್ಲಿ ದಾಖಲಾಗುವುದಿಲ್ಲ ಎಂದರೆ ಏನರ್ಥ?



ತುರಳ್ಳಿ ಕಾಡು

ಈತನನ್ನು ಲ್ಯಾಂಡ್ ಗ್ರ್ಯಾಬಿಂಗ್ ಧಂದೆಗೆ ಕರೆತಂದವನು ಮತ್ತೊಬ್ಬ ನಟೋರಿಯಸ್ ಲ್ಯಾಂಡ್ ಗ್ರ್ಯಾಬರ್ ವೇದಾಚಲಂ. ಈತ ಬೆಂಗಳೂರು ಮಹಾನಗರ ಪಾಲಿಕೆ ಪಕ್ಕದ ಯೂನಿಟಿ ಬಿಲ್ಡಿಂಗ್‌ನಲ್ಲಿರುವ ಸೋನೀಸ್ ಬಿಲ್ಡ್ ಲೈನ್ಸ್‌ನ ಮಾಲೀಕ ಸೋನಿ ಎಂಬಾತನ ಪಾರ್ಟ್‌ನರ್. ಪ್ರಾರಂಭದಲ್ಲಿ ಸಂಪಂಗಿ ರಾಮನಗರದಲ್ಲಿ ಪುಷ್ಪಾಂಜಲಿ ಎಂಟರ್‌ಪ್ರೈಸಸ್ ಎಂಬ ರಿಯಲ್ ಎಸ್ಟೇಟ್ ಏಜೆನ್ಸಿ ನಡೆಸುತ್ತಿದ್ದ ವೇದಾಚಲಂ ತುಂಬಾ ಹಿಂದೆಯೇ ಜೈಲಿಗೆ ಹೋಗಬೇಕಾಗಿತ್ತು. ಸೋನಿ ಮೂಲತಃ ಉನ್ನತ ಅಧಿಕಾರಿಗಳು ಮತ್ತು ಶ್ರೀಮಂತರಿಗೆ ಲೈವ್‌ಬ್ಯಾಂಡ್ ಹುಡುಗಿಯರ ಸರಬರಾಜುದಾರ. ಇವರಿಬ್ಬರೂ ಸೇರಿ ಚಂದ್ರಶೇಖರ್‌ನನ್ನು ಸೋನೀಸ್ ಬಿಲ್ಡ್‌ಲೈನ್ಸ್‌ನ ಮತ್ತೊಬ್ಬ ಪಾರ್ಟನರ್ ಆಗಿ ಮಾಡಿಕೊಂಡರು.

ಇವರಿಗೆ ಸಾರಿಗೆ ಕಮಿಷನರ್ ನಾರಾಯಣಗೌಡರನ್ನು ಪರಿಚಯಿಸಿದ್ದೇ ನಾನು ಎನ್ನುವವನು ರಾಜಾಜಿನಗರದ ರಾಮೇಗೌಡ. ಈತ ಕೂಡ ಮೂಗುಬೊಟ್ಟು ಸರಬರಾಜುದಾರನಂತೆ.

ಇವರೆಲ್ಲ ಸೇರಿ ಮೊದಲು ಟೋಪಿ ಹಾಕಿದ್ದು ಹೈದರಾಬಾದಿನ ಬಿಲ್ಡರ್ ರಾಜಾ ನರೇಂದ್ರನಿಗೆ. ಆತ ಮಾಜಿ ನಕ್ಸಲೈಟ್ ಮತ್ತು ಪೆನುಕೊಂಡದ ಹತಶಾಸಕ ಪರಿಟಾಲ ರವಿಯ ತಮ್ಮ. ಪ್ರಾರಂಭದಲ್ಲಿ ಐದು ಕೋಟಿ ಅಡ್ವಾನ್ಸ್ ಕೊಟ್ಟಿದ್ದ ರಾಜಾ ನರೇಂದ್ರ ಬೆಂಗಳೂರಿಗೆ ಬಂದು ವಿಚಾರಿಸಿದಾಗ ಅದು ಅರಣ್ಯ ಭೂಮಿ ಎಂದು ಗೊತ್ತಾಗಿದೆ. ವೇದಾಚಲಂ ಮತ್ತು ಚಂದ್ರಶೇಖರ್ ಇಬ್ಬರನ್ನೂ ಹೈದರಾಬಾದಿಗೆ ಕರೆಸಿಕೊಂಡು ಸಮಾರಿಪೇರಿ ಮಾಡಿಯೇ ತನ್ನ ದುಡ್ಡನ್ನು ರಾಜಾ ನರೇಂದ್ರ ವಸೂಲಿ ಮಾಡಿಕೊಂಡ.

ಆದರೆ ಯಾಮಾರಿದ್ದು ಜಯನಗರದ ರೂಪ್‌ಚಂದ್ ಎಂಬ ಮಾರ್ವಾಡಿಯ ಮಗ ದಿನೇಶ್ ಕುಮಾರ್. ಈತ ಕೂಡ ತಾನು ಸಾರಿಗೆ ಕಮಿಷನರ್ ನಾರಾಯಣಗೌಡರ ಬೇನಾಮಿ ಎಂದು ಹೇಳಿಕೊಳ್ಳುತ್ತಾನೆ. ಈತನಿಗೂ ಮುನ್ನ ಚಿತ್ತೂರಿನ ಚಂಗಂನಾಯ್ದು ಎಂಬ ಬಿಲ್ಡರ್‌ಗೆ ಎಕರೆಗೆ ಮೂವತ್ತು ಲಕ್ಷದಂತೆ ಇಡೀ ಮುನ್ನೂರೈವತ್ತು ಎಕರೆ ತುರಳ್ಳಿ ಕಾಡನ್ನು ಮೋಹನ್ ಬೋವಿ, ಚಂದ್ರಶೇಖರ್ ಮತ್ತು ವೇದಾಚಲಂ ಸೇರಿಕೊಂಡು ಕರಾರು ಪತ್ರ ಮಾಡಿಕೊಟ್ಟಿದ್ದರು. ಅದಕ್ಕೆಂದು ಚಂಗಂನಾಯ್ದು ಹನ್ನೆರಡು ಕೋಟಿ ರೂಪಾಯಿಗಳಷ್ಟು ಮುಂಗಡವನ್ನೂ ಕೊಟ್ಟಿದ್ದ. ಇದು ಗೊತ್ತಾಗಿದ್ದೇ ಮಾರ್ವಾಡಿ ದಿನೇಶ್ ಕುಮಾರನ ಗ್ಯಾಂಗ್ ವೇದಾಚಲಂ ಮತ್ತು ಚಂದ್ರಶೇಖರ್‌ರನ್ನು ಎತ್ತಾಕಿಕೊಂಡು ಹೋಗಿ ರಿಪೇರಿ ಮಾಡಿತು. ಆ ಹೊತ್ತಿಗಾಗಲೇ ದಿನೇಶ್‌ಕುಮಾರ್‌ನಿಂದ ಏಳು ಕೋಟಿ ಕಿತ್ತು ನಲವತ್ತು ಎಕರೆಯಷ್ಟು ಕಾಡನ್ನು ಚಂದ್ರಶೇಖರ್ ಮತ್ತು ವೇದಾಚಲಂ ಬರೆದುಕೊಟ್ಟಿದ್ದರು. ಎಕರೆಗೆ ಐವತ್ತೈದು ಲಕ್ಷದಂತೆ ದಿನೇಶ್‌ಕುಮಾರ್‌ಗೆ ರೈತರಿಂದ ಅಗ್ರೀಮೆಂಟ್ ಕೂಡ ಮಾಡಿಸಿಕೊಟ್ಟರು.

ಹಾಗಂಥ ಚಂಗಂನಾಯ್ದು ಸುಮ್ಮನಿರುತ್ತಾನಾ? ಆತನಿಗೆ ಸತ್ಯ ಗೊತ್ತಾಗುವ ಹೊತ್ತಿಗೆ ಹನ್ನೆರಡು ಕೋಟಿ ಕೈಬಿಟ್ಟಿತ್ತು. ವಸೂಲಿಗೆ ಬಂದಾಗಲೆಲ್ಲ ಚಂದ್ರಶೇಖರ್-ವೇದಾಚಲಂ ಜೋಡಿ ಸಾರಿಗೆ ಕಮಿಷನರ್ ನಾರಾಯಣಗೌಡರನ್ನು ತೋರಿಸುತ್ತಿತ್ತು. ಅವರೇ ನಿಂತು ಸಿಎಂ ಕುಮಾರಸ್ವಾಮಿಯ ಅಣ್ಣ ಬಾಲಕೃಷ್ಣೇಗೌಡರ ಮೂಲಕ ಕಂದಾಯ ಇಲಾಖೆಯಿಂದ ಸಾಗುವಳಿ ಚೀಟಿ ಕೊಡಿಸುತ್ತಾರೆಂದು ನಂಬಿಸಿತು. ಚಂಗಂನಾಯ್ದು ಉಪಾಯವಾಗಿ ನಾರಾಯಣಗೌಡರು ಹೇಳಿದ್ದನ್ನೆಲ್ಲ ರಹಸ್ಯ ಕ್ಯಾಮೆರಾದಲ್ಲಿ ಚಿತ್ರಿಸಿಕೊಂಡ. ಆತನನ್ನು ಮೋಹನ್‌ಬೋವಿ, ಚಂದ್ರಶೇಖರ್ ಮತ್ತು ವೇದಾಚಲಂ ಸೇರಿಕೊಂಡೇ ನಾರಾಯಣಗೌಡರ ಛೇಂಬರಿಗೆ ಕರೆದೊಯ್ದಿದ್ದರು. ಯಾವತ್ತು ತನ್ನ ದುಡ್ಡು ಬರುವುದಿಲ್ಲ ಮತ್ತು ತಾನು ಮೋಸ ಹೋಗಿದ್ದು ಅರಣ್ಯ ಭೂಮಿಗೆ ಎಂದು ಗೊತ್ತಾಯಿತೋ, ಚಂಗಂನಾಯ್ದು ತನ್ನ ರಹಸ್ಯ ಕ್ಯಾಮೆರಾದ ವೀಡಿಯೋ ಸೀಡಿಯನ್ನು CNN-IBN ನ ವರದಿಗಾರ್ತಿ ದೀಪಾ ಬಾಲಕೃಷ್ಣನ್‌ಗೆ ಕೊಟ್ಟಿದ್ದಾನೆ. ಅದೇ ತುರಳ್ಳಿ ಅರಣ್ಯ ಕಬಳಿಕೆ ಕರ್ಮಕಾಂಡಕ್ಕೆ ಮೂಲವಾಗಿದೆ. ದುರಂತವೆಂದರೆ ಇಂಥ ತಿಮಿಂಗಲಗಳನ್ನೆಲ್ಲ ಬಿಟ್ಟು ಪೊಲೀಸರು ಯಾರೋ ರೈತರನ್ನೋ ಅಬ್ಬೇಪಾರಿ ಬ್ರೋಕರುಗಳನ್ನೋ ಹಿಡಿದು ಜೈಲಿಗೆ ನೂಕುತ್ತಿದ್ದಾರಲ್ಲ; ಇದು ಯಾವ ನ್ಯಾಯ?

ಇದು ತುರಳ್ಳಿ ಕಾಡಿನ ಸರ್ವೆ ನಂಬರ್ 5ರ 350 ಎಕರೆಯ ಕತೆಯಾದರೆ, ಇದೇ ಕಾಡಿನ ಸರ್ವೆ ನಂಬರ್ 42 ರ ಅರಣ್ಯ ಭೂಮಿಗೆ ಮುಖ್ಯಮಂತ್ರಿಯ ಆಪ್ತ ಕಬಡ್ಡಿ ಬಾಬು ಗ್ಯಾಂಗ್ ಲಗ್ಗೆಯಿಟ್ಟಿದೆ. (ಬಾಕ್ಸ್ ನೋಡಿ). ಮಂತ್ರಿ ಅಶೋಕ್ ನೆರಳಲ್ಲೇ ನಕಲಿ ದಾಖಲೆಗಳು ಹುಟ್ಟಿಕೊಂಡಿವೆ. ಭೂಗಳ್ಳ ಚಂದ್ರಶೇಖರ್‌ನ ಅಣ್ಣ ಪ್ರಭಾಕರಪ್ಪ ಎಂಬ ಐಎಎಸ್ ಅಧಿಕಾರಿಯೇ ನಿಂತು ರೆವಿನ್ಯೂ ಅಧಿಕಾರಿಗಳಿಗೆ ಧಮಕಿ ಹಾಕಿದ್ದಾನೆ. ನಕಲಿ ದಾಖಲೆ ಸೃಷ್ಟಿಸುವಲ್ಲಿ ಈತನ ಪಾತ್ರವೇ ದೊಡ್ಡದು. ಇಂಥ ಬಿಳಿಕಾಲರ್ ಕ್ರಿಮಿನಲ್‌ಗಳನ್ನೇಕೆ ಪೊಲೀಸರು ಮುಟ್ಟುತ್ತಿಲ್ಲ?

ಇದು ಪ್ರಶ್ನೆಯೂ ಹೌದು. ದುರಂತವೂ ಹೌದು.



ಯೂನಿಟಿ ಬಿಲ್ಡಿಂಗ್‌ನ ಸೋನೀಸ್ ಅಡ್ಡೆ

ಸಿದ್ದೂಗೆ ಗೌಡರ ಸ್ಕೆಚ್

ಮಾವಿನಹಳ್ಳಿ ಸಿದ್ದೇಗೌಡ ಬಂದ!

ಚಾಮುಂಡೇಶ್ವರಿ ಬೈ ಎಲೆಕ್ಷನ್‌ನಲ್ಲಿ ಸಿದ್ಧರಾಮಯ್ಯ ವಿರುದ್ಧ ಅವರ್‍ನ ಬಿಟ್, ಇವರ್‍ನ ಬಿಟ್ ಯಾರ್‍ನ ನಿಲ್ಲಿಸ್ತಾರೆ ಎಂದು ಕರ್ನಾಟಕದ ಜನ ಕಾಯುತ್ತಿರುವಾಗಲೇ ದೇವೇಗೌಡರು ಒಬ್ಬ ಕ್ಯಾಂಡಿಡೇಟನ್ನು ತಲಾಶ್ ಮಾಡಿ ತಂದಿದ್ದಾರೆ.

ಆತ ಮಾವಿನಹಳ್ಳಿ ಸಿದ್ದೇಗೌಡ!


ವೃತ್ತಿಯಲ್ಲಿ ಲಾಯರ್, ಜಾತಿಯಲ್ಲಿ ಒಕ್ಕಲಿಗರು, ಹಾಗೂ ಪ್ರವೃತ್ತಿಯಲ್ಲಿ ಸಂಭಾವಿತರೆಂದು ಸಿದ್ದೇಗೌಡರ ಬಗ್ಗೆ ಜನಾಭಿಪ್ರಾಯವಿದೆ. ಆದರೆ ಸಿದ್ಧರಾಮಯ್ಯನವರಂತಹ ಹೆಬ್ಬುಲಿ ಹೊಡೆಯಲು ದೇವೇಗೌಡರು ಈ ತರ ಮಾವಿನಹಣ್ಣು, ಹಲಸಿನ ಹಣ್ಣು ಲೆವೆಲ್‌ನ ಕ್ಯಾಂಡಿಡೇಟ್‌ಗಳನ್ನು ಹುಡುಕಿ ತರುತ್ತಿದ್ದಾರಲ್ಲ. ಈ ಸಿದ್ದೇಗೌಡರು ಸಿದ್ಧರಾಮಯ್ಯನವರಿಗೆ ಸಾಟೀನಾ? ಎಂದು ಜನ ಈಗಾಗಲೇ ಮಾತಾಡಲು ಶುರು ಮಾಡಿಬಿಟ್ಟಿದ್ದಾರೆ. ನಾಳೆ ದಿನ ಚಾಮುಂಡೇಶ್ವರಿಯಿಂದ ಇವರೇ ಮಾವಿನಹಳ್ಳಿ ಜೆಡಿಎಸ್ ಅಭ್ಯರ್ಥಿಯಾದರೆ ಸಿದ್ಧರಾಮಯ್ಯ ಸಿಪ್ಪೆ, ಹಣ್ಣು, ವಾಟೆ ಒಂದೂ ಬಿಡದಂತೆ ಸಿದ್ಧರಾಮಯ್ಯ ಲೀಲಾಜಾಲವಾಗಿ ನುಂಗುತ್ತಾರೆಂಬ ಲೇವಡಿ ಮಾತೂ ಶುರುವಾಗಿದೆ.


ಇದು ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ ವಾಸ್ತವವೂ ಹೌದು, ದೇವೇಗೌಡರ ಬಿಕ್ಕಟ್ಟೂ ಹೌದು.

ಏಕೆಂದರೆ ಅಸಲಿಗೆ ಚಾಮುಂಡೇಶ್ವರಿಯಲ್ಲಿ ಸಿದ್ಧರಾಮಯ್ಯ ವಿರುದ್ಧ ಅಷ್ಟೇ ವರ್ಚಸ್ಸಿರುವ ಇನ್ನೊಬ್ಬ ಲೀಡರ್ ಇಲ್ಲ... ಇದು ವಾಸ್ತವ.

ಮತ್ತೊಂದೆಡೆ ದೇವೇಗೌಡರು ಒಡೆಯರ್ ಪತ್ನಿ ಪ್ರಮೋದಾದೇವಿ, ಮಾಜಿ ಪೊಲೀಸ್ ಅಧಿಕಾರಿ ರೇವಣಸಿದ್ಧಯ್ಯ, ರಾಜಶೇಖರಮೂರ್ತಿ ಮತ್ತವರ ಅಳಿಯ ಎಂಎಲ್‌ಸಿ ಚಿದಾನಂದ ಈ ಎಲ್ಲರಿಗೂ ಪುಸಲಾಯಿಸಿ ಸಿದ್ಧು ವಿರುದ್ಧ ಕಣಕ್ಕಿಳಿಸಲು ಪ್ರಯತ್ನಿಸಿ, ಪ್ರಯತ್ನಿಸಿ ಸುಸ್ತಾದರೇ ವಿನಃ ಇವರ್‍ಯಾರೂ ಕ್ಯಾಂಡಿಡೇಟ್ ಆಗಲು ಒಪ್ಪಿಲ್ಲ. ಕೊನೆಗೆ ಈಗ ಬೇರೆ ದಾರಿ ಕಾಣದೆ ಲಾಯರ್ ಮಾವಿನಹಳ್ಳಿ ಸಿದ್ದೇಗೌಡರನ್ನು ಹುಡುಕಿ ಕರೆತಂದಿದ್ದಾರೆ ದೇವೇಗೌಡರು.

ಕಳೆದ 25 ವರ್ಷಗಳಿಂದ ಮೈಸೂರಿನಲ್ಲಿ ವಕೀಲ







ಮಾವಿನಹಳ್ಳಿ ಸಿದ್ದೇಗೌಡ

ದೇವೇಗೌಡರ ಪಾಲಿಗೆ ಸಿದ್ಧರಾಮಯ್ಯ ಈಗ ನುಂಗಲಾಗದ ತುತ್ತು. ಚಾಮುಂಡೇಶ್ವರಿ ಬೈ ಎಲೆಕ್ಷನ್ ಎನ್ನುವುದು ಸಿದ್ಧು ಅಥವಾ ಗೌಡರ ಅಳಿವು-ಉಳಿವಿನ ಪ್ರಶ್ನೆ. ಆದರೆ ಪಾಪ, ಸಿದ್ಧು ವಿರುದ್ಧ ಅಖಾಡಕ್ಕಿಳಿಯಲು ತಾಕತ್ತೂ, ಧಂ ಇರುವ ಜನ ಸಿಗುತ್ತಿಲ್ಲ ಗೌಡರಿಗೆ. ಈಗ ಕ್ಯಾಂಡಿಡೇಟ್ ಎನ್ನಲಾಗುತ್ತಿರುವ ಮಾವಿನಹಳ್ಳಿ ಸಿದ್ದೇಗೌಡರು ಅದೇ ಕ್ಯಾಟಗರಿಯವರೆ.

ವೃತ್ತಿ ನಡೆಸುತ್ತಿರುವ ಸಿದ್ದೇಗೌಡರಿಗೆ ಮೈಸೂರು ಜಿಲ್ಲೆಯಾದ್ಯಂತ ಸಾವಿರಾರು ಕಕ್ಷಿದಾರರಿದ್ದಾರೆ. ಅದೇ ರೀತಿ ಚಾಮುಂಡೇಶ್ವರಿ ಕ್ಷೇತ್ರದಲ್ಲೂ ಸಾವಿರಾರು ಪರಿಚಿತ ಕುಟುಂಬಗಳಿವೆ. ಆದರೆ ವ್ಯತ್ಯಾಸ ಏನೆಂದರೆ, ಇದು ಎಲೆಕ್ಷನ್ನೇ ವಿನಃ ಸಿವಿಲ್ ಕೇಸ್ ಅಲ್ಲ. ಸಿದ್ದೇಗೌಡರಿಗೆ ಇದು ಚೆನ್ನಾಗೆ ಗೊತ್ತಿದ್ದರೂ ಗೌಡರ ಬಳಗ 'ನೀನು ಎಲೆಕ್ಷನ್‌ಗೆ ನಿಂತ್ಕೋ, ಮಿಕ್ಕಿದ್ದೆಲ್ಲಾ ನಾವೇ ನೋಡ್ಕೋತೀವಿ' ಎಂಬ ಆಶ್ವಾಸನೆ ಕೊಟ್ಟು ಸಿದ್ದೇಗೌಡರಿಗೆ ತಾಲೀಮು

ಬಿಳಿದಾಳಿ ಈಕ

ನೀಡುತ್ತಿದ್ದಾರೆ.

ಹೇಳಬೇಕೆಂದರೆ ಸಿದ್ದೇಗೌಡರಿಗೆ ರಾಜಕೀಯ, ಎಲೆಕ್ಷನ್ನುಗಳ್ಯಾವುದು ಹೊಸದೇನಲ್ಲ. 1989 ರಲ್ಲೇ ಅವರು ಸಮಾಜವಾದಿ ಜನತಾ ಪಾರ್ಟಿಯಿಂದ ಸ್ಪರ್ಧಿಸಿ ಹತ್ತನ್ನೆರಡು ಸಾವಿರ ಓಟು ಗಳಿಸಿ ಸೋತಿದ್ದರು. 85ರ ಸುಮಾರಿಗೆ ಸಿದ್ಧರಾಮಯ್ಯನವರು ಜಿ.ಟಿ. ದೇವೇಗೌಡರನ್ನು ಬೆಳೆಸುತ್ತಾ ತಮ್ಮನ್ನು ಕಡೆಗಣಿಸುತ್ತಿದ್ದಾರೆಂದು ಮುನಿಸಿಕೊಂಡು ಸಿದ್ದೇಗೌಡರು ಕಾಂಗ್ರೆಸ್ ಸೇರಿದ್ದರು. ಈಗಲೂ ಜಿಟಿಗೂ ಸಿದ್ದೇಗೌಡರಿಗೂ ಅಷ್ಟಕ್ಕಷ್ಟೇ ಎಂಬಂತಿದೆ. ಎಸ್.ಎಂ. ಕೃಷ್ಣಾ ಮುಖ್ಯಮಂತ್ರಿಯಾಗಿದ್ದಾಗ ವೇರ್‌ಹೌಸ್ ಕಾರ್ಪೊರೇಷನ್ ಚೇರ್ಮನ್ ಆಗಿ ಕೆಲಕಾಲ ಅಧಿಕಾರ ಚಲಾಯಿಸಿದ್ದ ಸಿದ್ದೇಗೌಡರು ಈಗ ಸಿದ್ಧ- ರಾಮಯ್ಯ ಕಾಂಗ್ರೆಸ್‌ಗೆ ಬಂದ ನಂತರ ತಾಪ... ದೇವೇಗೌಡರ ಜೊತೆ ಸೇರಿ ಸಿದ್ಧರಾಮಯ್ಯ ಎದುರಾಳಿ- ಯಾಗುತ್ತಿದ್ದಾರೆ.

ದೇವೇಗೌಡರ ಪರದಾಟ

ದೇವೇಗೌಡರಿಗೆ ಈಗಲೂ ಮಾವಿನಹಳ್ಳಿ ಸಿದ್ದೇ- ಗೌಡರ ಬಗ್ಗೆ ಅಷ್ಟೊಂದು ಆಸಕ್ತಿ ಇಲ್ಲ, ಆದರೆ ಅವರಿಗೆ ಬೇರೆ ಅವಕಾಶಗಳೂ ಕಾಣುತ್ತಿಲ್ಲ. ರಾಜಶೇಖರ- ಮೂರ್ತಿಗಳನ್ನು ಕೇಳಿ 'ಆಗಲ್ಲ' ಎನ್ನಿಸಿಕೊಂಡಿದ್ದ ಗೌಡರು ತೀರಾ ಇತ್ತೀಚೆಗೆ ಮತ್ತೆ ಮೂರ್ತಿಗಳನ್ನು ಸಂಪರ್ಕಿಸಿ 'ಅಳಿಯ ಚಿದಾನಂದ್ ಕಣಕ್ಕಿಳಿಯಲಿ' ಎಂದಿದ್ದಾರೆ. ಒಂದು ವೇಳೆ ಚಿದಾನಂದ ಗೆದ್ದರೆ ತಕ್ಷಣ ಮಂತ್ರಿ ಮಾಡುವ ಆಮಿಷವನ್ನು ಗೌಡರು ಒಡ್ಡಿದ್ದಾರೆ. ಅದ- ಕ್ಕೆಂದೇ ಜೆಡಿಎಸ್ ಕೋಟಾಗೆ ಬಂದಿರುವ ಮಂತ್ರಿಗಿರಿ- ಯಲ್ಲಿ ಇನ್ನೂ ಎರಡು ಖಾಲಿ ಇಟ್ಟುಕೊಂಡಿದ್ದೇವೆ. ಅದರಲ್ಲೂ ಲಿಂಗಾಯತರ ಕೋಟಾದಲ್ಲಿ ಅಮರೇಗೌಡ ಬಯ್ಯಾಪುರ ಅರ್ಹರಿದ್ದರೂ ಮಂತ್ರಿ ಮಾಡಿಲ್ಲ ಎಂದೆಲ್ಲಾ ಗಾಳ ಹಾಕಿದ್ದಾರೆ ಗೌಡರು. ಆದರೆ ರಾಜಶೇಖರಮೂರ್ತಿ- ಎಷ್ಟಾದರೂ ಅನುಭವಿ, ಚಾಮುಂಡೇಶ್ವರಿಯಲ್ಲಿ ಈಗ ಗಾಳಿ ಯಾರ ಕಡೆ ಬೀಸುತ್ತಿದೆ ಎಂಬುದನ್ನು ಅರಿಯದಷ್ಟು ದಡ್ಡರೂ ಅಲ್ಲ. ಮೇಲಾಗಿ ಈ ಕೋ-ಜಾ ಸರ್ಕಾರ ಇನ್ನೆಷ್ಟು ದಿನ ಇರುತ್ತೋ ಏನೋ ಎಂಬ ಹಿಂಜರಿಕೆ ಬೇರೆ. ಹಾಗಾಗಿ 'ಚಿದಾನಂದ್ ಬೇಡ' ಎಂದಿದ್ದಾರೆ. ಹಾಗೆಂದಿದ್ದಕ್ಕೆ ಇರುವ ಇನ್ನೊಂದು ಕಾರಣ ಏನೆಂದರೆ ಒಂದು ವೇಳೆ ಚಿದಾನಂದ್ ಸೋತರೆ ಅದು ರಾಜಶೇಖರಮೂರ್ತಿಗಳ ಸೋಲೂ ಆಗುತ್ತದೆ, ಅದ- ರಿಂದ ಮುಂದೆ ಅವರ ರಾಜಕೀಯ ವರ್ಚಸ್ಸೂ ಕುಸಿದು ಬೀಳುತ್ತದೆ ಎಂಬ ಲೆಕ್ಕಾಚಾರ ಅದು. ಹೀಗೆ ಗೌಡರು ಈ ಸುತ್ತೂ ಬಳಸೂ ಅಲೆದಾಟ ಎಲ್ಲಾ ಪೂರೈಸಿ ಖಾಲಿ ಕೈಯಲ್ಲಿದ್ದಾಗಲೇ ಅವರ ಕೈಗೆ ಮಾವಿನಹಳ್ಳಿ ಸಿದ್ದೇಗೌಡ ಸಿಕ್ಕಿದ್ದಾರೆ... ಹರಕೆಯ ಕುರಿಯಾಗಲು....

ಸಿದ್ದೂ ಸಡಗರ

ಬೈ ಎಲೆಕ್ಷನ್ ದಿನಾಂಕ ಇನ್ನೂ ನಿಗಧಿಯಾ- ಗಿರದಿದ್ದರೂ ಚಾಮುಂಡೇಶ್ವರಿಯಲ್ಲಿ ಈಗಾಗಲೇ ಎಲೆಕ್ಷನ್ ಹೀಟ್ ಏರುತ್ತಿದೆ. ಒಕ್ಕಲಿಗ ಮೆಜಾರಿಟಿಯ ಇಲವಾಲ ಹೋಬಳಿ, ಲಿಂಗಾಯತರು ಜಾಸ್ತಿ ಇರುವ ವರುಣ ಹಾಗೂ ದಲಿತ-ಹಿಂದುಳಿದವರ ಪ್ರಾಬಲ್ಯವಿರುವ ಕಡಕೊಳದಲ್ಲೀಗ ಸಿದ್ಧು ಪರ-ವಿರೋಧಗಳ ಫೈನಲ್ ಲೆಕ್ಕ ಆಗುತ್ತಿದೆ.



ಇಲವಾಲದಲ್ಲಿ ಒಕ್ಕಲಿಗರೇ ಹೆಚ್ಚಿದ್ದರೂ ಸಿದ್ಧರಾಮಯ್ಯ ಗೆದ್ದಾಗಲೆಲ್ಲಾ ಅಲ್ಲಿಂದ ಜಾಸ್ತಿ ಓಟುಗಳು ಬೀಳುತ್ತಾ ಬಂದಿದ್ದವು. ಜಿ.ಟಿ. ದೇವೇಗೌಡರ ಪ್ರಾಬಲ್ಯವೇ ಇದಕ್ಕೆ ಕಾರಣವಾಗಿತ್ತು. ಈಗ ಸಿದ್ಧು-ಜಿಟಿ ವೈರಿಗಳಾಗಿದ್ದರೂ ಸಿದ್ಧುಗೆ ಅಪಾಯವಿಲ್ಲ. ಏಕೆಂದರೆ ಜಿಟಿಗೆ ಅಲ್ಲಿ ನಾಗರಾಜ್ ಎಂಬ ಅತ್ಯಂತ ಶಕ್ತಿಶಾಲಿ ಪ್ರತಿಸ್ಪರ್ಧಿಯೊಬ್ಬ ಹುಟ್ಟಿಕೊಂಡಿದ್ದಾರೆ. ಇದರಿಂದಾಗಿ ಈಗ ಇಲವಾಲ ಹೋಬಳಿಯ ಪ್ರತಿ ಹಳ್ಳಿಯೂ ಜಿಟಿ ಬಣ-ನಾಗರಾಜ್ ಬಣ ಎಂದು ವಿಭಜನೆಯಾಗಿ ಹೋಗಿದೆ.

ಈ ನಾಗರಾಜ್ ಈಗ ಸಿದ್ಧರಾಮಯ್ಯ ಪರ ನಿಂತಿದ್ದಾರೆ. ಅಷ್ಟೇ ಅಲ್ಲದೆ ನಾಯಕರ ಲೀಡರ್ ಅಪ್ಪಣ್ಣ ಕೂಡ ಈಗ ಸಿದ್ಧು ಪರ. ಉತ್ತಗೂರು ಎಂಬ ಒಂದೇ ಗ್ರಾಮದಲ್ಲಿ 25 ಸಾವಿರ ನಾಯಕರ ಓಟುಗಳಿವೆ. ಇವರಿಗೆಲ್ಲಾ ಜಾತಿ ಪ್ರಜ್ಞೆ ಎಷ್ಟಿದೆಯೋ ಅದಕ್ಕಿಂತ ಹೆಚ್ಚು ರಾಜನಿಷ್ಠೆ ಇದೆ. ಒಡೆಯರ್ ಈಗ ಕಾಂಗ್ರೆಸ್‌ನಲ್ಲಿರು- ವುದರಿಂದ ಇದೂ ಸಿದ್ಧರಾಮಯ್ಯಗೆ ಅನುಕೂಲವೇ. ಇವರ್‍ಯಾರು ಮಾವಿನಹಳ್ಳಿ ಸಿದ್ದೇಗೌಡರ ಕಡೆ ತಿರುಗಿ ನೋಡುವವರಲ್ಲ.

ಇನ್ನು ಮೈಸೂರು ಸಿಟಿ ವ್ಯಾಪ್ತಿಯ ಕುವೆಂಪುನಗರ, ವಿವೇಕಾನಂದ ನಗರ, ಸಿದ್ಧಾರ್ಥ ನಗರ, ರಿಂಗ್‌ರಸ್ತೆಯ ಒಂದು ಲಕ್ಷ ಮತದಾರರು ... ಸಾಧ್ಯ- ಅಭ್ಯರ್ಥಿಗಳ ಯೋಗ್ಯತೆ ನೋಡಿ ಓಟು ಹಾಕು- ಪೈಕಿ. ಮಾವಿನಹಳ್ಳಿ ಸಿದ್ದೇಗೌಡರೇನೋ ಯೋಗ್ಯರು ಸಂಭಾವಿತರೆ.... ಆದರೇನು ಮಾಡುವುದು ಅವರು ಕಣಕ್ಕಿಳಿಯುತ್ತಿರುವುದು ದೇವೇಗೌಡ, ಕುಮಾರಸ್ವಾಮಿಯ ಅಭ್ಯರ್ಥಿಯಾಗಿ ಮತ್ತು ಜನ ಅಪ್ಪ-ಮಕ್ಕಳನ್ನು ಯಾವ ಕಾರಣಕ್ಕೂ ಈಗ ನಂಬುತ್ತಿಲ್ಲ. ಒಟ್ಟಿನಲ್ಲಿ 'ಒಳ್ಳೆಯವ... ಮಾನ ಹಳ್ಳಿಲೋಯ್ತು' ಎಂಬ ಸ್ಥಿತಿ ಮಾವಿನಹಳ್ಳಿ ಸಿದ್ದೇಗೌಡರಿಗೆ ಕಾದಿರುವಂತಿದೆ.

ಬೈಕು, ಟಿವಿ, ಚಿನ್ನ.... ಆಮಿಷ

ಚಾಮುಂಡೇಶ್ವರಿ ಕ್ಷೇತ್ರದ ಯಾವ ಹಳ್ಳಿ ಯಾವ ಊರಿಗೆ ಹೋದರೂ ಈಗ ಒಂದೇ ಮಾತು.

ಸಿದ್ಧರಾಮಯ್ಯನವರನ್ನು ಹೇಗಾದರೂ ಮಾಡಿ ಸೋಲಿಸಬೇಕೆಂದು ತೀರ್ಮಾನಿಸಿ ಮತದಾರರನ್ನು ಓಲೈಸಲು ಯುವಕರಿಗೆ ಹೊಸಾ ಬೈಕು, ಮಹಿಳೆಯರಿಗೆ 5 ಗ್ರಾಂ ಚಿನ್ನ, ಮನೆಗಳಿಗೆ ಟಿವಿ... ಹೀಗೆ ಹಂಚುವ ವ್ಯವಸ್ಥೆ ಆಗುತ್ತಿದೆ ಎಂಬ ಸುದ್ದಿ ಅದು. ಈ ಲೆಕ್ಕದಲ್ಲಿ ಒಂದು ಸಾವಿರ ಬೈಕುಗಳು, ಹತ್ತು ಸಾವಿರ ಟಿವಿಗಳು ಬರಲಿವೆ ಎನ್ನಲಾಗುತ್ತಿದೆ. ಇದರಲ್ಲಿ ನಿಜ ಎಷ್ಟು, ಉತ್ಪ್ರೇಕ್ಷೆ ಎಷ್ಟೆಂಬುದು ಇಂದಲ್ಲ ನಾಳೆ ಗೊತ್ತಾಗಲಿದೆ. ಆದರೆ ಈ ತಕ್ಷಣದಲ್ಲಿ ದೇವೇಗೌಡ ಮತ್ತವರ ಮಕ್ಕಳಂತೂ ಚಾಮುಂಡೇಶ್ವರಿ ಜನರಿಗೆ ಸರ್ಕಾರದಿಂದ ಏನೇನು ಕೊಡಬಹುದು ಅಷ್ಟೆಲ್ಲವನ್ನೂ ಎತ್ತಿಎತ್ತಿ ಕೊಡುತ್ತಿದ್ದಾರೆ.

ಲೋಕೋಪಯೋಗಿ ಸಚಿವ ರೇವಣ್ಣ ಚಾಮುಂಡೇಶ್ವರಿ ಕ್ಷೇತ್ರದ ವ್ಯಾಪ್ತಿಯ ಜಿಲ್ಲಾ ಪಂಚಾಯಿತಿ ಉಸ್ತುವಾರಿಯಲ್ಲಿದ್ದ 265 ಕಿ.ಮೀ. ಉದ್ದದ ರಸ್ತೆಯನ್ನು ಮೇಲು ದರ್ಜೆಗೇರಿಸುತ್ತೇವೆಂದು ಪಿಡಬ್ಲ್ಯುಡಿಗೆ ಹಸ್ತಾಂತರಿಸಿದ್ದಾರೆ. ಇದಕ್ಕಾಗಿ 10 ಕೋಟಿ ಹಣ ಸಹ ಮಂಜೂರು ಮಾಡಿದ್ದಾರೆ. ಗುತ್ತಿಗೆದಾರರೂ ಆ ಮೂಲಕ ಒಂದಷ್ಟು ಕಾಸು ಮಾಡಿಕೊಂಡು ಜೆಡಿಎಸ್ ಪರವಾಗಿ ಓಡಾಡಲಿ ಎಂಬ ಯೋಚನೆ ಅವರದ್ದು. ಅಷ್ಟೇ ಅಲ್ಲದೆ ಲಕ್ಷಾಂತರ ರೂಪಾಯಿ ವೆಚ್ಚದ ಸಮುದಾಯ ಭವನ, ಕುಡಿಯುವ ನೀರಿನ ಯೋಜನೆಗಳೂ ಚಾಮುಂಡೇಶ್ವರಿ ಜನರಿಗೆ ದಕ್ಕಿವೆ. ಸ್ವತಃ ಮುಖ್ಯಮಂತ್ರಿ ಕುಮಾರಸ್ವಾಮಿಯೇ ಹೇಳಿರುವಂತೆ ಕಳೆದ 6 ತಿಂಗಳಿಂದೀಚೆಗೆ ಈ ಕ್ಷೇತ್ರಕ್ಕೆ ಕನಿಷ್ಠ 40 ಕೋಟಿ ರೂಪಾಯಿಗಳ ಯೋಜನೆಗಳು ಮಂಜೂರಾಗಿವೆ.

ಆದರೆ ತಮಾಷೆ ಏನೆಂದರೆ, ಈ ಸವಲತ್ತುಗಳು ಬರಲಿ ಎಂದು ಖುಷಿಯಾಗಿರುವ ಜನ, 'ಸಿದ್ಧರಾಮಯ್ಯನೋರ್ನ ಸೋಲಿಸಬೇಕೆಂದು ಈ ಅಭಿವೃದ್ಧಿ ಕಾರ್ಯಗಳು ನಡೀತಿವೆ, ಹಾಗಾಗಿ ಇಷ್ಟು ಹಣ ಬರಲು ಒಂದು ರೀತಿಲಿ ಸಿದ್ಧರಾಮಯ್ಯನವರೇ ಕಾರಣ ಬಿಡಿ' ಎನ್ನುತ್ತಿದ್ದಾರೆ. ಇದು ಕುಮಾರಸ್ವಾಮಿ ಪಟಾಲಂಗೆ 'ಪಾಪಿ ಸಮುದ್ರಕ್ಕೆ ಹೋದರೂ ಮೊಣಕಾಲುದ್ದ ನೀರೇ' ಎಂಬಂತಾದರೆ ಏನೂ ಆಶ್ಚರ್ಯವಿಲ್ಲ.

ಮತದಾರರ ಪಟ್ಟಿ ಗೋಲ್‌ಮಾಲ್

ಮೊನ್ನೆ ತಾನೆ ಸಿದ್ಧರಾಮಯ್ಯನವರು ಚುನಾವಣಾ ಆಯೋಗಕ್ಕೆ ಒಂದು ಪತ್ರ ಬರೆದು ಚಾಮುಂಡೇಶ್ವರಿ ಕ್ಷೇತ್ರದ ಮತದಾರರ ಪಟ್ಟಿಯಲ್ಲಿ ಜೆಡಿಎಸ್ ಅಕ್ರಮ ನಡೆಸುವ ಸಾಧ್ಯತೆಯಿದ್ದು, ಆ ಬಗ್ಗೆ ಎಚ್ಚರಿಕೆ ವಹಿಸುವಂತೆ ಮನವಿ ಮಾಡಿಕೊಂಡಿದ್ದಾರೆ.

ಈ ಮುನ್ನೆಚ್ಚರಿಕೆ ಏಕೆಂದರೆ ಮತದಾರರ ಪಟ್ಟಿ ಪರಿಷ್ಕರಿಸುವ ನೆಪದಲ್ಲಿ ಫಾರಂ ನಂಬರ್ 6 ರ ಮೂಲಕ ಪಕ್ಕದ ಹುಣಸೂರು ವ್ಯಾಪ್ತಿಯ ಜೆಡಿಎಸ್ ಮತದಾರರ ಹೆಸರನ್ನು ಚಾಮುಂಡೇಶ್ವರಿ ಕ್ಷೇತ್ರದ ಪಟ್ಟಿಗೆ ಸೇರಿಸಿಬಿಡುವ ಒಂದು ಅಪಾಯ. ಇನ್ನೊಂದು ಫಾರಂ ನಂಬರ್ 7 ರ ಮೂಲಕ ಚಾಮುಂಡೇಶ್ವರಿ ಕ್ಷೇತ್ರದಲ್ಲೇ ಇರುವ ಸಿದ್ಧರಾಮಯ್ಯ ಬೆಂಬಲಿಗ ಮತದಾರರ ಹೆಸರುಗಳನ್ನು ಅವರು ಈಗಾಗಲೇ ಮೃತಪಟ್ಟಿದ್ದಾರೆಂದೋ, ಊರು ಬಿಟ್ಟಿದ್ದಾರೆಂಬ ಕಾರಣ ನೀಡಿ ಪಟ್ಟಿಯಿಂದ ಹೆಸರು ರದ್ದು ಮಾಡಿಸುವ ತಂತ್ರವನ್ನು ಸಿದ್ಧರಾಮಯ್ಯ ಊಹಿಸಿ ಹೀಗೆ ಪತ್ರ ಬರೆದಿದ್ದಾರೆ ಎನ್ನಲಾಗಿದೆ.



ಹೋಟೆಲ್ ಜಿಯೋದಲ್ಲಿ ಹಂತಕ?
ರೈಗೆ ಪ್ರಾಣ ಭೀತಿ!

ಮಾಜಿ ಭೂಗತ ದೊರೆ ಮುತ್ತಪ್ಪ ರೈ ಮತ್ತೆ ಸಾವಿನ ಇಳಿಯುವ ಗಳಿಗೆ ಸನ್ನಿಹಿತವಾಗಿದೆಯೇ? ಅಥವಾ ಆತನ ಜೀವಕ್ಕೆ ಸಂಚಕಾರ ಬಂದಿದೆಯೇ? ಇತ್ತೀಚೆಗೆ ನಡೆಯುವ ಘಟನೆಗಳನ್ನು ನೋಡಿದರೆ ರೈ ಜೀವಭಯ ಎದುರಿಸುತ್ತಿರುವುದು ನಿಜ ಮತ್ತು ಆತನ ವಿರುದ್ಧ ಸಂಚು ರೂಪಿತವಾಗಿರುವುದು ಸಹ ಸತ್ಯ ಎಂಬ ಭಾವನೆ ಬರುತ್ತಿದೆ.

ದುಬೈನಲ್ಲಿ ಭಾರತದ ಸಿಬಿಐಗೆ ಶರಣಾಗಿ ನಂತರ ಬೆಂಗಳೂರು ಪೊಲೀಸರ ವಶಕ್ಕೆ ಬಂದ ಮುತ್ತಪ್ಪ ರೈ. ತನ್ನ ವಿರುದ್ಧವಿದ್ದ ಎಲ್ಲಾ ಮೊಕದ್ದಮೆಗಳಿಂದ ಖುಲಾಸೆಯಾಗಿ ಜೈಲಿನಿಂದ ಬಿಡುಗಡೆಯಾಗಿದ್ದು ಈಗ ಇತಿಹಾಸ. ಬಂಧಮುಕ್ತನಾದ ನಂತರ ರಿಯಲ್ ಎಸ್ಟೇಟ್, ಸಮಾಜ ಸೇವೆ ಗೆಟಪ್ಪಿನಲ್ಲಿ ಕಾಣಿಸಿಕೊಂಡ ರೈ, 'ನಾನೀಗ ಪರಿವರ್ತನೆಯಾಗಿದ್ದೇನೆ, ನನಗೀಗ ಯಾರೂ ವೈರಿಗಳಿಲ್ಲ' ಎಂದು ಹೇಳುತ್ತಿದ್ದನಾದರೂ ಮೈಸೂರು ರಸ್ತೆಯ ಬಿಡದಿ ಸಮೀಪದ ಜನಾಡು (xandu) ರಿಸಾರ್ಟ್‌ನಲ್ಲಿ ಕೋಟೆಯಂತಹ ರಕ್ಷಣಾ ವಲಯವನ್ನು ನಿರ್ಮಿಸಿಕೊಂಡು ತನಗಿರುವ ಪ್ರಾಣ ಭೀತಿಯನ್ನು ಸೂಚಿಸುತ್ತಿದ್ದ. ಆಗಾಗ ಮುತ್ತಪ್ಪ ರೈ ಹೆಸರು ಯಾವುದೋ ಲ್ಯಾಂಡ್ ಡೀಲಿಂಗ್ ಲಿಟಿಗೇಷನ್ನು, ಬೆದರಿಕೆ ಪ್ರಕರಣಗಳಲ್ಲಿ ಕೇಳಿಬಂದಿದ್ದರೂ ಅದಕ್ಕೆ ಅಂತ ಮಹತ್ವ ಬಂದಿರಲಿಲ್ಲ.

ಅವತರಿಸಿದ ಸೋಮಯಾಜಿ

ಆದರೆ ಇದ್ದಕ್ಕಿದ್ದಂತೆ ಅದೆಲ್ಲಿಂದಲೋ ಅವತರಿಸಿದ್ದಾನೆ ಪ್ರಕಾಶ್ ಸೋಮಯಾಜಿ. "ಮುತ್ತಪ್ಪ ರೈನಿಂದ ನನಗೆ ಪ್ರಾಣಭಯವಿದೆ, ನನಗೆ ರಕ್ಷಣೆ ನೀಡಿ, ರೈ ನನ್ನನ್ನು ದುಬೈನಲ್ಲಿ ಬಂಧನಲ್ಲಿಟ್ಟಿದ್ದ, ನನ್ನ ಆಸ್ತಿಯನ್ನು ಬಲವಂತವಾಗಿ ಬರೆಸಿಕೊಂಡಿದ್ದಾನೆ, ನನ್ನಿಂದ 50 ಲಕ್ಷ ರೂಪಾಯಿ ಪಡೆದು ಮರಗಳನ್ನು ಕೊಡುವೆನೆಂದು ಹೇಳಿ ವಂಚಿಸಿದ್ದಾನೆ, ಖಾಲಿ ಹಾಳೆಗೆ ಸಹಿ ಮಾಡಿಸಿಕೊಂಡಿದ್ದಾನೆ, ಈಗ ಬೆಂಗಳೂರಿನಲ್ಲಿರುವ 16 ಎಕರೆ ಜಮೀನನ್ನು ನನ್ನ ಹೆಸರಿಗೆ ಮಾಡು ಎಂದು ಬೆದರಿಸುತ್ತಿದ್ದಾನೆ....." ಹೀಗೆ ಆರೋಪಗಳ ಪಟ್ಟಿಯನ್ನೇ ಮಾಡಿ ಪೊಲೀಸರಿಗೆ ದೂರು ನೀಡಿದ್ದಾನೆ. ಇದೆಲ್ಲಾ ಮುತ್ತಪ್ಪ ರೈ ಯಾವಾಗ ಮಾಡಿದನಪ್ಪ? ಎಂದರೆ 1992 ರ ಫ್ಲಾಷ್‌ಬ್ಯಾಕ್‌ಗೆ ಹೋಗಬೇಕಾಗುತ್ತದೆ.

ಇಂತಹ ಒಂದು ದೂರು ಕೊಡಗು ಜಿಲ್ಲೆಯ ಗೋಣಿಕೊಪ್ಪ ಪೊಲೀಸ್ ಠಾಣೆಯಲ್ಲಿ 1992 ರಲ್ಲಿ ಸೋಮಯಾಜಿ ನೀಡಿದ್ದ. ಈ ದೂರಿನಲ್ಲಿ ಮುತ್ತಪ್ಪ ರೈ, ಆತನ ಪತ್ನಿ ರೇಖಾ ರೈ, ವಕೀಲ ರವೀಂದ್ರನಾಥ ರೈ ಮತ್ತು ಪುಷ್ಪರಾಜ ಶೆಟ್ಟಿ ಸೇರಿದಂತೆ 14 ಜನರ ವಿರುದ್ಧ ಆರೋಪ ಮಾಡಲಾಗಿತ್ತು. ಗೋಣಿಕೊಪ್ಪ ಪೊಲೀಸರು ಈ ದೂರಿನ ಅನ್ವಯ ಈವರೆಗೆ ಒಂದು ಚಾರ್ಜ್‌ಷೀಟ್ ಕೂಡ ಹಾಕಿಲ್ಲ. ಆದರೆ ಇದೇ ಪ್ರಕರಣಕ್ಕೆ ಮತ್ತೆ ಜೀವ ಬಂದಿದ್ದು ಪ್ರಕಾಶ್ ಸೋಮಯಾಜಿ ಸೆಪ್ಟೆಂಬರ್ ತಿಂಗಳಲ್ಲಿ ಕರ್ನಾಟಕ ರಾಜ್ಯ ಪೊಲೀಸ್ ಮಹಾ ನಿರ್ದೇಶಕರಿಗೆ ಪತ್ರ ಬರೆದಾಗ. ಮಾಮೂಲಿ ಪದ್ಧತಿಯಿಂತೆ ಸೋಮಯಾಜಿ ದೂರಿನ ಒಂದು ಪ್ರತಿ ಗೋಣಿಕೊಪ್ಪ ಪೊಲೀಸ್ ಠಾಣೆಗೆ, ಮತ್ತೊಂದು ಪ್ರತಿ ಮಂಗಳೂರಿನ ಬಂಟ್ವಾಳ ಪೊಲೀಸ್ ಠಾಣೆಗೆ ರವಾನೆಯಾಗಿದೆ. 1992 ರಲ್ಲಿ ಮುತ್ತಪ್ಪ ರೈ ವಿಳಾಸ ಬಂಟ್ವಾಳದಲ್ಲಿತ್ತು ಮತ್ತು ಸೋಮಯಾಜಿ ದೂರಿನ ಪ್ರಕಾರ ಘಟನೆ ಗೋಣಿಕೊಪ್ಪ ವ್ಯಾಪ್ತಿಯಲ್ಲಿ ನಡೆದಿತ್ತು. ಹಾಗಾಗಿ ಈ ವ್ಯವಸ್ಥೆ.

ಯಾವಾಗ ಖುದ್ದು ಡಿಜಿಪಿ ಸಿಯಾಲ್ ಸಾಹೇಬರ ಆಫೀಸಿನಿಂದ ದೂರು ರವಾನೆಯಾಯ್ತೋ ಹಿಂದೂ ಮುಂದೂ ಯೋಚಿಸದ ಗೋಣಿಕೊಪ್ಪ ಪೊಲೀಸರು ಒಂದು ಕೇಸ್ ದಾಖಲಿಸೇಬಿಟ್ಟರು. ಡಿ.ಜಿ. ಸಾಹೇಬರ

ಎಂ.ಎಸ್. ಸತೀಶ್

ಕಚೇರಿಗೆ ಬಂದಿದ್ದ ಸೋಮಯಾಜಿ ದೂರಿನ ಪ್ರತಿ ಇಂಗ್ಲಿಷ್ ಪತ್ರಿಕೆಯೊಂದರ ಬಾಲ ತನಿಖಾ ವರದಿಗಾರರ ಕೈಗೆ ಸಿಲುಕಿ ಭಯಂಕರ ಪ್ರಚಾರಕ್ಕೀಡಾಯಿತು. ಮುತ್ತಪ್ಪ ರೈ ಆರೋಪಕ್ಕೆ ಉತ್ತರಿಸುವುದು ಅನಿವಾರ್ಯವಾಯಿತು. ಅದರೊಂದಿಗೆ ಸೋಮಯಾಜಿಯ ಹಿನ್ನೆಲೆ, ಅವನ ಸಂಪರ್ಕಗಳು, ರೈ ಹತ್ಯೆಗೆ ನಡೆದಿರಬಹುದಾದ ಸಂಚು ಮತ್ತು ಅದರಲ್ಲಿ ಸೋಮಯಾಜಿಯ ಪಾತ್ರಗಳ ಅನಾವರಣ ಆರಂಭವಾಯ್ತು. ಇಷ್ಟಾದರು ಕೂಡ ರೈ ಆಪ್ತ ವಲಯಗಳ ಪ್ರಕಾರ ಆತ ನಡೆಸಿದ ಪತ್ರಿಕಾಗೋಷ್ಠಿ ಕೂಡ ಪ್ರಚಾರ ಮತ್ತು ಪ್ರತಿಷ್ಠೆ ಹೆಚ್ಚಿಸಿಕೊಳ್ಳುವ ತಂತ್ರವಾಗಿತ್ತಂತೆ.

ಮಹಾ ಶೋಕಿಲಾಲ

ಬಂಟ್ವಾಳದ ನಿವಾಸಿ ಪ್ರಕಾಶ ಸೋಮಯಾಜಿ ಹುಟ್ಟಿನಿಂದ ಶ್ರೀಮಂತ. ಭಾರಿ ಕೈಗಾರಿಕೋದ್ಯಮಿಯೊಬ್ಬರ ಪುತ್ರ. ಮಹಾಶೋಕಿಲಾಲ. ಅಪ್ಪ ಮಾಡಿದ್ದ ಆಸ್ತಿಯನ್ನು ಈತ ಚಟಕ್ಕಾಗಿ ಕಳೆದಿದ್ದೇ ಹೆಚ್ಚು. ಕಾರು, ಹುಡುಗಿಯರು ಮತ್ತು ಹೆಂಡದ ಹುಚ್ಚು, ಊರ ತುಂಬಾ ಸಾಲ ಮಾಡಿಕೊಂಡಿದ್ದ. ಸಾಲಕ್ಕಾಗಿ ಆಸ್ತಿಯನ್ನು ಮಾರಿಕೊಂಡಿದ್ದ. ಸಾಲಗಾರರು ಬಂದು ಕಾಡಿದಾಗ ರೌಡಿಗಳ ಮೊರೆ ಹೋಗಿದ್ದ. ಇಂತಹವರಲ್ಲಿ ರೈ ಕೂಡ ಒಬ್ಬ. ರೈ ಬಳಿಯೂ ಈತ ಸಾಲ ಮಾಡಿದ್ದ. ಆತನಿಗೆ ತನ್ನ ಆಸ್ತಿಯನ್ನೂ ಮಾರಿದ್ದ. ರೈ ದುಬೈನಲ್ಲಿದ್ದಾಗ ಎರಡು ಬಾರಿ ಅಲ್ಲಿಗೆ ಹೋಗಿ ಬಂದಿದ್ದ. ಒಂದೇ ಮಾತಿನಲ್ಲಿ ಹೇಳಬೇಕೆಂದರೆ ಈತ ಗುಣ, ವಂಚನೆ ಮತ್ತು ಚಟದಲ್ಲಿ ಈಗ ಜೈಲಿನಲ್ಲಿರುವ ಒಂದು ಕಾಲದ ರೈ ಸಹಚರ ಸುಧೀರ್ ಪ್ರಭುವಿನ ತದ್ರೂಪು.


'ಜಿಯೋ'ದಲ್ಲಿ ಹಂತಕ?

ಇಂತಹ ಸೋಮಯಾಜಿಯ ತಂದೆ ಮೃತರಾಗಿದ್ದಾರೆ. ಅದೇನು ಸಮಸ್ಯೆಯೋ ಪತ್ನಿ ವಿಚ್ಛೇದನ ನೀಡಿ ಪ್ರತ್ಯೇಕವಾಗಿ ವಾಸಿಸುತ್ತಿದ್ದಾರೆ. ಅದಕ್ಕಿಂತಾ ವಿಚಿತ್ರವೆಂದರೆ ಸೋಮಯಾಜಿ ಕಳೆದ ಐದು ವರ್ಷದಿಂದ ಬೆಂಗಳೂರು ಮಹಾನಗರ ಪಾಲಿಕೆಯ ಹಿಂಭಾಗದ ರಸ್ತೆಯ ದೇವಾಂಗ ಕಲ್ಯಾಣ ಮಂಟಪದ ಪಕ್ಕದಲ್ಲಿರುವ 'ಜಿಯೊ' ಹೋಟೆಲಿನಲ್ಲಿ ವಾಸವಾಗಿದ್ದಾನೆ. ಇಲ್ಲಿನ ಮತ್ತೊಂದು ನಿಗೂಢವೆಂದರೆ ಸೋಮಯಾಜಿಗೆ ಹೋಟೆಲ್ ರೂಮ್‌ನಲ್ಲಿ ಮತ್ತೊಬ್ಬ ಸಂಗಾತಿ ಇದ್ದಾನೆ. "ನೋಡಲು ಕಾಶ್ಮೀರಿ ಮುಸಲ್ಮಾನನಂತೆ ಕಾಣುವ ಮೂವತ್ತೈದರ ಆಸುಪಾಸಿನ ಈ ಕಟ್ಟುಮಸ್ತಾದ ಯುವಕನ ಹೆಸರು ವಿಕಾಸ್ ಅಂತೆ. ಆದರೆ ಇದು ಸುಳ್ಳು. ಈತ ಮುಸ್ಲಿಂ ಮತ್ತು ಅಲ್‌ಖೈದ ಉಗ್ರಗಾಮಿ ಸಂಘಟನೆಯ ಸಕ್ರಿಯ ಸದಸ್ಯ. ನಕಲಿ ಹೆಸರಿನಲ್ಲಿ ಇಲ್ಲಿ ತಲೆ ಮರೆಸಿಕೊಂಡಿದ್ದಾನೆ. ಮತ್ತು ದೇಶಭ್ರಷ್ಟ ಭೂಗತದೊರೆಗಳಾದ ದಾವೂದ್ ಇಬ್ರಾಹಿಂ ಮತ್ತು ಛೋಟಾ ಶಕೀಲ್‌ರವರ ಆಣತಿಯ ಮೇರೆಗೆ ಈತ ಮುತ್ತಪ್ಪ ರೈನನ್ನು ಕೊಲ್ಲಲು ಸಮಯ ಕಾಯುತ್ತಿದ್ದಾನೆ."

ಹೀಗೆಂದು ಖುದ್ದು ಮುತ್ತಪ್ಪ ರೈ [illegible] ವಿಭಾಗದ (...) [illegible]

[illegible] (ಮುಂದಿನ ಪುಟಕ್ಕೆ)


ರೈ ಮತ್ತು ಸಮಾಜಸೇವೆ



ಮುತ್ತಪ್ಪ ರೈ ಏನೋ "ನಾನೀಗ ಎಂ.ಆರ್. ಫೌಂಡೇಷನ್ ಮೂಲಕ ಸಾಮಾಜಿಕ, ಆರ್ಥಿಕ ಬದಲಾವಣೆ ಮಾಡ್ತೀನಿ, ಸಮಾಜ ಸೇವೆ ಮಾಡ್ತೀನಿ, ಪಾಂಡವಪುರದ ತೊಣ್ಣೂರು ಕೆರೆಯ ಅಭಿವೃದ್ಧಿ, ಪ್ರವಾಸಿ ಧಾಮ ಮಾಡ್ತೀನಿ" ಅಂತ ಹೇಳಿ ತಮ್ಮ ಸಾಮಾಜಿಕ ಕಳಕಳಿಯನ್ನು ಮೆರೀತಾ ಇದಾರೆ. ಅದರ ಜೊತೆಗೆ ಅವರ ಇತ್ತೀಚಿನ ಸಾಮಾಜಿಕ ಚಟುವಟಿಕೆಗಳು ಓದುಗರಿಗೆ ಗೊತ್ತಿರಲಿ ಅಂತ ನಿಮಗೆ ಮಾಹಿತಿ.

ರಾಮನಗರದ ಸಮೀಪ ಬಂಡೆಯಲ್ಲಿ ಬುದ್ಧನನ್ನು ಕೊರೆದು ಜಗತ್ತಿನ ಎಂಟನೇ ಅದ್ಭುತ ಮಾಡುತ್ತೇವೆ ಎಂದು ಹೇಳಿ ಹಿಂದಿ ಚಿತ್ರನಟ ಶಾರೂಖ್ ಖಾನ್‌ನನ್ನು ತಂದು ಕ್ರಿಕೆಟ್ ಸ್ಟೇಡಿಯಂನಲ್ಲಿ ಕುಣಿಸಿದರಲ್ಲ, ಅದರ ಸಂಪೂರ್ಣ ಸೂತ್ರ, ತಂತ್ರ ಮತ್ತು ಬಂಡವಾಳ ಹೂಡಿದ್ದೇ ಮುತ್ತಪ್ಪ ರೈ. ಪಾಪ ಕಾಫಿಗೂ ಕಾಸಿಲ್ಲದೆ ಅಲೆಯುತ್ತಿದ್ದ ರಮೇಶ ಎದುರಿಗೆ ಕಂಡ ಎಂಬ ಕಾರಣಕ್ಕಾಗಿ ಎಲ್ಲರೂ ಅವನಿಗೆ ಹಿಗ್ಗಾಮುಗ್ಗಾ ಜಾಡಿಸಿಬಿಟ್ಟರು.

ನಿವೃತ್ತ ಪೊಲೀಸ್ ಕಮಿಷನರ್ ಬಿ.ಎನ್. ಗರುಡಾಚಾರ್‌ರವರ ಪುತ್ರ ಉದಯ್ ಒಡೆತನದ 'ಗರುಡಾಮಾಲ್'ನಲ್ಲಿರುವ 'ಇಂಟ್' ಡಿಸ್ಕೋಥೆಕ್ ನಡೆಸುತ್ತಿದ್ದುದು ರೈ ಪುತ್ರ. ಸದ್ಯಕ್ಕೆ ಆತ ದುಬೈನಲ್ಲಿ ನೆಲೆಸಿದ್ದಾನೆ. ಎಂ.ಜಿ. ರಸ್ತೆಯಲ್ಲಿರುವ ಶೃಂಗಾರ್ ಕಾಂಪ್ಲೆಕ್ಸ್‌ನಲ್ಲಿರುವ 'ಟ್ಯಾಮ್ರಿಂಡ್' ಡಿಸ್ಕೋಥೆಕ್ ಕೂಡ ರೈ ಮಾಲೀಕತ್ವದ್ದು. ಇನ್ನು ದೇವನಹಳ್ಳಿ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣದ ಸುತ್ತಾಮುತ್ತಾ ಸೇರಿದಂತೆ ಬೆಂಗಳೂರಿನ ಪ್ರೈಮ್ ಏರಿಯಾಗಳಲ್ಲಿ 'ರೈ ರಿಯಲ್ ಎಸ್ಟೇಟ್'ಗಳಿವೆ.







ರೈಗೆ ಗಂಟು ಬಿದ್ದಿರುವ ಟುಸ್ಸ್ ಬಾಂಬು!

ಇರಲಿ, ಮುತ್ತಪ್ಪ ರೈಗೆ ಪತ್ರಿಕೆ ಆರಂಭಿಸಿ ಎಂದು ಅದ್ಯಾರು ಕಿವಿಯಲ್ಲಿ ಹುಳ ಬಿಟ್ಟರೊ ಗೊತ್ತಿಲ್ಲ, ಒಟ್ಟಿನಲ್ಲಿ ಸದ್ಯದಲ್ಲೇ ಅವರೊಂದು ಪತ್ರಿಕೆ ಆರಂಭಿಸಲಿದ್ದಾರೆ. ಹ್ಯಾಗಿದೆ ನೋಡಿ ಕಾಂಬಿನೇಷನ್ನು. ಪತ್ರಿಕೆಯ ಮಾಲೀಕರು ಮಾಜಿ ಭೂಗತ ದೊರೆ. ಅದರ ಸಂಪಾದಕರು ಡಿಸ್‌ಮಿಸ್ಡ್ ಪೊಲೀಸ್ ಸಬ್‌ಇನ್ಸ್‌ಪೆಕ್ಟರ್. ಈಗ ಅರ್ಥವಾಗಿರಬೇಕಲ್ಲವೆ? ಮುತ್ತಪ್ಪ ರೈ ಪತ್ರಿಕೆಗೆ ಬಾಂಬ್ ಖ್ಯಾತಿಯ ಗಿರೀಶ್ ಮಟ್ಟಣ್ಣನವರ್ ಸಂಪಾದಕರಂತೆ. ಇವರಿಬ್ಬರೂ ಈಗ ಪಡೆಸಲು ಹೊರಟಿರುವ ವಾರಪತ್ರಿಕೆ ಪಕ್ಕಾ ಚೆಡ್ಡಿಗಳ ಪತ್ರಿಕೆ. ಕಳೆದ ಎರಡು ವರ್ಷಗಳಿಂದ ಈ ರಾಜ್ಯದ ಕೋಮು ಸೌಹಾರ್ದವನ್ನು ಕೆಡಿಸಿ, ಅಲ್ಪಸಂಖ್ಯಾತರ ವಿರುದ್ಧ ಹಿಂದೂಗಳನ್ನು ಎತ್ತಿಕಟ್ಟಲು ಪ್ರಯತ್ನಿಸುತ್ತಾ ಹೈರಾಣಾಗಿರುವ ಪತ್ರಿಕೆ.



ಸದ್ಯಕ್ಕೆ ಗಿರೀಶ್ ಮಟ್ಟಣ್ಣನವರ್ ಭಾರತೀಯ ಜನತಾ ಪಕ್ಷದ ಯುವ ಮೋರ್ಚಾದ ಉಪಾಧ್ಯಕ್ಷರೆಂದು ಕೇಳಿದ ನೆನಪು. ಲೆಕ್ಕ ಕೊಡಿ ಚಳವಳಿ, ಅದ್ಯಾರೋ ಗಿರಿಜನರ ಹಾಡಿಯಲ್ಲಿ ಮಲಗುವುದು, ಹೀಗೆ ದಿನಕ್ಕೊಂದು ವಿಚಿತ್ರ ಮಾಡಿ ಸುದ್ದಿಯಾಗುವ ಮಟ್ಟಣ್ಣನವರ್ ಮೊದಲು ಪೊಲೀಸ್ ಆಗಿ ಲಾಠಿ ತಿರುವುತ್ತಿದ್ದರು. ನಂತರ ಬಿಜೆಪಿ ಸೇರಿ ಚೆಡ್ಡಿ ತೊಟ್ಟರು. ಎರಡೂ ಹೇಳಿ ಮಾಡಿಸಿದ ಕಾಂಬಿನೇಷನ್ನೇ. ಮಟ್ಟಣ್ಣನವರ್ ಸಹ, ಮುತ್ತಪ್ಪ ರೈನ ಇತ್ತೀಚಿನ ವೈರಿ ಸೋಮಯಾಜಿಯನ್ನು ಸ್ವಲ್ಪಮಟ್ಟಿಗೆ ಹೋಲುತ್ತಾರೆ.

ಏಕೆಂದರೆ ಹತ್ತೊಂಬತ್ತು ವರ್ಷದ ಹಿಂದೆ ನಡೆದ ಘಟನೆಯ ಬಗ್ಗೆ ಸೋಮಯಾಜಿ ಈಗ ದೂರು ನೀಡುತ್ತಾನೆ. ಮಟ್ಟಣ್ಣನವರ್ ಸುಮಾರು ಮೂರು ವರ್ಷದ ಹಿಂದೆ ಜೈಲಿನಲ್ಲಿದ್ದಾಗ ಅಲ್ಲಿದ್ದ ಛಾಪಾ ತೆಲಗಿಯನ್ನು ನೋಡಲು ಅಂದಿನ ಗೃಹ ಸಚಿವ ಮಲ್ಲಿಕಾರ್ಜುನ ಖರ್ಗೆ ಬಂದಿದ್ದರೆಂದು [illegible] ಹೇಳುತ್ತಾರೆ. ಮುತ್ತಪ್ಪ ರೈಗೆ ಇದು ನೆನಪಿರಲಿ.

[illegible] ಎಂದಂತೆ ಪತ್ರಿಕೆಯಾ.....?

ಜಾತ್ಯತೀತರ ಮೇಲೆ ಕೇಸ್

ಚೆಡ್ಡಿಗಳ ಭಂಟ ಎಂ.ಪಿ.ಪ್ರಕಾಶ್!

[illegible] ಚಿಕ್ಕಮಗಳೂರು ಪೊಲೀಸಪ್ಪರು ಕರ್ನಾಟಕ ಕೋಮು ಸೌಹಾರ್ದತಾ ವೇದಿಕೆ ಹಾಗೂ ಇನ್ನಿತರ ಸಹ ಸಂಘಟನೆಗಳ ಕಾರ್ಯಕರ್ತರ ಮೇಲೆ ಈಗ ಸುಳ್ಳು ಕೇಸುಗಳನ್ನು ಹಾಕಿದ್ದಾರೆ.


KA-19, KA-20 ಪಾಸಿಂಗ್ ಇರುವ ಬಸ್, ಮ್ಯಾಕ್ಸಿಕ್ಯಾಬ್‌ಗಳಲ್ಲಿ ಬಂದಿದ್ದ ಸೌಹಾರ್ದ ವೇದಿಕೆಯವರು ಬೋಳ ರಾಮೇ ಶ್ವರ ದೇವರ ಪೂಜೆಗೆ ಹೊರಟವನನ್ನು ಸಿಕ್ಕಾ ಪಟ್ಟೆ ಹೊಡೆದರಂತೆ! ರಾಡು ತೊಗೊಂಡು ಹೊಡೆದರಂತೆ! ಅವನನ್ನು ಚರಂಡಿಗೆ ಎಸೆದ ರಂತೆ!!

ಈಗ ಎರಡನೇ FIR ಸಿದ್ಧವಾಯ್ತು!


ಕೋಮು ಸೌಹಾರ್ದ ವೇದಿಕೆಯ ಭಾಷಣಕಾರರು ಅವಾಚ್ಯ ಶಬ್ದ ಬಳಸಿದರಂತೆ! ಈ ಸರ್ಕಾರವನ್ನು 'ಕೋಜಾ' ಅಂದರಂತೆ!! ಬತ್ತು ಮತ್ತೊಂದು FIR!! (ಕೋಮುವಾದಿ-ಜಾತ್ಯತೀತ ಪಕ್ಷಗಳ ಸರ್ಕಾರವನ್ನು ಕೋ-ಜಾ ಎನ್ನುವುದುಂಟು)

ಇದು ಮಾನಗೇಡಿ ಚಿಕ್ಕಮಗಳೂರು ಪೊಲೀಸರ ಮುಠ್ಠಾಳತನ ಎಂದು ಬಿಟ್ಟರೆ ಅದು ಅಪೂರ್ಣವಾಗುತ್ತದೆ. ಇದು ಈ ಕೋಮುವಾದಿ ಸರ್ಕಾರದ ತಲೆಕೆಟ್ಟ ಆಡಳಿತ ಶೈಲಿ.... ಇದು ದೇವೇಗೌಡ, ಎಂ.ಪಿ. ಪ್ರಕಾಶ್‌ಗಳು ಪಂಚೆ, ಪ್ಯಾಂಟುಗಳ ಕೆಳಗೆ ಖಾಕಿ ಚಡ್ಡಿ ತೊಟ್ಟ ಪ್ರಸಂಗ... ಇದು ಕರ್ನಾಟಕ ಕಂಡ ಅತಿ ಭ್ರಷ್ಟ, ಪಕ್ಕಾ ಕೋಮುವಾದಿ ಸರ್ಕಾರವೊಂದರ ಕುಚೋದ್ಯ! ಹಿಂದೊಮ್ಮೆ ಕರಾವಳಿ ಪೊಲೀಸರು 'ಲೆಫ್ಟಿಸ್ಟ್‌ರಿಂದ ಸಮಾಜದ ಶಾಂತಿ ಕದಡುತ್ತದೆ' ಎಂದು 'ಸಂಶೋಧನೆ' ಮಾಡಿ ಜನರಿಂದ ಛಿ, ಥೂ ಎನಿಸಿಕೊಂಡಿದ್ದವು. ಈಗ ಉಗಿಸಿಕೊಳ್ಳುವ ಸರದಿ ಚಿಕ್ಕಮಗಳೂರು ಪೊಲೀಸರದು, ಅವರ ಹಿಂದೆ ನಿಂತಿರುವ ಚೆಡ್ಡಿ ಪಟಾಲಂನದು....

ಸೆಪ್ಟಂಬರ್ 27 ನೇ ತಾರೀಖು ಚಿಕ್ಕಮಗಳೂರಿನಲ್ಲಿ ನಡೆದ ಸೌಹಾರ್ದ ವೇದಿಕೆ ಸಭೆ ನಿರೀಕ್ಷೆ ಮೀರಿ ಯಶಸ್ವಾಗಿದೆ. ನಾಲ್ಕು ಸಾವಿರದಷ್ಟು ಜನ ಸೇರಿ ಬಾಬಾಬುಡನ್ ಗಿರಿಯಲ್ಲಿ ಕೋರ್ಟ್ ಆದೇಶ ಉಲ್ಲಂಘಿಸುತ್ತಿರುವ ಕೋಮುವಾದಿ ಸರ್ಕಾ ರದ ವಿರುದ್ಧ ತಮ್ಮ ಧ್ವನಿ ಎತ್ತಿದ್ದರು.



ಮೆರವಣಿಗೆಗೆ 23 ರಂದು ಅನುಮತಿ ಕೇಳಿದಾಗಿನಿಂದ ಪೊಲೀಸರು ಸತಾಯಿಸುತ್ತಲೇ ಬಂದಿದ್ದಾರೆ. ಎಂ.ಜಿ. ರಸ್ತೆಯಲ್ಲಿ ಈ ಹಿಂದೆ ಚೆಡ್ಡಿಗಳ ಚಿತಾವಣೆಯಿಂದ ಗಲಾಟೆ ಆಗಿತ್ತು, ಆಗ ಆ ರಸ್ತೆಯಲ್ಲಿ ಮೆರವಣಿಗೆ ನಿಷೇಧ ಮಾಡಲಾಗಿತ್ತು. ಆದರೆ ಮೊನ್ನೆ 27 ನೇ ತಾರೀಖಿನಂದು ಅಲ್ಲಿ ಗಣಪತಿ ಉತ್ಸವದ ಮೆರವಣಿಗೆಗೆ ಅವಕಾಶ ಕೊಟ್ಟದೆ ಜಿಲ್ಲಾಡಳಿತ!



ಕೋಮುಸೌಹಾರ್ದ ವೇದಿಕೆಯ ಸಭೆ

ಆದರೆ ಜಾತ್ಯತೀತರು ಆಜಾದ್ ಸರ್ಕಲ್ ಬಳಿ, ಅಥವಾ ಬಸ್‌ಸ್ಟಾಂಡ್ ಬಳಿ ಅವಕಾಶ ಕೇಳಿದರೂ ಪರ್ಮಿಷನ್ ಕೊಡಲಿಲ್ಲ, ಹನುಮಂತಪ್ಪ ಸರ್ಕಲ್ಲಿನಿಂದ ಮೆರವಣಿಗೆಗೆ ಅನುಮತಿ ನೀಡಿದ್ದಾರೆ. ರ್‍ಯಾಲಿಯುದ್ದಕ್ಕೂ ಪೊಲೀಸಪ್ಪಗಳು ಇದ್ದರು. ಎ.ಎಸ್.ಪಿ. ಫಣೀಂದರ್‌ಸಿಂಗ್ ಸೌಹಾರ್ದಿಗಳು ಭಾಷಣ ಮಾಡುವುದಕ್ಕೂ ಅಡ್ಡಿಪಡಿಸಿದರು. ಕೊನೆಗೂ ಜನರ ಧ್ವನಿ ಎದುರು ನಿಲ್ಲಲಾರದೇ ಅನುಮತಿ ಕೊಟ್ಟರು. ಅಲ್ಲಿಗೆ ಈ ಕೋಮುವಾದಿ ಸರ್ಕಾರವನ್ನು ಬೆತ್ತಲು ಮಾಡುವ ಭಾಷಣಗಳ ಅಭಿವ್ಯಕ್ತಿಯೊಂದಿಗೆ ಒಂದು ಯಶಸ್ವಿ ಜಾತ್ಯತೀತರ ಪರವಾದ, ಕೋಮುವಾದಿಗಳ ವಿರೋಧಿ ಸಭೆ ಕೊನೆಗೊಂಡಿತು!

ಈ ಯಶಸ್ಸೆ ಚೆಡ್ಡಿಗಳಿಗೆ ಭೀತಿ ಹುಟ್ಟಿಸಿದೆ. ಬಿಜೆಪಿಗಳಿಂದ ಆಗ ಶುರುವಾಗಿದೆ ಚಿತಾವಣೆ!!

ಪೊಲೀಸರು ತಾವೇ ಯಾರ್‍ಯಾರನ್ನೋ ಕರೆತಂದು ಮೂರು ಸುಳ್ಳು ದೂರುಗಳನ್ನು ಸೌಹಾರ್ದ ವೇದಿಕೆಯವರ ವಿರುದ್ಧ ರೆಡಿ ಮಾಡಿದ್ದಾರೆ.

ಚಿಕ್ಕಮಗಳೂರು

FIR 347 ರಲ್ಲಿ ಹೀಗಿದೆ:

"27 ರಂದು 11 ಗಂಟೆ ವೇಳೆಗೆ ಪಿರ್ಯಾದಿ (ಕೆ.ಎಸ್. ದೇವರಾಜೇಗೌಡ) ಬೋಳರಾಮೇಶ್ವರ ದೇವರ ಪೂಜೆಗೆ ಹೋಗಿದ್ದು, ಅಲ್ಲಿ ಕೋಮು ಸೌಹಾರ್ದ ವೇದಿಕೆಯವರು ಸಭೆ ನಡೆಸುತ್ತಿದ್ದು, ಅವರುಗಳು ಪಿರ್ಯಾದಿಯನ್ನು ನೋಡಿ ಪಿರ್ಯಾದಿ ಮತ್ತು ದೇವರನ್ನು ಸೇರಿಸಿ ಬಾಂಬ್ ಹಾಕಿ ಉಡಾಯಿಸಬೇಕೆಂದು ಹೇಳಿದ್ದು ಏಕೆ ಎಂದು ಪಿರ್ಯಾದಿ ಕೇಳಿದರೆ ಮೇಲ್ಕಂಡ ವೇದಿಕೆಯ 25 ಜನರು ಪಿರ್ಯಾದಿಯನ್ನು ಹಿಡಿದು ಎಳೆದಾಡಿ ಸೂಳೆಮಗನನ್ನು ಮುಗಿಸಿ ಎಂದು ಕಬ್ಬಿಣದ ರಾಡನ್ನು ತೆಗೆದುಕೊಂಡು ಹಲ್ಲೆ ಮಾಡಿದ್ದಲ್ಲದೇ, ಪಿರ್ಯಾದಿಯನ್ನು ಅಟ್ಟಿಸಿಕೊಂಡು ಬರುತ್ತಿರುವಾಗ ಇನ್ನೊಮ್ಮೆ ಸಿಕ್ಕರೆ ಕೊಲೆ ಮಾಡದೇ ಬಿಡುವುದಿಲ್ಲವೆಂದು ಪಿರ್ಯಾದಿಯನ್ನು ಚರಂಡಿಗೆ ಎಸೆದಿರುತ್ತಾರೆ. ಸದರಿ ಸದಸ್ಯರುಗಳು ಪಿರ್ಯಾದಿ ಮತ್ತು ದೇವರ ವಿಚಾರದಲ್ಲಿ ಕ್ರೋಧಗೊಂಡು ಅಪರಾಧ ಎಸಗಿದ್ದಾರೆ...."

ಇದೆಂತಹ ಹಸಿಸುಳ್ಳು ಎಂಬುದು ಓದಿದವರಿಗೆಲ್ಲ ಅರ್ಥ ಆಗುತ್ತೆ. KA-19, KA-20 ರಿಜಿಸ್ಟ್ರೇಷನ್ ವಾಹನಗಳು ಉಡುಪಿ, ಮಂಗಳೂರಿನವು. ಅವುಗಳಲ್ಲಿ ಬಂದವರಲ್ಲಿ ಬಹು ತೇಕರು 'ಕರ್ನಾಟಕ ಫೋರಂ ಫಾರ್ ಡಿಗ್ನಿಟಿ' (KFD)ಯ ಸದಸ್ಯರು.



ಎಸ್ಪಿ ವಿಪುಲ್ ಕುಮಾರ್

ಅಷ್ಟು ಸಾಕಲ್ಲವೆ ಚೆಡ್ಡಿಗಳಿಗೆ, ಚೆಡ್ಡಿಗಳ ಮರ್ಜಿ ಯಲ್ಲಿ ಆಡಳಿತ ನಡೆಸುವ ಪೊಲೀಸರಿಗೆ!

ವೈ.ಜಿ. ಸುರೇಶ್ ಎನ್ನುವ ಕಂಪ್ಲೆಂಟ್‌ದಾರನ ಹೆಸರಲ್ಲಿರುವ ಎಫ್‌ಐಆರ್ ಅಂತೂ 'ಭೀಕರ' ವಾಗಿದೆ. 'ದೇವರ ವಿರುದ್ಧವೇ ಅಕ್ರಮ ಕೂಟ' ವಂತೆ!!

ಒಟ ಗೋಡಿ, [illegible] ಚಿಕ್ಕಮಗಳೂರು ಪೊಲೀಸರ [illegible]

"ಈ ಮೇಲ್ಕಂಡ ಆರೋಪಿಗಳು (ಅ KA-19, KA-20, ವಾಹನಗಳಲ್ಲಿದ್ದವ ಹಿಂದೂ ದೇವರ ವಿರುದ್ಧ ಅಕ್ರಮ ಕೂ ಕಟ್ಟಿಕೊಂಡು ಕೆಟ್ಟಕೆಟ್ಟ ಭಾಷೆಗಳಿಂದ ದೇ ವಿಚಾರದಲ್ಲಿ ಪಿರ್ಯಾದಿಯನ್ನು ದ್ವೇಷ ಭಾ ಯಿಂದ ಉದ್ದೇಶಪೂರ್ವಕವಾಗಿ ವಿಧಿ ವಿ ವಾದ ದೊಂಬಿ ಅಪರಾಧಕ್ಕೆ ಉದ್ರೇಕಗೊಳಿಸಿದ್ದಲ್ಲ ಭಾವೈಕ್ಯತೆಗೆ ಬಾಧಕವಾಗುವ ರೀತಿಯಲ್ಲಿ ಹಿಂದೂ ದೇವ ಗಳನ್ನು ಕುರಿತು ಅವಹೇಳನ ಪದಗಳಿಂದ ಹೀಯಾ ಮತೀಯ ಭಾವನೆಗೆ ಧಕ್ಕೆ ಉಂಟುಮಾಡಿದ್ದಾರೆ...."

ಚೆಡ್ಡಿಗಳು ಅನ್ಯಧರ್ಮದ ವಿರುದ್ಧ ಕಿಡಿಕಾರುತ್ತವ ಅದನ್ನೇ ಉಲ್ಟಾ ಮಾಡಿ ಇಲ್ಲಿ ಸೌಹಾರ್ದ ವೇದಿಕೆಯ ತಲೆಗೆ ಕಟ್ಟಲಾಗಿದೆ. ಇಷ್ಟಕ್ಕೆ ಸುಮ್ಮನಾಗದ ಪೊಲೀಸ ಮೂರನೇ ಎಫ್.ಐ.ಆರ್.ನಲ್ಲಿ ನೇರವಾಗಿ ಬಸವರಾ ದೇವರು, ಕೆ.ಎಲ್. ಅಶೋಕ್, ಕೆ.ಎಮ್. ಶರೀ ನಗರಿಬಾಬಯ್ಯ, ಕಲ್ಕುಳಿ ವಿಠಲ ಹೆಗ್ಡೆ, ಶಿವಮೊಗ್ಗ ಆ ಹೂವಪ್ಪರ ಮೇಲೆ ಸುಳ್ಳು ಅಪಾದನೆ ಮಾಡಿದ್ದಾರೆ. ಇವ ಹಿಂದೂ ದೇವರುಗಳನ್ನು ಹೀನಾಯವಾಗಿ ಬೈದರಂ ಹಿಂದೂಗಳನ್ನು ನಾಯಿಗಳು ಎಂದುಬಿಟ್ಟರಂತೆ! ಸುಳ್ಳಿಗ ಒಂದು ಮಿತಿ ಬೇಡವೆ? ಆವತ್ತು ಭಾಷ ಗಳು ನಡೆಯುವಾಗ ಸುತ್ತಲೂ ನಿಂತಿ ಪೊಲೀಸರಿಗೆಲ್ಲ ಸತ್ಯ ಏನೆಂದು ಗೊತ್ತಿ ಮೊದಲೇ ಭಾಷಣ ಬೇಡ ಎಂದಿ ಎ.ಎಸ್.ಪಿ. ಫಣೀಂದರ್‌ಸಿಂಗ್ ಅಂ ಭಾಷಣ ಕೇಳಿ ಸುಮ್ಮನಿರುತ್ತಿದ್ದನಾ? ಎಸ ವಿಪುಲ್ ಕುಮಾರ್‌ಗೆ ಅಭಿವ್ಯಕ್ತಿ ಸ್ವಾತಂತ್ರ್ಯ ಬಗ್ಗೆ ಅರಿವಿದೆಯಾ? ಜಾತ್ಯತೀತತೆ ಬ ಮಾತನಾಡುವುದು ಜನರನ್ನು ಉದ್ರೇ ಗೊಳಿಸುತ್ತದಾ? ಹಾಗಾದರೆ ಗಾಂಧೀ ವಿರುದ್ಧವೂ ಎಫ್.ಐ.ಆರ್. ಹಾಕ್ತಾರ ಕಲಾಂ ವಿರುದ್ಧವೂ ಹಾಕಬೇಕಲ್ಲವೆ?

'ಕರ್ನಾಟಕವನ್ನು ಮತ್ತೊಂದು ಗು ರಾತ್ ಮಾಡುತ್ತೇವೆ' ಎಂದು ಬಹಿರಂ ವಾಗಿ ಚೀರಿಕೊಂಡ ಅನಂತ ಕುಮಾ ಮುತಾಲಿಕ್, ಸಿ.ಟಿ. ರವಿಗಳಂತಹವ ದಲೇ ಅಲ್ಲವೇ ಈ ಸಮಾಜದ ಶಾಂ ಕದಡುವುದು... ಅಂತವರ ವಿರುದ್ಧ FIR ಗಳಿಲ್ಲವೇ ಕೋರ್ಟ್ ಆದೇಶವನ್ನೇ ಉಲ್ಲಂಘಿಸುವ ಅವಕಾಶವ ಕೋಮುವಾದಿ ಸರ್ಕಾರಕ್ಕೆ ತಕ್ಕಂತೆ ಇದೆ ಚಿಕ್ಕಮಗಳೂರ ತಲೆತಿರುಕ ಪೊಲೀಸ್ ವ್ಯವಸ್ಥೆ!

ಸಿಎಂ ಕುಮಾರಸ್ವಾಮಿ, ಗೃಹಸಚಿವ ಎಂ.ಪಿ. ಪ್ರಕಾಶ ಆಡಳಿತದಲ್ಲಿ ಜಾತ್ಯಾತೀತರ, ಪ್ರಗತಿಪರರ ಮೇಲೆ ಸು ಕೇಸ್‌ಗಳನ್ನು ಹಾಕಲಾಗುತ್ತಿದೆ. ಅಧಿಕಾರದ ಆಸೆಗೆ ಬಿ ಪ್ರಕಾಶ್ ಸಹ ಪಕ್ಕಾ ಚೆಡ್ಡಿ ಆಗಿದ್ದಾರೆ, ಪ್ರಗತಿಪರರ ಮೇ ಪೊಲೀಸರನ್ನು ಛೂ ಬಿಟ್ಟು ಚೆಡ್ಡಿಗಳ ಓಲೈಕೆ ಮಾಡುತ್ತಿದ್ದಾ

-ಪಿ.ಕೆ. ಮಲ್ಲನಗೌಡರ

ಮುತ್ತಪ್ಪ ರೈಗೆ ಪ್ರಾಣ ಭೀತಿ!

(11ನೇ ಪುಟದಿಂದ)

ಕರೆಸಿದ ಪೊಲೀಸ್ ಅಧಿಕಾರಿಗಳ ಮುಂದೆ ಈ ವಿಚಾರ ಬಹಿರಂಗ ಪಡಿಸಿದ ರೈ "ಸದಾ ಕಾಲ ಶಸ್ತ್ರದಾರಿ ಅಂಗರಕ್ಷಕರ ರಕ್ಷಣೆಯಲ್ಲೇ ಇರುವ ನನ್ನನ್ನು ಹೇಗಾದರೂ ಮಾಡಿ ಹೊರಗೆ ಬರುವಂತೆ ಮಾಡಿ ಕೊಲ್ಲುವ ಉದ್ದೇಶದಿಂದ ಪ್ರಕಾಶ್ ಸೋಮಯಾಜಿಯನ್ನು ಬಳಸಿಕೊಳ್ಳಲಾಗುತ್ತಿದೆ" ಎಂದು ಆರೋಪಿಸಿದ್ದಾನೆ. ವಿಷಯ ತಿಳಿಯುತ್ತಿದ್ದಂತೆ ಸಿಸಿಬಿ ಪೊಲೀಸರು 'ಜಿಯೋ' ಹೋಟೆಲ್ ರೂಮನ್ನು ಸುತ್ತುವರಿದಿದ್ದಾರೆ. ಆದರೆ ಎರಡು ದಿನದಿಂದ 'ವಿಕಾಸ್' ಮತ್ತು ಸೋಮಯಾಜಿ ಪತ್ತೆ ಇಲ್ಲ. ಸೆಪ್ಟಂಬರ್ 29ರ ಬೆಳಗಿನ ಜಾವ ಬೆಂಗಳೂರು ಮತ್ತು ಮಂಗಳೂರು ಪೊಲೀಸರು ಮತ್ತೆ ಜಂಟಿಯಾಗಿ ಜಿಯೋ ಹೋಟೆಲಿನ ಮೇಲೆ ಸೋಮಯಾಜಿಗಾಗಿ ರೇಡ್ ಮಾಡಿದ್ದಾರೆ. ಸೋಮ ಯಾಜಿಯಾಗಲಿ ವಿಕಾಸ್ ಆಗಲಿ ಸಿಕ್ಕಿಲ್ಲ. ಸೋಮಯಾ ವಿರುದ್ಧ ಮಂಗಳೂರಿನಲ್ಲಿ ಹಲವಾರು ಕಾರುಗಳ ಕಳ ಪ್ರಕರಣಗಳು ದಾಖಲಾಗಿವೆಯಂತೆ. ಈ ಹಿನ್ನೆಲೆಯ ದಾಳಿ ನಡೆಸಲಾಗಿದೆ. ಹೀಗೆ ಕಳುವಾದ ಕಾರುಗ ದುಷ್ಕೃತ್ಯಗಳಿಗೆ ಬಳಕೆಯಾಗಿದೆಯೇ? ಎಂದು ತನಿಖೆಯಿಂ ಪತ್ತೆಯಾಗಬೇಕಿದೆ.

ಮುತ್ತಪ್ಪ ರೈ ಮೇಲೆ ಹಿಂದೆ ಒಮ್ಮೆ ನಾರಾಯ ಸಾಲಿಯಾನ ಎಂಬಾತ ವಕೀಲನ ವೇಷದಲ್ಲಿ ಬಂ ಗುಂಡು ಹಾರಿಸಿದ್ದ. ಆಗ ರೈ ಪ್ರಾಣಾಪಾಯದಿಂ ಪಾರಾಗಿದ್ದ. ಮಂಗಳೂರಿನಲ್ಲಿ ನಡೆದ ಅಮರ್ ಅ ಹತ್ಯೆಗೆ ಪ್ರತೀಕಾರದ ಕ್ರಮ ಅದಾಗಿತ್ತು.

ನಂತರ ಕಳೆದ ವರ್ಷ, ಬಿಲ್ಡರ್ ಸುಬ್ಬರಾಜು ಕೊ ಪ್ರಕರಣದ ಪ್ರಮುಖ ಆರೋಪಿ ಶಾರ್ಪ್‌ಶೂಟ ಯೂಸೂಫ್ ಬಚ್ಚಾನನ ಅಣ್ಣ ಅಬ್ದುಲ್ ರಜಾಕ್ ಹತ್ಯೆಗೆ ಸಂಚು ರೂಪಿಸಿದ್ದ. ಆದರೆ ಈ ಸಂ ಕೈಗೂಡುವ ಮುನ್ನವೇ ಕೇಂದ್ರ ಅಪರಾಧ ವಿಭಾಗ ಎಸಿಪಿ ಬಿ.ಕೆ. ಶಿವರ್‍ಹಾಂ ಅವನನ್ನು ಎನ್‌ಕೌಂಟರ್ ಮಾ ಸಾಯಿಸಿದರು.

ಸಾಲಿಯಾನ-ರಜಾಕ್‌ರಂತಹವರು, ರೈ ಮಟ್ಟ ಚೋಟಾ-ಮೋಟಾ ಎನಿಸಬಹುದು. ಆದರೆ ಈಗ ಖು ರೈ, ದಾವೂದ್ ಮತ್ತು ಚೋಟಾ ಶಕೀಲ್‌ರಂತ ಅಂತರರಾಷ್ಟ್ರೀಯ ಪಾತಕಿಗಳ ಹೆಸರನ್ನು ಹರಿಸುತ್ತಿದ್ದಾ ಅಂದ ಮೇಲೆ ವಿಷಯ ಗಂಭೀರವೇ ಸರಿ.

ಸೋಮಯಾಜಿ ಚಟುವಟಿಕೆ ಮತ್ತು ಸಂಪರ್ಕಗಳ ಪೊಲೀಸರು ಕೂಲಂಕಷ ತನಿಖೆ ಮಾಡುವುದರಿಂ ಅಸಲಿ ವಿಷಯ ಹೊರ ಬೀಳಬಹುದು.

ದಿವಾಕರ್ ಎಂಬ ಜನಪರ ವಕೀಲರು

ಕೆ. ದಿವಾಕರ್ ವೃತ್ತಿಯಲ್ಲಿ ವಕೀಲರಾದರೂ, ಗುರುತಿಸಿಕೊಂಡಿರುವುದು ಜನಪರ ಹೋರಾಟಗಳಲ್ಲಿ, ಚಿಂತಕರು, ಸಾಹಿತಿಗಳು ಮತ್ತು ಪತ್ರಕರ್ತರ ವಲಯದಲ್ಲಿ, ತಮಗೆ ಸರಿ ಮತ್ತು ನ್ಯಾಯ ಎಂದು ತೋರಿದ ಕಡೆ ಹಿಂದೆ ಮುಂದೆ ನೋಡದೆ ನೆಗೆದು ಬಿಡುವ ನೇರ ಮನಸ್ಸಿನ ವ್ಯಕ್ತಿ, ಅವರ ಇಂತ ಧೋರಣೆ ಅವರನ್ನು ಹಲವಾರು ಬಾರಿ ಇಕ್ಕಟ್ಟಿನಲ್ಲಿ ಸಿಲುಕಿಸಿದೆ. ಪ್ರಭಾವಿ ವ್ಯಕ್ತಿಗಳು ಎದುರು ಬಿದ್ದಿದ್ದಾರೆ, ಜೇಬೂ ಬರಿದಾಗಿದೆ. ಆದರೂ ತಮಗೆ ನ್ಯಾಯವಾಗಿ ಕಂಡದ್ದರ ಪರ ಹೋರಾಡುವ ಮನೋಭಾವ ಅವರಲ್ಲಿ ಬತ್ತಿಲ್ಲ, ಅದರಿಂದ ಒಳ್ಳೆಯದೇ ಆಗಲಿ, ಕೆಟ್ಟದ್ದೇ ಆಗಲಿ ಎರಡನ್ನೂ ಸಮನಾಗಿ ಸ್ವೀಕರಿಸುವ ನಿರ್ಲಿಪ್ತ.

ಛಾಪಾ ಹಗರಣದಲ್ಲಿ ನಿವೃತ್ತ ಎಸಿಪಿ ಸಂಗ್ರಾಂಸಿಂಗ್, ಮಾಜಿ ಮುಖ್ಯಮಂತ್ರಿ ಹಾಗೂ ಹಾಲಿ ರಾಜ್ಯಪಾಲ ಎಸ್.ಎಂ. ಕೃಷ್ಣಾರಂತಹ [illegible]

[illegible]




ಮುತ್ತಪ್ಪ ರೈ ದುಬೈನಲ್ಲಿ ತಲೆ ಮರೆಸಿಕೊಂಡಿದ್ದಾಗ, ಆತ ಪೊಲೀಸರಿಗೆ ಶರಣಾಗಿ ಭಾರತಕ್ಕೆ ಬಂದು ವಿಚಾರಣೆಯನ್ನು ಎದುರಿಸಲೇಬೇಕೆಂದು ಆತನಿಗೆ ಮನವರಿಕೆ ಮಾಡಿ ದೇಶದ ಕಾನೂನು, ನ್ಯಾಯಾಲಯದ ಘನತೆ ಎತ್ತಿ ಹಿಡಿದ ಮೂವರು ವಕೀಲರಲ್ಲಿ ದಿವಾಕರ್ ಕೂಡ ಒಬ್ಬರು.

ಮುತ್ತಪ್ಪ ರೈ ಪರವಾಗಿ ನ್ಯಾಯಾಲಯದಲ್ಲಿ ಖ್ಯಾತ ಕ್ರಿಮಿನಲ್ ಲಾಯರ್ ಟಾಮಿ ಸೆಬಾಸ್ಟಿಯನ್ ವಾದಿಸಿ ರೈ ಖುಲಾಸೆಗೆ ಕಾರಣರಾದರು. ಆದರೆ ಏಪ್ರಿಲ್ 14 ರಂದು ರೈ ಜೈಲಿನಿಂದ ಹೊರಗೆ ಬಂದದ್ದು ವಕೀಲ ದಿವಾಕರ್‌ರೊಂದಿಗೆ. ಆಗಿನಿಂದ ಮುತ್ತಪ್ಪ ರೈನ ಎಂ.ಆರ್. ಫೌಂಡೇಷನ್‌ಗೆ ಸಲಹೆಗಾರರಂತೆ, ಸಾರ್ವಜನಿಕ ಸಂಪರ್ಕಾಧಿಕಾರಿ ಯಂತಿರುವ ದಿವಾಕರ್, ತಮ್ಮ ಕಕ್ಷಿದಾರನಿಗೆ, ಪ್ರಾಣ ಬೆದರಿಕೆ ಬಂದಾಗ ಪ್ರತಿಕ್ರಿಯಿಸುವುದು ಸಹಜ. ಆದರೆ ಅಪ್ಪಿ-ತಪ್ಪಿ ಮುತ್ತಪ್ಪ ರೈ ಅಥವಾ ಆತನ ಕಡೆಯವರು ಕಾನೂನುಬಾಹಿರ ಚಟುವಟಿಕೆಯಲ್ಲಿ ತೊಡಗದಂತೆ, ಪಾತಕಕ್ಕೆ ಕೈಹಾಕದಂತೆ ಸಲಹೆ ನೀಡುವುದು ಸಹ ದಿವಾಕರ್‌ರಂತಹ ಸಾಮಾಜಿಕ ಕಳಕಳಿ ಉಳ್ಳ ವಕೀಲರ ಕರ್ತವ್ಯ. ಪ್ರಜ್ಞಾವಂತರಾದ ದಿವಾಕರ್ ಅದನ್ನು ಬಲ್ಲರು.

ರೈತ ಸಂಘದೋರಿಗೆ ಚಿಲ್ರೆ ಅಪೇಕ್ಷೆ ಇರಬಾರ್ದು

ಕುಮಾರಸ್ವಾಮಿಗಳು ಇತ್ತೀಚೆಗೆ ಹಳ್ಳಿಗಳಿಗೆ ನುಗ್ಗಿ ಸರ್ಕಾರ ಸೆಲೆಕ್ಟ್ ಮಾಡಿದ ಮನೆಯಲ್ಲಿ ಮಲಗಿದ್ದು, ಎದ್ದು ಬರುವುದು ತುಂಬಾ ಕ್ರಾಂತಿಕಾರಿ ಕೆಲಸವಾಗಿದೆಯಂತಲ್ಲಾ, ಈಗಾಗಲೇ ಅವರು ಮಲಗಿ ಬಂದ ಎರಡು ಊರಿನ ಸಮಸ್ಯೆಗಳೆಲ್ಲಾ ನಿವಾರಣೆಯಾಗಿ, ಜನರೆಲ್ಲಾ ಊರ ಮುಂದೆ ಆರಾಮವಾಗಿ ಮಾತನಾಡುತ್ತಾ ಕಾಲ ಕಳೆಯುತ್ತಿದ್ದಾರೆ ಎಂಬ ವಾರ್ತೆ ಶಿವಮೊಗ್ಗ ಜಿಲ್ಲೆಯ ಕಾಚಿನಕಟ್ಟೆ ಎಂಬ ಊರಿಗೂ ತಲುಪಿದೆಯಂತಲ್ಲಾ, ಆ ಊರಿನ ಪವಿತ್ರಮ್ಮ ಎಂಬ ಮಾಜಿ ರೈತಸಂಘದ ಲೀಡರ್, ಕುಮಾರಸ್ವಾಮಿಗೆ ಫೋನ್ ಮಾಡಿ, "ಕುಮಾರಣ್ಣ ನಮ್ಮ ಮನೆಲೂ ಒಂದು ದಿನ ಮಲಗಿದ್ದು ಹೋಗಿ" ಎಂದು ಗೋಗರೆದರಂತಲ್ಲಾ, ಈ ಆಹ್ವಾನವನ್ನು ತುಂಬುಹೃದಯದಿಂದ ಸ್ವೀಕರಿಸಿದ ಕುಮಾರಸ್ವಾಮಿಗಳು, "ಆಯ್ತು ಬರ್ತಿನಿ. ವೆಜಿಟೇರಿಯನ್ ಅಡಿಗೆ ತಿಂದು ಬಾಯಿ ಕೆಟ್ಟಿದೆ, ನಾನ್‌ವೆಜ್ ಮಾಡಿರಿ" ಎಂದರಂತಲ್ಲಾ, ಕಾಚಿನಕಟ್ಟೆಗೆ ಕುಮಾರಸ್ವಾಮಿಗಳು ಬರುವ ಸುದ್ದಿ ಬರಬಡುಕ ಪತ್ರಿಕೆಗಳಿಗೆ ತಲುಪಿ, ಅವರೆಲ್ಲಾ ಕಾಚಿನಕಟ್ಟೆಗೆ ಹೋಗಿ, ಪವಿತ್ರಮ್ಮನ ಮನೆ ಪತ್ತೆಹಚ್ಚಿ, ಆಕೆಯ ಗಂಡ ಮಕ್ಕಳನ್ನೆಲ್ಲಾ ಮನೆಮುಂದೆ ನಿಲ್ಲಿಸಿ ಫೋಟೋ ತೆಗೆದುಕೊಂಡರಂತಲ್ಲಾ, ಅದು ಸಾಲದು ಎಂಬಂತೆ ಕಡೆಗೆ ಅವರ ಅಡುಗೆ ಕೋಣೆಗೂ ಕರೆದೊಯ್ದು "ಕುಮಾರಸ್ವಾಮಿಗಳಿಗಾಗಿ ಏನನ್ನಾದರೂ ಬಾಂಡ್ಲಿಯಲ್ಲಿ ಹಾಕಿ ಹುರಿಯಿರಿ, ಫೋಟೋ ತೆಗೆದುಕೊಳ್ಳುತ್ತೇವೆ" ಎಂದರಂತಲ್ಲಾ, ಖುಷಿಯಾದ ಪವಿತ್ರಮ್ಮ ಕೂಡಲೇ ಬಾಣಲೆ ಮಡಗಿ ಎಣ್ಣೆ ಹೂದು, ಎಂತದನ್ನೋ ಕರಿಯುವ ಮಂದಸ್ಮಿತ ಮುಖದಲ್ಲಿ ಒಳ್ಳೆ ಪೋಜು ಕೊಟ್ಟರಂತಲ್ಲಾ, ಥೂತ್ತೇರಿ!



* * * * * * * * *

ನಮ್ಮ ಸಂತೆಶಿವರದ ಚೆಡ್ಡಿ ಭೈರಪ್ಪನವರು, ಗಿರೀಶ್ ಕಾರ್ನಾಡರ 'ಟಿಪ್ಪು' ಮತ್ತು 'ತುಘಲಕ್'ನ ಇತಿಹಾಸವನ್ನು ಮೂರೇದಿನಕ್ಕೆ ಹಗಲುರಾತ್ರಿ ಓದಿ "ಇಂತವರು ಅದು ಹೇಗೆ ಒಳ್ಳೆಯ ರಾಜರು?" ಎಂದು ವ್ಯಾಖ್ಯಾನಿಸಿದರಂತಲ್ಲಾ, ಭೈರಪ್ಪನ ಶ್ರಮ ನೋಡಿ ಬಿದ್ದುಬಿದ್ದು ನಕ್ಕ ಗಿರೀಶ್ ಕಾರ್ನಾಡ್, "ಈ ಭೈರಪ್ಪ ಜೀರೋ ಕ್ಯಾಂಡಲ್ ಬಲ್ಪಿನಲ್ಲಿ ರಾತ್ರಿಯೆಲ್ಲಾ ಸತ್ತ ರಾಜರ ಇತಿಹಾಸ ಓದಿ ತಿಣುಕಿ ಬರೆಯುವುದಕ್ಕಿಂತ, ನನ್ನನ್ನೇ ಕೇಳಿದ್ದರೆ ನಾನು ಆರಿಸಿಕೊಂಡ ಆ ಎರಡು ಪಾತ್ರಗಳಿಗೆ ಮುಸ್ಲಿಂ ದೊರೆಗಳ ಹೆಸರಿಟ್ಟಿದ್ದೇನೆ ಅಷ್ಟೆ ಎಂದು ಹೇಳುತ್ತಿದ್ದೆ. ಪಾಪ ಇತಿಹಾಸಕಾರರಲ್ಲದ ಈ ವಯೋವೃದ್ಧ ಸಾಹಿತಿಗಳಿಗೆ ಈ ಇಳಿವಯಸ್ಸಿನಲ್ಲಿ ಇಷ್ಟು ತೊಂದರೆ ಕೊಟ್ಟಿದ್ದಕ್ಕೆ ಕ್ಷಮಿಸಬೇಕು" ಎಂದು ಇನ್ನೂ ಹೇಳಿಲ್ಲವಂತಲ್ಲಾ, ಚೆಡ್ಡಿ ಭೈರಪ್ಪನವರು ಗದ್ದೆ ಅಗೆಯುವ ಶ್ರಮದಿಂದಲೇ ಕೆರೆಯುವ ಕಾದಂಬರಿಯಲ್ಲೂ ಇತಿಹಾಸ, ಪೂರ್ವಗ್ರಹ, ಸೃಜನಶೀಲತೆಯಲ್ಲಾ ಮಿಶ್ರಣಗೊಂಡ ಫಲವಾಗಿ, "ತಿರುಮಲಾಪುರವೆಂಬ ಹಳ್ಳಿಯ ಮೇಲೆ ಟಿಪ್ಪು ದಾಳಿ ಮಾಡುತ್ತಾನೆ, ಕೋಟೆ ಹೊಡೆಯುತ್ತಾನೆ, ಹೊಡೆದ ಕಿಂಡಿಯಲ್ಲೇ ಮಸೀದಿ ಕಟ್ಟುತ್ತಾನೆ. ಅದೇ ಊರಿನ ಬಸ್ಟಾಂಡಿನಲ್ಲಿ ಚುರುಮುರಿ ಮಾರಿಕೊಂಡು ಕಡಲೆಪುರಿ ಮಾರಿಕೊಂಡು ಕಡಲೆಪುರಿ ತಿಂದು ಕಾಲ ಕಳೆಯುತ್ತಿದ್ದ ಎರಡು ಕ್ರಿಶ್ಚಿಯನ್ ಕುಟುಂಬಕ್ಕೆ, ಬಸ್ಟಾಂಡ್ ಎದುರೇ ದಿಬ್ಬದ ಮೇಲೆ ಚರ್ಚು ನಿರ್ಮಾಣವಾಗುತ್ತದೆ'' ಇದು ಭೈರಪ್ಪನವರು ಚಿದಾನಂದಮೂರ್ತಿಯವರನ್ನು ಮೀರಿಸಿ ಸಂಶೋಧಿಸುತ್ತಿರುವ ಇತಿಹಾಸ. ಸಂತೆಶಿವರದ ಕುರುಬರು, ಒಕ್ಕಲಿಗರ ಸಹಾಕರ ದಿಂದ ಬೆಳೆದ ಭೈರಪ್ಪ ದೊಣ್ಣೆ ಹಿಡಿದು ಪುರೋಹಿತಶಾಹಿಗಳ ರಕ್ಷಣೆಗೆ ನಿಂತಿರುವುದು, ಶಾನು ಭೋಗರ ಕಾಲವನ್ನು ಕನಸುತ್ತಿರುವುದು, ಈ ನಾಡಿನ ಸೌಭಾಗ್ಯವೇ ಸರಿ, ಥೂತ್ತೇರಿ!!!

* * * * * * * * *

ಕಾಚಿನಕಟ್ಟೆ ಪವಿತ್ರಮ್ಮ ಮತ್ತಾಕೆಯ ಗಂಡ ರಾಮಯ್ಯ ಕುಮಾರಸ್ವಾಮಿಗಳ ವಸತಿಗಾಗಿ ಮನೆಯನ್ನು ಶೃಂಗರಿಸಿ, ಕುಮಾರಸ್ವಾಮಿಗಳು ಬಂದು ಮಲಗುವ ಬೆಡ್‌ರೂಮನ್ನು ರೆಡಿ ಮಾಡಿ, ಸೊಳ್ಳೆಗಳನ್ನೆಲ್ಲಾ ಓಡಿಸಿ, ತಮ್ಮ ಮನೆ ಬಾಗಿಲಿಗೆ ಬಂದವರನ್ನು ಗದರಿ ಓಡಿಸುತ್ತ ಇರಬೇಕಾದರೆ ಕುಮಾರಸ್ವಾಮಿಗಳು "ಬಾಳೆಹೊನ್ನೂರು ರಂಭಾಪುರಿ ಸ್ವಾಮಿಗಳ ಪಾದಗಳಿಗೆ ದೀರ್ಘದಂಡದ ಕಾರ್ಯಕ್ರಮದ ಸಲುವಾಗಿ ಬರ ಲಾಗಲ್ಲ'' ಎಂದುಬಿಟ್ಟರಂತಲ್ಲಾ, ಇದರಿಂದ ಪವಿತ್ರಮ್ಮನ ಮನೆ ಮೇಲೆ ಆಕಾಶವೇ ಕಳಚಿಬಿದ್ದಂತಾಗಿ, ಪಿಂಜರಾ ಪೋಲು ಪತ್ರಿಕೆಯವರೆಲ್ಲಾ ಶಾನೆ ದುಃಖದಿಂದ "ದೊರೆ ಗಳು ಕಾಚಿನಕಟ್ಟೆಗೆ ಬರುವುದಿಲ್ಲ'' ಎಂದು ಬರೆಯಲಾಗಿ, ಈಗಾಗಲೇ ಪವಿತ್ರಮ್ಮ ಅಳುತ್ತಿದ್ದಾರೆಂಬ ಸುದ್ದಿ ನಮಗೆ ತಲುಪಿತಲ್ಲಾ, ಕೂಡಲೇ ಪುಟ್ಟಣ್ಣಯ್ಯನಿಂದ ಪವಿತ್ರಮ್ಮನ ಫೋನ್ ನಂಬರ್ ತೆಗೆದುಕೊಂಡು ಫೋನ್ ಮಾಡಿದರೆ ಸಿಕ್ಕೇಬಿಟ್ಟರು.

"ಹಲೋ ಪವಿತ್ರಮ್ಮನವರಾ?"

"ಹೌದು, ನೀವ್ಯಾರು?"

"ನಾವು ಪತ್ರಕರ್ತರು, ಯಾಹೂ ಅಂತ ನನ್ನ ಹೆಸರು."

"ಪತ್ರಕರ್ತರು ಅಂದ್ರೆ ನನಗೆ ಮೈಯೆಲ್ಲಾ ಉರಿಯುತ್ತೆ ಕಂಡ್ರಿ, ಅವ್ರುರ ಕಂಡ್ರೆ ಆಗಲ್ಲ."

"ಯಾಕ್ ಮೇಡಂ ಹಾಗಂತಿರಿ?"

"ನಾನು ರೈತ ಸಂಘದಲ್ಲಿ ಹಾಯಾಗಿದ್ದೆ ಕಂಡ್ರಿ. ಇಬ್ಬರು ಮನೆಹಾಳ ಪತ್ರಕರ್ತರು ತಂದು ಜೆಡಿಎಸ್‌ಗೆ ಸೇರಿಸಿದ್ರು."

"ಈಗಾಗಿರೊ ತೊಂದ್ರೆ ಏನೂ? ಚೆನ್ನಾಗೇ ಇದ್ದೀರಲ್ಲಾ? ಅದೂ ದೇವೇಗೌಡರ ಐದನೇ ಸೊಸೆಯಷ್ಟು ಚೆನ್ನಾಗಿದ್ದೀರಿ."

"ಏನು ಚೆನ್ನಾಗಿದ್ದೀನಿ? ಈಗಾಗಿರೊ ಅವಮಾನ ಸಾಲ್ದೆ? ಜನಗಳಾಗ್ಲೆ ಆಡಿಕೊಳ್ತಾ ಅವ್ರುರೆ. ನಾನೆಂಗೆ ಮುಖ ತೋರುಸ್ಲಿ?"

"ಅಳಬೇಡಿ ಮೇಡಂ, ಸಮಾಧಾನ ಮಾಡಿಕೊಳ್ಳಿ. ಈ ತರ ಅಳೋ ನೀವು ರೈತ ಸಂಘದಲ್ಲಿ ಹ್ಯಂಗಿದ್ರಿ?"

"ಯಾಕ್ರಿ ಹಾಗಂತಿರಿ?"



"ರೈತ ಸಂಘದೋರಿಗೆ ನಂಜುಂಡಸ್ವಾಮಿ ಕಲಿಸಿರೊ ಬುದ್ಧಿ ಏನಂದ್ರೆ, ಪ್ರಧಾನಮಂತ್ರಿಯಿಂದ ಹಿಡಿದು ಮುಖ್ಯಮಂತ್ರಿವರೆಗೆ ಯಾರೂ ಕೂಡ ನಂಜುಂಡಸ್ವಾಮಿಗಿಂತ ದೊಡ್ಡೋರಲ್ಲ, ಅಂತಾದ್ರಲ್ಲಿ ಕುಮಾರಸ್ವಾಮಿ ಮಲಗಕ್ಕೆ ಬರಲಿಲ್ಲ ಅಂತ ಅಳತಿರಲ್ಲಾ, ನಿಜಕ್ಕೂ ನಿಮ್ಮ ನಡವಳಿಕೆ ರೈತ ಸಂಘಕ್ಕೆ ಅವಮಾನ."

"ನನಗೆ ಸುಂದರೇಶ್, ರುದ್ರಪ್ಪ, ನಂಜುಂಡಸ್ವಾಮಿಗಿಂತ ಯಾರೂ ದೊಡ್ಡೋರಲ್ಲ, ಇವತ್ತಿಗೂ ಹಾಗೇ ತಿಳಕೊಂಡಿದ್ದನಿ. ಆದ್ರೆ ಈ ಕುಮಾರಸ್ವಾಮಿ ನಮ್ಮನೆಗೆ ಬಂದು ಮಲಗಿದ್ದು ಹೋಗ್ತಿನಿ ಅಂದು ಬರಲಿಲ್ಲ, ಯಾರು ಚಾಡಿ ಹೇಳಿದ್ರೊ ಏನೊ? ಬರ್ತಿನಿ ಅನ್ನೊದ್ಯಾಕೆ, ತಪ್ಪಿಸಿಕೊಳ್ಳೋದ್ಯಾಕೆ? ಆ ಕೆ.ಟಿ. ಗಂಗಾಧರ, ಪುಟ್ಟಣ್ಣಯ್ಯ ಅವ್ರುರೆಲ್ಲಾ ಎಷ್ಟೊಂದು ಆಡಿಕೊಳ್ತಾರೆ ಗೊತ್ತ?"

"ಆದ್ರೂ ಕುಮಾರಸ್ವಾಮಿ ಬಂದು ಹೋದರಂತೆ?"

"ಬಂದುಹೋದ್ರು ಸರಿ. ಆದ್ರೆ ಉಳಕೊಳ್ತಿನಿ ಅಂತ ಹೇಳಿ ಕೇವಲ ಒಂದು ವಿಜಿಟ್ ಕೊಟ್ರೆ, ನಮಗೆ ಅವಮಾನಲ್ವ?"

"ನನಿಗೇನೊ ಅವಮಾನದಂಗೆ ಕಾಣ್ತಾಯಿಲ್ಲ, ನಿಮ್ಮರಗಳೆನೆ ತಪ್ಪುತು ಅನ್ನುಸ್ತಾಯಿದೆ."

"ನಿಮಗೆ ಗೊತ್ತಿಲ್ಲ ಕಂಡ್ರಿ, ನಾವು ರೈತ ಸಂಘ ಬಿಟ್ಟು ಬಂದು ಒಂದು ವರ್ಷ ಆಗಿಲ್ಲ, ಇಲ್ಲಿ ದಳದೋರಿಗೂ ನನ್ನ ಕಂಡ್ರೆ ಆಗಲ್ಲ, ಆ ರೈತ ಸಂಘದೋರ ಕಂಡ್ರೂ ಆಗಲ್ಲ, ಇಂತ ಟೈಮಲ್ಲಿ ಕುಮಾರಸ್ವಾಮಿ ಕೈಕೊಡಬಾರದಿತ್ತು."

"ಇರ್ಲಿಬಿಡಿ ದೇವೇಗೌಡ್ರಿಗೇಳ್ತಿನಿ, ನೀವು ಹೊಸದಾಗಿ ಪಾರ್ಟಿಗೆ ಸೇರಿಸಿಕೊಂಡಿರೊ ಪವಿತ್ರಮ್ಮನ ಮನೆಲಿ ಉಳಿದಿದ್ದು ಬನ್ನಿ ಅಂತ."

"ಆ ದೇವೇಗೌಡ್ರು ತಗಂಡೇನು ಮಾಡದ್ರಿ ಈಗ? ಅವ್ರುರಿಗಾಗಿ ಹಳೆ ಐಬಿಗಳಿಲ್ಲವೆ. ಕುಮಾರಸ್ವಾಮಿಯಂತ ಮುಖ್ಯಮಂತ್ರಿ ನಮ್ಮನೆಗೆ ಬರ್ತರೆ ಅಂತ ಖುಷಿಯಾಗಿದ್ದೊ."

"ರೈತ ಸಂಘದೋರಿಗೆ ಇಂತ ಚಿಲ್ರೆ ಅಪೇಕ್ಷೆ ಇರಬಾರ್ದು. ಇದ್ದರೆ ಅಂಥೋರು ರೈತ ಸಂಘದೋರೆ ಅಲ್ಲ."

"ಅದ್ಕೆ ನಾನು ಜೆಡಿಎಸ್ ಸೇರಿದ್ದು."

"ರೈತ ಸಂಘ ಯಾಕೆ ಬಿಟ್ರಿ ಮೇಡಂ?"

"ನನ್ನ ಮೇಲೆ ಒಂದು ಸುಳ್ಳು ಪೊಲೀಸ್ ಕೇಸಾಗಿತ್ತು. ಅದನ್ನ ಪ್ರತಿಭಟಿಸಕ್ಕೆ ಯಾರೂ ಬರಲಿಲ್ಲ."

"ಕಡಿದಾಳು ಶಾಮಣ್ಣಾರು ಇಡೀ ದಿನ ಎಸ್ಪಿ ಆಪಿಸೆದ್ರಿಗೆ ಧರಣಿ ಕುಳಿತಿದ್ರಂತೆ?"

"ಹೌದು, ಆದ್ರೆ ಬೇರೆ ಲೀಡ್ರು ಪ್ರತಿಭಟಿಸಲಿಲ್ಲ."

"ಬೇರೆ ಲೀಡ್ರು ಅಂದ್ರೆ?"

"ಅದೆಲ್ಲಾ ಯಾಕ್ರಿ ನಿಮಗೆ, ಮದ್ಲು ಫೋನಿಡಿ."

"ಒಂದು ಕ್ಲಾರಿಫಿಕೇಷನ್ ಮೇಡಂ... ಈ ಜೆಡಿಎಸ್ನು ರೈತ ಸಂಘಕ್ಕಿಂತ ಪರವಾಗಿಲ್ವ?

"ಇಲ್ಲ ಕಂಡ್ರಿ, ಯಾಕಾದ್ರು ಬಂದನೊ ಅನ್ನಸ್ತಾಯಿತ್ತು, ಆದ್ರೆ ಕುಮಾರಣ್ಣ ಮುಖ್ಯಮಂತ್ರಿಯಾದ ಮೇಲೆ ನಮಗೆಲ್ಲಾ ಒಳ್ಳೆದಾಗಿದೆ."

"ಥೂತ್ತೇರಿ!!!"

–ಯಾಹೂ

ಇಮೇಲ್‌ನಲ್ಲೊಂದು ಇನ್‌ಲ್ಯಾಂಡು

ಪಿ.ಕೆ. ಮಲ್ಲನಗೌಡರ್

ಬಿಟ್ bit ಹಿಡಿ!

Hi ರಮ್ಯಾ,

ರಿಯಲಿ ಸಾರಿ ಚಿನ್ನು... ಈ ಕಳ್ರು ನಿನಗ ಪ್ರಶಸ್ತಿ ಅಂತಾ ಅನೌನ್ಸ್ ಮಾಡಿ, ಆಮ್ಯಾಲ ಮೋಸ ಮಾಡಿಬಿಟ್ರು.... ಅದೆಲ್ಲ 'ನಾಯಿ ನೆರಳು' ಕ್ರಿವಾಡ ಬಿಡು....'ನಾಯಿ ನೆರಳು' ಅಂದ್ರ 'ಬ್ರಾಹ್ಮಣ ನೆರಳು' ಅಂತಾ ಅರ್ಥ....

ನನ್ನ... ಇಷ್ಟು ಬ್ಯಾಸರ ಆಗೈತಿ.... ನಿನಗೆಷ್ಟು ಬ್ಯಾಸರ ಆಗಿರ್ಬೇಕು... ನೀ ಬ್ಯಾರೆ ಊರ ತುಂಬಾ ಪ್ರಶಸ್ತಿ ಸಿಕ್ಕೈತಿ ಅಂತಾ ಸುದ್ದಿ ಹಬ್ಬಿಸಿಬಿಟ್ಟಿ... ಏಳರಾಗ ಹುಟ್ಟಿದ್ದವ ರಂಗ ಆದಿಬಿಟ್ಟಿ...



ಆದ್ರ ನೀ worry ಮಾಡ್ಕೋಬ್ಯಾಡ... ಮತ್ತು ಹೊಳ್ಳಿ ಯಾವಾಗ ಬರ್ತಿಯವ್ವಾ? ಅಲ್ಲೇ ಇಂಗ್ಲೆಂಡ್‌ನ್ಯಾಗ ಆ ಶ್ಯಾಮ್ ಜೊತೆ 'ತನನಂ ತನನಂ' ಅಂತಾ ಹಾಡಿಕೊಂತ ಕುಂತ್ರ ಹ್ಯಾಂಗ? ನೀ ಅಲ್ಲೇ ಕುಂತಿದ್ದಕ... ಆ ಶ್ಯಾಮ್ ನಿನಗ ಅವಾರ್ಡ್ ಬರದಂಗ ಮಾಡ್ತಾನ... 'ಸಾಮ್ಯಗೆನಾದ್ರು ಅವಾರ್ಡ್ ಸಿಕ್ಕ ನಾ ನಿನ್ನ ಲಗ್ನ ಆಗಂಗಿಲ್ಲ, ನೋಡು' ಅಂತಾ ರಕ್ಷಿತಾ ಹಟ ಮಾಡಿ ಬಿಟ್ಟಾಳಂತ. ಆದಕ್ಕ ಶ್ಯಾಮ್ ಹೋಗಿ ಸಿದ್ದರಾಮನ ಕೈಕಾಲು ಹಿಡಿದು 'ಒಂದು ಸಂಸಾರ ಹಾಳು ಮಾಡಬ್ಯಾಡ್ರಿ' ಅಂತಾ ಕೇಳಿದ್ನಂತ... ಈ ರೀತಿ ಇಲ್ಲಿ ಧಾರ್ವಾಡದ ಪಡ್ಡೆ ಹುಡುಗ್ರು ಮಾತಾಡ್ತಾವು.... ಇಷ್ಟೆಲ್ಲಾ ಪಾಲಿಟಿಕ್ಸ್ ನಡದೈತಿ ನೋಡು ಚಿನ್ನಾ.... ಹೋದ್ರ ಹೋಗ್ಲಿ ಬಿಡು, 'ತನನಂ ತನನಂ' ಪಾರ್ಟ್‌ಗೆ ನಿಂಗ ಗ್ಯಾರಂಟಿ ಅವಾರ್ಡ್ ಸಿಗತೈತಿ... ಹಿಂಗ್ಗಿಂಗ ಕುಂದಿ ಅಲ್ಲಾಡಿಸೋದ ಆಕ್ಟಿಂಗ್ ಅಂತಾ ತಿಳಿದಾಳ ಆ ರಕ್ಷಿತಾ.... ನಿಂದು ಮಾತ್ರ ಸೂಪರ್ ಆಕ್ಟಿಂಗು....

ಮತ್ತೆ ನಮ್ಮ ಪುಟ್ಟಾ ಹೆಂಗೈತಿ?

ಆದsss ನಿನ್ನ ಲವರ್ರು... ಬ್ಯಾಂಡಿ ಪಪ್ಪಿ... ಬ್ಯಾಂಡಿ ಎಷ್ಟ್ ಮುದ್ದು ಮುದ್ದು ಐತಲ್ಲ ರಮ್ಯು?

ನೀ ಆದಷ್ಟು ಜಲ್ದಿ ಲಂಡನ್ನಿಂದ ವಾಪಸ್ ಬಂದ್ಬಿಡವಾ... ಇಲ್ಲಿ ರಕ್ಷಿತಾ ಪೇಪರ್‌ನವ್ರ ಮುಂದ ನಿನ್ ವಿರುದ್ಧ ಏನೇನ ಹೇಳಕೊಂತ ತಿರುಗ್ಯಾಡಕ ಹತ್ಯಾಳ ನೋಡು...

ನಿನ್ನ 'ತನನಂ ತನನಂ' ಪೋಸ್ಟರ್ ನೋಡಿದೆ. ನೀಲಿ ಲಂಗಾ, ಜಂಪರ್ ಹಾಕಿಕೊಂಡು ಬ್ಯೂಟಿಫುಲ್ ಆಗಿ ಕಾಣ್ತಿಯವಾ... ನಾ ಏನರ ಹುಡುಗಾ ಆಗಿದ್ರ 'ಐ ಲವ್ ಯು' ಅಂದು ಬಿಡ್ತಿದ್ದೆ...

ಮುದ್ದು ರಮ್ಯು ಬೆಂಗ್ಳೂರಿಗೆ ಬಂದ್ ಕೂಡ್ಲೆ ಪತ್ರ ಹಾಕು...

ಇಂತಿ

ಮುನ್ನಿ (Zero Hour)

ಧಾರವಾಡ

ಎರಡು 'ಗಾದಿ' ಮಾತು

ವಿಧಾನಸೌಧಕ್ಕೆ ಜ್ವರ ಬಂದರೆ ಬೆಳಗಾವಿಗೆ ಬರೆ!


* * * * * *

ಕಾನೂನು ಹೇಳೋಕೆ....

ತುರಳ್ಳಿ ಕಾಡು ತಿನ್ನೋಕೆ....


ಬಂದು CD ಗವನ

ರಕ್ತವೇ ಹರಿಯದ
ಬಿಳಿ ಮೆದುಳು
ಬಂಡವಾಳಶಾಹಿಯಂತೆ....
ರಕ್ತ ಪಂಪ್ ಮಾಡದ
ಹೃದಯ ಸಮಾಜವಾದಿಯಂತೆ....!
ಇದು ಬಂಗಾಳಿ ಕಮ್ಯುನಿಸ್ಟರ
ಘೋಷವಾಕ್ಯವಂತೆ!!
ಸಲಹೆ ಕೊಟ್ಟಿದ್ದು
ಇನ್ಫೋಸಿಸ್ ಮೂರ್ತಿಯಂತೆ!!



ಮುಠ್ಠಾಳ ಮನೋಹರನ ಮಟ್ಕಾಗಿರಿ !

ಇಡೀ ಕೊಪ್ಪಳ ನಗರವನ್ನು ಮಟ್ಕಾ ಮಾರಿಯಿಂದ ಬಿಡಿಸಿದ ಕೀರ್ತಿ 'ಲಂಕೇಶ್' ವಾರಪತ್ರಿಕೆಯದು. 'ಲಂಕೇಶ್' ಏಟಿಗೆ ಡಾನ್‌ಗಳೆಲ್ಲ ಡೌನ್ ಆದರೆ, ಏಜಂಟರು ಮೈಬಗ್ಗಿಸಿ ದುಡಿಯಲು ಹೊರಟದ್ದಾರೆ. ಆದರೆ ಕಳೆದ ಕೆಲ ದಿನಗಳಿಂದ ಯಾವಂದೇನು ಹೆದರಿಕೆ ಎಂಬಂತೆ ಖಾಕಿ ಭಯವಿಲ್ಲದೆ, ಮುಠ್ಠಾಳ ಮನೋಹರ ನಡೆಸುತ್ತಿರುವ ಮಟ್ಕಾಗಿರಿಯ ಕುರಿತ ವರದಿಯಿದು. ಈತ ಧೈರ್ಯವಂತನಲ್ಲ... ಆದರೆ ಚಾಲಾಕಿ...



ಮೂರು ತಿಂಗಳ ಹಿಂದೆ ಕೊಪ್ಪಳದ ನಾನು ಅನ್ನೋ ಮಟ್ಕಾ ಗಂಡಸರನ್ನೆಲ್ಲ ತಂದು ರುಬ್ಬಿ ಮಟ್ಕಾವನ್ನು ಒಂದು ಹಂತಕ್ಕೆ ಮಟ್ಟ ಹಾಕಿದ್ದ ಎಸ್ಪಿ ಪದ್ಮನಯನ ಇನ್ನೂ ಇಲ್ಲೇ ಇರುವಾಗಲೇ ಮತ್ತೇ ಬಾಲ ಬಿಚ್ಚಿದ್ದಾನೆ ಈ ಮನೋಹರ. ಕೊಪ್ಪಳ ಘಾಸಿ ಬಜಾರ್‌ನಲ್ಲಿ ಮನೆ ಮಾಡಿಕೊಂಡು ಹೆಸರಿಗೆ ಬಟ್ಟೆ ಹೊಲೆಯುವ ಟೈಲರ್‌ನಾಗಿದ್ದು ಮಟ್ಕಾ ಅಂಕೆ ಬರೆಯುತ್ತ ಮಂದಿ ಬಟ್ಟೆ ಹರಿಯುವ ಕೆಲಸ ಮಾಡುತ್ತಿರುವ ಬೊಂಬ್ಲೆಕರ್ ಮನೋಹರ ಎಂಬ ಮಹಾನುಭಾವನಿಗೆ ದುಡಿದು ತಿನ್ನುವ ರೂಢಿ ಇಲ್ಲವೇ ಇಲ್ಲ. ಬಂಡವಾಳ ಹಾಕಬೇಕಿಲ್ಲ, ಬೆವರು ಹರಿಸಬೇಕಿಲ್ಲ. ಹೀಗಾಗಿ ಕಲಿತ ಕಾಲಾಂತರ ವಿದ್ಯೆ ಬಿಡಲು ಒಲ್ಲ ಇವನು. ಊರವರ ಕಣ್ಣಿಗೆ ಶಾಂತ ಪ್ರದೇಶದಂತೆ ಕಾಣುವ ಘಾಸಿ ಬಜಾರ್ ಗುರುನಾಥನಂತಹ ನಿಧಿಗಳ್ಳರು, ನಕಲಿ ಡಾಕ್ಟರುಗಳು, ನಕಲಿ ರೆಗ್ಯುಲೇಟರ್ ಮಾರುವವರಿಗೆ ಆಶ್ರಯ ತಾಣವಾಗಿಬಿಟ್ಟದೆ. ಇಲ್ಲಿಯ ಶಾರದಾ ಟಾಕೀಸ್, ಸ್ಟಾರ್ ಟಾಕೀಸ್ ಪ್ರದೇಶ, ಸರದಾರ ಓಣಿ, ಕೆ.ಸಿ. ಸರ್ಕಲ್, ಅತ್ತರ್‌ಗಲ್ಲಿ, ಆಜಾದ್ ಸರ್ಕಲ್‌ನ ಜೂಜುಕೋರರಿಗೆ ಏಜಂಟ್ ಮತ್ತು ಡಾನ್ ಕೂಡ ಹೌದು ಈ ಮನೋಹರ್!

ಕೊಪ್ಪಳ

ಬಜಾರದ ಅಂಗಡಿಗಳು ಓಪನ್ ಆಗೋ ಮೊದಲೇ ತನ್ನ ಮಟ್ಕಾ ಅಡ್ಡೆ ಚಾಲೂ ಮಾಡುವ ಮನೋಹರ ಕೋತಿ ಬೆಣ್ಣೆ ತಿಂದು ಮೇಕೆ ಬಾಯಿಗೆ ಒರೆಸಿ ಬಚಾವಾದ ಪಾಲಿಸಿಯವನು. ತಾನಲ್ಲದೇ, ತನ್ನ ತಮ್ಮ ರಮೇಶ ಕೂಡ ಓಸಿ ಬರೆಯುವುದನ್ನು ಸಹಿಸದೇ, ರೈಡ್‌ನ ಸೂಚನೆ ತಿಳಿದು, ಊರಲ್ಲೇ ತಲೆ ಮರೆಸಿಕೊಂಡು ತಮ್ಮನನ್ನೇ ಪೊಲೀಸ್ ಬಲೆಗೆ ಹಾಕಿಸಿಬಿಡುತ್ತಾನೆ. ಹಾಗಂತ ಈ ಗಿರಾಕಿ ಪೂರಾ ಬಚಾವು ಅಲ್ಲ, ಹಿಂದೆಲ್ಲ ಗಂಗಾವತಿಯ ಜೈಲು ದರ್ಶನ ಮಾಡಿಕೊಂಡು ಬಂದಿದ್ದಾನೆ. ಆದರೆ ಈತನಲ್ಲಿರುವ ಭಂಡತನವು ಮಟ್ಕಾದ ಸುಖ್ಖ ಬಿಡಿಸುತ್ತಿಲ್ಲ, ಭಂಡತನವೇ ಬಂಡವಾಳವಾದಾಗ ಬಿಟ್ಟತಾದರೂ ಹೇಗೆ?

ಈಗ್ಗೆ 2 ವರ್ಷದ ಹಿಂದೆ ಕಾಲಾಂತರ ಮನೋಹರನನ್ನು ಹರಸಾಹಸ ಮಾಡಿಯಾದರೂ ಬಲೆಗೆ ಹಾಕಿ ಹಿಡಿಯಬೇಕೆಂದು ಖಾಕಿಗಳು ಸ್ಕೆಚ್ ರೂಪಿಸಿದ್ದರೆ, ಕ್ಲೂ ಪಡೆದ ಮನೋಹರ ಕೊಪ್ಪಳದ ಕೋಟೆಯಲ್ಲಿ ಅಡಗಿಕೊಂಡು ಬಿಟ್ಟಿದ್ದ. ನಿತ್ಯ ಮೂರು ಹೊತ್ತು ಮನೆಯಿಂದ ಊಟ ತರಿಸಿಕೊಂಡು ಚೆನ್ನಾಗಿ ಉಂಡು, ಕೋಟೆಯೊಳಗೆ ನಿದ್ದೆ ಹೊಡೆದು ಮೂರು ದಿನದ ನಂತರ ಹಾಯಾಗಿ ಮನೆಗೆ ಬಂದಿದ್ದ. ಒಮ್ಮೆಯಂತೂ ಡಿಎಆರ್‌ನ ಪೇದೆಯೊಬ್ಬ ವೈರ್‌ಲೆಸ್ ಹಿಡಿದು ಇವನ ಮನೆಗೆ ಬಂದು, ವೈರ್‌ಲೆಸ್‌ನಲ್ಲಿ ಏನೇನೋ ಮಾತಾಡಿದ ನಾಟಕವಾಡಿ ಸಾವಿರಗಟ್ಟಲೆ ಕಿತ್ತಿದ್ದ. ಇನ್ನೊಮ್ಮೆ ಮತ್ತೊಬ್ಬ ಪೇದೆ ಮನೋಹರನ ಮನೆ ಹಿಂದಿನಿಂದ ಹಾರಿಬಂದು ಇವನಿಂದಲೂ, ಮತ್ತು ನಂಬರ್ ಬರೆಸಲು ಬಂದವರಿಂದಲೂ ರೊಕ್ಕ ದೋಚಿದ್ದ.

ಈಗ ಖದೀಮ ಮನೋಹರ ವಾರದ 5 ದಿನ ಬೆಳಿಗ್ಗೆಯೇ ನಂಬರಾಟ ಚಾಲೂ ಮಾಡಿ ಸಂಜೆ ಆರಕ್ಕೆ ಕ್ಲೋಸ್ ಮಾಡಿಬಿಡ್ತಾನೆ, ಅದೂ ಬರೀ ದೊಡ್ಡ ಅಮೌಂಟಿಗೆ ಮಾತ್ರ. ದೊಡ್ಡ ಪ್ರಮಾಣದ ಪಟ್ಟಿಯಾದರೆ ಪಕ್ಕದ ಹೊಸಪೇಟೆ, ಗದಗ ನಗರಗಳಿಗೆ ಟರ್ನ್ ಕೊಡುತ್ತಾನೆ. ಹಿಂದೆಯೂ ಇದೇ ರೀತಿ ಟರ್ನ್ ಕೊಡುತ್ತಿದ್ದಾಗ ಇವನ ಮನೆಯಿಂದ ಬೆಳಿಗ್ಗೆ ನಿತ್ಯ ಟಫಿನ್ ಕ್ಯಾರಿಯರ್ ಹೋಗುತ್ತಿತ್ತು. ಕೇಳಿದರೆ ಹೊಸಪೇಟೆಯ ಸಂಬಂಧಿಕರಿಗೆ ಅಡ್ಮಿಟ್ ಮಾಡಿದ್ದು ಅವರಿಗೆ ಊಟ ಒಯ್ಯುತ್ತಿದ್ದೇವೆ ಎನ್ನುತ್ತಿದ್ದರು. ಆದರೆ ನಿಜ ಕಥೆಯೆಂದರೆ ಆ ಟಫಿನ್ ಕ್ಯಾರಿಯರ್‌ನಲ್ಲಿ ಮಟ್ಕಾ ಪಟ್ಟಿ ಹೋಗಿ, ವಾಪಸ್ ದುಡ್ಡು ಬರುತ್ತಿತ್ತು.


ಕೊಪ್ಪಳದಲ್ಲಿ ಮಟ್ಕಾವನ್ನು ಎಷ್ಟೇ ಮಟ್ಟ ಹಾಕಿದರೂ ಇವನ ಆಟ ಮಾತ್ರ ಚಾಲೂ ಇರೋದು ನೋಡಿಯೇ ಉಳಿದ ಏಜಂಟರು ಇವನಿಗೆ ಎಲ್ಲೋ ಕೆಲ ಖಾಕಿಗಳು ಸಪೋರ್ಟು ಮಾಡಿರಬಹುದೆಂದು ಆಡಿಕೊಂಡು ಸುಮ್ಮನಾಗುತ್ತಾರೆ. ಅದರಲ್ಲೂ ರೈಡ್‌ನ ಮಾಹಿತಿ ಮೊದಲೇ ಬರುತ್ತೆ ಅಂದ್ರೆ? ಮೊನ್ನೆ ಇವನ ತಮ್ಮ ರಮೇಶ ಮೂರು ದಿನ ಪೊಲೀಸ್ ಕಸ್ಟಡಿಯಲ್ಲಿದ್ದು ಬಂದರೆ ಇವನು ಮಾತ್ರ ಮಟ್ಕಾಗಿರಿ ಮಾಡುತ್ತ ಹಾಯಾಗಿದ್ದ. ಹಿಂದೊಮ್ಮೆ ಭೈರಪ್ಪ ಎಂಬ ಟಫ್ ಆಫೀಸರ್ ಇವನಿಗೆ ಚೆನ್ನಾಗಿ ರುಬ್ಬಿದ್ದರು. ಈಗಂತೂ ಮೊಬೈಲ್ ಬಂದಿದೆ, ಅಂಕೆಯಾಟಕ್ಕೆ ಯಾವುದೇ ಧಕ್ಕೆಯಿಲ್ಲ, ಏಕೆಂದರೆ 15 ವರ್ಷದ ಅನುಭವ ಬೇರೆಯಿದೆಯಲ್ಲ, ಈ ನಡುವೆ ಎಸ್ಪಿ ಪದ್ಮನಯನ್‌ಗೆ ಇನ್ನೊಂದು ವಾರಕ್ಕೆ ಟ್ರಾನ್ಸ್‌ಫರ್ ಅಂತ ಗಾಳಿ ಸುದ್ದಿ ಹಬ್ಬಿಸಿ ಏಜಂಟರನ್ನು ಹುರಿದುಂಬಿಸುವ ವಿಫಲ ಪ್ರಯತ್ನ ಮಾಡುತ್ತಿದ್ದಾರೆ ಡಾನ್‌ಗಳು!


ಎಸ್ಪಿ ಪದ್ಮನಯನ ತಮ್ಮ ಗಮನಕ್ಕೆ ಬಂದ ಕ್ರಿಮಿಗಳನ್ನೆಲ್ಲ ಬೆಂಡೆತ್ತಿ ಸೀದಾ ಮಾಡಿದ್ದಾರೆ. ಅದೇ ಕೆಲಸವನ್ನು ಈ ಮನೋಹರನಿಗೆ ಮಾಡಬೇಕಿದೆ. ಕೊಪ್ಪಳದಲ್ಲಿ ಗೂಂಡಾಗಿರಿ ಇಲ್ಲ, ಆದರೆ ಮಟ್ಕಾಗಿರಿ ಬಡವರನ್ನು ನಾಶ ಮಾಡುತ್ತಿದೆ.

-ಗೌಡರ್

ಮಂಗಳೂರಲ್ಲೊಬ್ಬ ಮಂಗ

'ಮಂಗನಿಂದ ಮಾನವ' ಎಂಬುದು ರಾಂಗ್ ಅಂದ





'ಲಂಕೇಶ್' ವಾರಪತ್ರಿಕೆ ಜುಲೈ 26 ರ ಸಂಚಿಕೆಯಲ್ಲಿ ರಾ. ಸೋಮನಾಥ್ ಬರೆದ 'ಮನುವಾದಿ ಪ್ರಕಾಶ್‌ಶಾಸ್ತ್ರಿ'ಯನ್ನು ಕುರಿತ ವರದಿಯಲ್ಲಿ "ಟೆರರಿಸ್ಟರನ್ನು ತಡೀ ಬೇಕಂದ್ರೆ ಕೋಟ ಗಾಯಿತ್ರಿ ಜಪಿಸಿ" ಎಂಬುದನ್ನು ಓದಿ ನಮ್ಮ ಹಲವಾರು ಓದುಗರು ನಕ್ಕು ನಕ್ಕು ಸುಸ್ತಾಗಿದ್ದರು. ಶಾಸ್ತ್ರಿಯ ವಂಶಜರೇ ಆದ ಕೆಲವು "ಸೋಕಾಲ್ಡ್ ವಿಜ್ಞಾನಿಗಳು" ಹರಡುತ್ತಿರುವ ಮೌಢ್ಯ ಮತ್ತು ಅದಕ್ಕೆ ಕರಾವಳಿ ಪ್ರತಿಕೆಗಳು ಕೊಡುತ್ತಿರುವ ಪ್ರಚಾರದ ಅಸಹ್ಯತೆ ಕುರಿತು ನಮ್ಮ ಓದುಗ ಪ್ರವೀಣ್ ಶೆಟ್ಟಿ, ಪೇಪರ್ ಕಟಿಂಗ್ಸ್‌ಗಳೊಂದಿಗೆ ವಿವರಗಳನ್ನು ಒದಗಿಸಿ ಖಂಡಿಸಿದ್ದಾರೆ.

* * * * * * * * *

ಭೂಮಿ ಅಂಡಾಕಾರವಾಗಿದೆ ಎಂದು ನೀವು ಇನ್ನು ಹೇಳುವಂತಿಲ್ಲ, ಗೋಲಾಕಾರವಾಗಿದೆ ಎಂದೂ ಹೇಳುವಂತಿಲ್ಲ, ಇದೆಲ್ಲ ಸುಳ್ಳಂದ್ರೆ ಸುಳ್ಳಂತೆ!

ಮತ್ತೆ ಹೇಗಿದೆ ಈ ನಮ್ಮ ಭೂಮೀ ಅಂತಿರಾ? Wait Please ! ಇಲ್ಲೊಬ್ಬ 'ವಿಜ್ಞಾನಿ' ಹೇಳ್ತಾನೆ ಕೇಳಿ: 'ಭೂಮಿ ಗೋಲಾಕಾರ ಎಂಬುದು ಸುಳ್ಳು. ಭೂಮಿ ಧೂಮಕೇತು ಆಕಾರದಲ್ಲಿದೆ'......!

ಈ 'ಸೋ-ಕಾಲ್ಡ್' ವಿಜ್ಞಾನಿ ವೆನಿಜುವೆಲಾದ ಒರಿಯಂತೆ ವಿಶ್ವ ವಿದ್ಯಾಲಯದ ನಿವೃತ್ತ ಪ್ರಾಧ್ಯಾಪಕನಂತೆ, ಹೆಸರು : ಡಾ|| ಪಳ್ಳಕಡ್ಕ ಕೇಶವಭಟ್ಟ!

ಇಷ್ಟು ದಿನ ಎಲ್ಲಿ ಹೋಗಿದ್ದೊ ಮಾರಾಯ? ನಿನ್ನಂತಹ ಆಧುನಿಕ ಕೋಪರ್ನಿಕಸ್ ಇಲ್ಲದೇ ಈ ದುಂಡಗಿನ ಅಲ್ಲಲ್ಲ ಧೂಮಕೇತು ಆಕಾರದ ಭೂಮಿಯೇ ಅಜ್ಞಾನದಲ್ಲಿ ಮುಳುಗಿ ಹೋಗಿತ್ತಲ್ಲ? ಬಾ,ಬಾ, ಬೆಳಕು ನೀಡಿ ಅಜ್ಞಾನ ಹೊಡೆದೋಡಿಸಯ್ಯ!

ಪಳ್ಳಕಡ್ಕ ಎಂಬ ಇದ್ಯಾವನೋ ತಲೆಕೆಟ್ಟ ಮೆಂಟಲ್ ಗಿರಾಕಿ ಮಂಗಳೂರಲ್ಲಿ ಏನೇನೋ ಭಾಷಣ ಕುಟ್ಟುತ್ತಾ ಸಾಗಿದೆ. ಅದಕ್ಕೆ ಭಟ್ಟಂಭಟ್ಟರ ಚೆಡ್ಡಿ ಪತ್ರಿಕೆಗಳಾದ ಉದಯವಾಣಿ, ವಿಜಯ ಕರ್ನಾಟಕಗಳು ಪ್ರಚಾರ ಕೊಡುತ್ತ ಜನರ ದಾರಿ ತಪ್ಪಿಸಲು ನೋಡುತ್ತಿವೆ. ಈ ನಾನ್‌ಸೆನ್ಸ್ ವಿಜ್ಞಾನಿಯ 'ಸೈನ್ಸ್' ಹೀಗೆ ಸಾಗುತ್ತದೆ:

"ಆಧುನಿಕ ವಿಜ್ಞಾನವು ವಿಶೇಷ ಜ್ಞಾನವೆ? ವಿಪರೀತ ಜ್ಞಾನವೇ?" ಎಂಬ ವಿಷಯದ ಕುರಿತು ಇನ್ನಾವನೋ ತಲೆಕೆಟ್ಟ ಚೆಡ್ಡಿ ಈ ಅಜ್ಞಾನಿ ಪಳ್ಳಕಡ್ಕ ಭಟ್ಟನಿಂದ ಉಪನ್ಯಾಸವನ್ನೇ ಏರ್ಪಡಿಸುತ್ತಾನೆ. ಭಟ್ಟ ರೀಲು ಬಿಡುತ್ತಾನೆ ನೋಡಿ:

"ಆಧುನಿಕ ವಿಜ್ಞಾನದಲ್ಲಿ ವಿಶೇಷ ಜ್ಞಾನಕ್ಕಿಂತ ವಿಪರೀತ ಜ್ಞಾನವೇ ತುಂಬಿದೆ. ಈ ವಿಜ್ಞಾನವನ್ನು ನಂಬಿದರೆ ನಾವು ಮಾನಸಿಕವಾಗಿ ದಾಸರಾಗಿಯೇ ಉಳಿಯುತ್ತೇವೆ. ಇದಕ್ಕಾಗಿ ವಿಶೇಷ ಜ್ಞಾನವನ್ನು ಸಂಪಾದಿಸಬೇಕು.... ಇಂದಿನ ಆಧುನಿಕ ವಿಜ್ಞಾನ ಊಹಾಪೋಹದ ಜ್ಞಾನವನ್ನು ಆಧರಿಸಿದೆ. ಊಹಾಪೋಹದ ಜ್ಞಾನವನ್ನು ವಿಜ್ಞಾನವೆಂದು ತಿಳಿಯದೆ ನಿಜವಾದ ವಿಶೇಷ ಜ್ಞಾನ ತಿಳಿದುಕೊಳ್ಳಲು ನಾವು ಪ್ರಯತ್ನಿಸಬೇಕು---- 15ನೇ ಶತಮಾನದಿಂದೀಚೆಗೆ ಬೆಳೆದು ಬಂದ ಆಧುನಿಕ ವಿಜ್ಞಾನದಲ್ಲಿ ಕೇವಲ ಐರೋಪ್ಯ ಚಿಂತನೆಗಳು ಮಾತ್ರ ಸೇರಿವೆ. ಇತರ ಭೂಭಾಗದವರ ಚಿಂತನೆಗಳನ್ನು ಬಿಡಲಾಗಿದೆ. ಅದನ್ನು ಒಪ್ಪಲಾಗದು, ಒಪ್ಪಲಾಗದು, ಒಪ್ಪಲಾಗದು! ಮೆಕಾಲೆ ಶಿಕ್ಷಣ ಬಂದ ಮೇಲಂತೂ ಇಲ್ಲಿನ ಜ್ಞಾನ ಬಿಟ್ಟು ಪಾಶ್ಚಾತ್ಯ ವಿಜ್ಞಾನವನ್ನೇ ಗಿಳಿಪಾಠ ಮಾಡಲಾಗುತ್ತಿದೆ...."

ಧಾರವಾಡ ಹುಚ್ಚಾಸ್ಪತ್ರೆಯಿಂದಲೋ, ನಿಮ್ಹಾನ್ಸ್‌ನಿಂದಲೋ ಬಂದವನಂತೆ ಆಡುತ್ತಿರುವ ಈ ಭಟ್ಟನ ಯಥಾವತ್ ಮಾತುಗಳನ್ನು ಪ್ರಕಟಿಸುತ್ತ ವಿ.ಕ ತನ್ನ ಚೆಡ್ಡಿ ಬುದ್ಧಿ ತೋರಿಸುತ್ತಿದೆ. ಇವನು ಹೇಳುತ್ತಿರುವ 'ವಿಜ್ಞಾನದಲ್ಲಿ ವಿಶೇಷ ಜ್ಞಾನ, ವಿಪರೀತ ಜ್ಞಾನ' ಎಂಬುದನ್ನು ನಾವಂತೂ ಎಲ್ಲೂ ಕೇಳಿಲ್ಲಪ್ಪ.

ವಿ.ಕ.ಗಿಂತ ತಾನೇನು ಕಡಿಮೆ ಎಂಬಂತೆ ಉದಯವಾಣಿ, ಈ ಹುಚ್ಚಪ್ಪನ ವಾಣಿಯನ್ನು ತಿಂಗಳು ಮೊದಲೇ ಪ್ರಕಟಿಸಿ ತಾನೆಷ್ಟು ಸಮಾಜದ್ರೋಹಿ ಎಂದು ತೋರಿಸಿಕೊಟ್ಟಿತ್ತು. "ಜೀವ ಎಂದರೇನು ಎಂಬುದನ್ನು ಇನ್ನೂ ನಿರೂಪಿಸಲಾಗಿಲ್ಲ; ಮಂಗನಿಂದ ಮಾನವ ಎಂಬ ವಾದದಲ್ಲಿ ಹುರುಳಿಲ್ಲ, ಜೀವಶಾಸ್ತ್ರ ರಸಾಯನಶಾಸ್ತ್ರ ಭೌತ ಶಾಸ್ತ್ರಗಳಲ್ಲಿ ಸತ್ಯಾಂಶಗಳಿಲ್ಲ......."

ಬಪ್ಪರೇ ಮಗನೇ ಕೇಶವಭಟ್ಟ! ನೀ ಹೇಳಿದಂತೆ 'ಮಂಗನಿಂದ ಮಾನವನಾಗಿಲ್ಲ' ಎಂಬುದು ನಿನಗಷ್ಟೇ ಅನ್ವಯಿಸುತ್ತೆ ಭಟ್ಟ.... ನೀನಿನ್ನೂ ಮಂಗನೇ ಬಿಡು!! ಬೆಂಗಳೂರಿನ ಪ್ರಕಾಶ್ ಶಾಸ್ತ್ರಿಯನ್ನು ಒಬ್ಬ ಹುಂಬ ಜ್ಯೋತಿಷಿ ಎಂದು ತಳ್ಳಿ ಹಾಕಬಹುದು. ಆದರೆ ಈ ಡಾ|| ಪಳ್ಳತಡ್ಕ ಕೇಶವಭಟ್ಟ, ಪ್ರಕಾಶ್‌ಶಾಸ್ತ್ರಿ, ಮುರಳಿ ಮನೋಹರ್ ಜೋಶಿ, ಮುತಾಲಿಕ್‌ಗಳನ್ನೆಲ್ಲ ಬೆರೆಸಿ ರಚಿಸಿದ ಜೇವಿಯಂತಿದ್ದಾನೆ. ಇಂತಹವರ ಸಂತತಿ ಅಲ್ಲಲ್ಲಿ ಕಂಡು ಬರುತ್ತಿದೆ ಹಾಗೂ ಇವೆಲ್ಲವೂ ಚೆಡ್ಡಿ ಕುಲದಲ್ಲೇ ಇವೆ.

ಕುಂದಾಪುರದ ಸೇವಾ ಸಂಗಮ ಟ್ರಸ್ಟ್‌ನವರು ವಿಷ್ಣು ಸಹಸ್ರನಾಮ ಪಠಣದಿಂದ ಕಡಲ್ಕೊರೆತ, ಸುನಾಮಿ, ಚಂಡಮಾರುತ ಮುಂತಾದ ಪ್ರಾಕೃತಿಕ ವಿಕೋಪಗಳನ್ನೆಲ್ಲ ತಡೆಯಬಹುದೆಂದು ಪ್ರಯೋಗಗಳಿಂದ ದೃಢಪಟ್ಟಿದೆ ಎಂದು ರೀಲು ಬಿಡುತ್ತಾ ಕಾಸರಗೋಡಿನಿಂದ ಗೋವಾ ವರೆಗೆ ಅಭಿಯಾನ ನಡೆಸಿದ್ದರು.

ಎಂತೆಂತಹ ನೀಚ ಜನ ನೋಡಿ! ನಮ್ಮ ಪ್ರವೀಣ್ ಶೆಟ್ಟಿಯವರು ಇಂಥದನ್ನೆಲ್ಲ ಖಂಡಿಸಿ ಪತ್ರ ಬರೆದರೆ ವಿ.ಕ., ಉದಯವಾಣಿ ಪ್ರಕಟಿಸುವುದಿಲ್ಲ !

- ಮಲ್ಲಿ


ಆಲ್ದೂರು ವಿ.ಎಸ್.ಎಸ್.ಎನ್. ಬ್ಯಾಂಕ್

ಸತ್ತ ಮಹಿಳೆಗೂ ಸಾಲ!

ಶ್ರೀಮತಿ ಸಲೀಮಾ ಖಾತೂಮ್ 4 ವರ್ಷಗಳ ಹಿಂದೆ ಮರಣ ಹೊಂದಿದ್ದು ಸತ್ತ ಮೂರು ವರ್ಷಗಳ ನಂತರ ಆಲ್ದೂರು ವ್ಯವಸಾಯ ಸಹಕಾರ ಬ್ಯಾಂಕಿನಲ್ಲಿ ಆಕೆಯ ಹೆಸರಲ್ಲಿ 1.60 ಲಕ್ಷ ರೂ. ಸಾಲ ಪಡೆಯಲಾಗಿದೆ!

ಸಲೀಮಾರವರು 2002 ಜೂನ್ 6 ರಂದು ಮೃತರಾದರು. ಅಂದೇ ಅವರ ಮಗ ಮುಖ್ತಾರ್ ಅಹಮದ್ ಸಲೀಮಾರು ಬದುಕಿರುವುದಾಗಿ ಸುಳ್ಳು ಹೇಳಿ, ಗೋಲ್‌ಮಾಲ್ ಮೂಲಕ ಸಲೀಮಾರ ಹೆಸರಲ್ಲಿದ್ದ 5 ಎಕರೆ ಕಾಫಿ ತೋಟದ ಮೇಲೆ ಹಕ್ಕು ಸಾಧಿಸಿದ. ಹಳೆಯ ಸಾಲವನ್ನು ಮುಂದುವರೆಸುವಂತೆ ಮಾಡಿದ. ಈಗ ಮತ್ತೆ 2005 ರ ಜೂನ್ 30 ರಂದು ದಿವಂಗತ ಸಲೀಮಾ ಹೆಸರಲ್ಲಿ ಕ್ರೆಡಿಟ್ ಸಾಲ ಮಂಜೂರಾಗಿ 1.60 ಲಕ್ಷ ರೂ.ಗಳ 127046 ನಂಬರಿನ ಚೆಕ್ ವಿತರಿಸಲಾಗಿದೆ! ಸಲೀಮಾರ ಉಳಿತಾಯ ಖಾತೆಯಿಂದ 20162 ನಂಬರಿನ ಚೆಕ್ ಮೂಲಕ 2005 ಜುಲೈ 1 ರಂದು ಹಣ ಡ್ರಾ ಮಾಡಲಾಗಿದೆ!

ಈ ಅವ್ಯವಹಾರದ ಹಿಂದೆ ನಕಲಿ ದಾಖಲೆಗಳ ಸೃಷ್ಟಿ ಇದೆ. ಆಲ್ದೂರು ಲೆಕ್ಕಿಗ ಬಿ.ಬಿ. ಲಂಕೇಗೌಡ ನೀಡುವ ದಾಖಲೆಗಳ ಪ್ರಕಾರ ಸಲೀಮಾ ನಿಧನದ ನಂತರ 2005 ಜೂನ್ 26 ರಂದು ಸಲೀಮಾರ ಸರ್ವೆ ನಂ. 505 ರ ಕಾಫಿ ತೋಟದ ಮಾಲೀಕತ್ವ ಮಗ ಮುಕ್ತಾರ್ ಅಹಮದ್ ಹೆಸರಿಗೆ ಬದಲಾಗಿದೆ. ಲಂಕೇಗೌಡ ಒಂದು ನಕಲಿ ಮರಣಪತ್ರ ಸೃಷ್ಟಿಸಿ, ಸಲೀಮಾರು 2005 ಜುಲೈ 6 ರಂದು ಮರಣ ಹೊಂದಿದ್ದಾರೆ ಎಂದು ಸುಳ್ಳು ಹೆಣೆಯುತ್ತಾನೆ. ಸತ್ತ ಮಹಿಳೆಯ ಹೆಸರಲ್ಲಿ ಸಾಲಕ್ಕೆ ಅರ್ಜಿ ತಯಾರಿಸಿ ಸಹಿ ಹಾಕಿದ್ದು ಹೇಗೆ? ವ್ಯವಸಾಯ ಸೇವಾ ಸಹಕಾರ ಬ್ಯಾಂಕಿನ ವ್ಯವಸ್ಥಾಪಕ ವೆಂಕಟೇಶ್ ಹಾಗೂ ಆಡಳಿತ ಮಂಡಳಿ ನಿರ್ದೇಶಕರು ಅರ್ಜಿ ಪರಿಶೀಲಿಸದೇ ಸಾಲ ಮಂಜೂರು ಮಾಡಿದ್ದು ಹೇಗೆ? ಸಾಲದ ಚೆಕ್ ನೀಡಿದಾಗ ಯಾರ ಸಹಿ ಪಡೆಯಲಾಗಿದೆ? ಎಲ್ಲ ಅವ್ಯವಹಾರದ ಹಿಂದೆ ವ್ಯವಸ್ಥಾಪಕ ವೆಂಕಟೇಶ್‌ನ ನೆರಳೇ ಕಾಣುತ್ತಿದೆ.



ವೆಂಕಟೇಶ್

ಬ್ಯಾಂಕ್‌ಗೆ ಸೇರಿದ ಅಂಗಡಿ ಮಳಿಗೆಗಳ ಬಾಡಿಗೆಯಲ್ಲೂ ವೆಂಕಟೇಶ್ ಹಣ ನುಂಗುತ್ತಿದ್ದಾನೆ. ಆಲ್ದೂರು ಡಿಸಿಸಿ ಬ್ಯಾಂಕಿನಲ್ಲಿ ಸಾಲ ಪಡೆದು ಸುಸ್ತಿದಾರರಾಗಿರುವ ವ್ಯವಸಾಯ ಸಹಕಾರ ಬ್ಯಾಂಕಿನ ಅಧ್ಯಕ್ಷ ನಾರಾಯಣಗೌಡ ಅಧ್ಯಕ್ಷರಾಗಿರುವುದು ಸೊಸೈಟಿ ಕಾಯಿದೆ ಅನ್ವಯ ಕಾನೂನುಬಾಹಿರವಾಗಿದೆ.

ಇಂತಹವರೆಲ್ಲ ಸೇರಿ ಸತ್ತ ಸಲೀಮಾರ ಹೆಸರಲ್ಲಿ ಸಾಲ ನೀಡಿದ್ದಾರೆ. ಸಾಲ ನೀಡಿದ, ಸಾಲ ಪಡೆದ ಇಬ್ಬರಿಗೂ ಶಿಕ್ಷೆ ಆಗಬೇಕಲ್ಲವೇ?

-ವರದಿಗಾರ


ಹದಗೆಟ್ಟ ಹಂಪಿ ವಿವಿಯ ಕಾರ್ಯವೈಖರಿ

ಕನ್ನಡ ನಾಡು ನುಡಿ: ಸಂಶೋಧನೆ ಹಾಗೂ ದಾಖಲೀಕರಣ ಪ್ರಕ್ರಿಯೆಯಲ್ಲಿ ರಚನಾತ್ಮಕವಾಗಿ ತೊಡಗಿಸಿಕೊಂಡು ಗುಣಾತ್ಮಕ ಸಾಧನೆ ಮಾಡಿರುವ ಹಂಪಿ ಕನ್ನಡ ವಿಶ್ವವಿದ್ಯಾಲಯವು ಅಕಾಡೆಮಿಕ್ ವಲಯದಲ್ಲಿ ತನ್ನದೇ ಆದಂತ ವಿಶಿಷ್ಟ ಛಾಪನ್ನು ಮೂಡಿಸಿದೆ. ಹಾಗಾಗಿಯೇ ಹಂಪಿ ವಿವಿಗೆ ಒಂದು ವಿಶೇಷ ಮನ್ನಣೆಯಿದೆ. ಇದು ಹಂಪಿ ವಿವಿಯಲ್ಲಿ ಕಾರ್ಯ ನಿರ್ವಹಿಸುವ ಪ್ರಾಧ್ಯಾಪಕರುಗಳಿಗೂ ಅನ್ವಯಿಸುತ್ತದೆ.



ಆದರೆ ಹಂಪಿ ವಿವಿಯ ಕಾರ್ಯಾರಂಭ ಮಾಡುವಾಗಿನ ಉತ್ಸಾಹ, ವೇಗ, ಕ್ರಿಯಾಶೀಲತೆಯಲ್ಲಿ ತನ್ನ ತೀವ್ರತೆಯನ್ನು ಕಳೆದುಕೊಳ್ಳುತ್ತಿದೆಯೇ? ವಿವಿಯಲ್ಲಿ ನಡೆಯುತ್ತಿರುವ ವಿದ್ಯಮಾನಗಳು ಹಾಗೂ ಆಡಳಿತ ಕಾರ್ಯವೈಖರಿ ಇಂತಹ ಪ್ರಶ್ನೆಗಳಿಗೆ ದಾರಿ ಮಾಡಿದೆ. ಮುಖ್ಯವಾಗಿ ಆಡಳಿತಾತ್ಮಕ ವಿಷಯದಲ್ಲಿ ವಿವಿಯ ಕಾರ್ಯವೈಖರಿ ಹಲವು ರೀತಿಯ ಟೀಕೆಗಳಿಗೆ ಎಡೆಯಾಗುತ್ತಿದೆ.

ಕನ್ನಡ ಅಭ್ಯರ್ಥಿಗಳು ಕನ್ನಡ ವಿವಿಗಿರುವ ಹೆಗ್ಗಳಿಕೆಯ ಕಾರಣಕ್ಕಾಗಿಯೇ ರಾಜ್ಯದಾದ್ಯಂತ ಸ್ನಾತಕೋತ್ತರ ಶಿಕ್ಷಣ ಪಡೆದಿರುವ ಅಭ್ಯರ್ಥಿಗಳು ಕನ್ನಡ ವಿವಿಯಲ್ಲಿ ನಡೆಯುವ ಸಂಶೋಧನೆ-ಅಧ್ಯಯನಗಳಲ್ಲಿ ತೊಡಗಿಸಿಕೊಳ್ಳಬೇಕೆಂಬ ಉತ್ಸುಕತೆಯನ್ನು ಪ್ರದರ್ಶಿಸುತ್ತಾರೆ. ಕನ್ನಡ ವಿವಿಗೆ ದೊರಕುವ ಯುಜಿಸಿ ಅನುದಾನಿತ ಸಂಶೋಧನಾ ಕಾರ್ಯಕ್ರಮಗಳು, ಅಧ್ಯಯನಗಳು ಅಂತಹ ಪಾಲ್ಗೊಳ್ಳುವಿಕೆಗೆ ಸದವಕಾಶ ಗಳಿರುವ ಕ್ಷೇತ್ರಗಳಾಗಿವೆ. ಯುಜಿಸಿ ಅನುದಾನ ಅವಲಂಬಿಸಿ ಆಯಾ ಸಂಶೋಧನೆ ಅಧ್ಯಯನಗಳಿಗೆ ಯೋಜನಾ ಸಹಾಯಕರನ್ನು ನೇಮಿಸಿಕೊಳ್ಳಲಾಗುತ್ತದೆ. ಈ ನೇಮಕಾತಿಯ ಬಗ್ಗೆ ವ್ಯಾಪಕವಾದಂತ ಟೀಕೆ, ಅಪಸ್ವರಗಳು ಕೇಳಿಬರುತ್ತಿವೆ. ಬಹಳಷ್ಟು ಪ್ರಾಜೆಕ್ಟ್‌ಗಳಿಗೆ ಸಂಬಂಧಪಟ್ಟ ವಿಭಾಗದ ರೀಡರ್‌ಗಳು ತಮಗೆ ಬೇಕಾದವರನ್ನು ಮೊದಲೇ ಫಿಕ್ಸ್ ಮಾಡಿಕೊಂಡು ಸಂದರ್ಶನವೆಂಬ ನಾಮಕಾವಸ್ಥೆ ಪ್ರಕ್ರಿಯೆಯನ್ನು ಮಾಡಿ ಮುಗಿಸುತ್ತಾರೆ. ಇಲ್ಲಿ ನಿಜವಾದ ಅಧ್ಯಯನಾಸಕ್ತ ಸ್ನಾತಕೋತ್ತರ ಪದವೀಧರರಿಗೆ ನ್ಯಾಯ ಸಿಗುತ್ತಿಲ್ಲವೆಂಬ ಕೊರಗು ಕೇಳಿಬರುತ್ತಿದೆ. ಅದೆಷ್ಟೋ ಸಂದರ್ಭಗಳಲ್ಲಿ ಈ ಪೂರ್ವನಿರ್ಧಾರಿತ ಆಯ್ಕೆಯ ಕೈಚಳಕದ ಜಾದೂ ಬಲ್ಲ ಸ್ನಾತಕೋತ್ತರ ಪದವೀಧರರು ಬಹಿರಂಗ ವಾಗಿಯೇ ಅಸಮಾಧಾನ ವ್ಯಕ್ತಪಡಿಸಿದ್ದುಂಟು. ಹೀಗೆ ಆಯ್ಕೆ ಮಾಡಿಕೊಳ್ಳುವುದಾದರೆ ಸಂದರ್ಶನವೆಂಬ ನಾಮಾಕಾವಸ್ಥೆ ಪ್ರದರ್ಶನ ಯಾಕೆ ಬೇಕು? ನೂರಾರು ಅಧ್ಯಯನಾಕಾಂಕ್ಷಿಗಳು ಅರ್ಜಿ ಸಲ್ಲಿಸಿ ಸಾವಿರಾರು ರೂಪಾಯಿ ಪ್ರಯಾಣ ಹಾಗೂ ಊಟ ವಸತಿಯ ಖರ್ಚು ಭರಿಸಿ ಬರಿಗೈಲಿ ವಾಪಸಾಗಬೇಕಾದ ಪರಿಸ್ಥಿತಿಯನ್ನು ಏಕೆ ನಿರ್ಮಿಸಬೇಕು? ಎಂಬಂತಹ ಪ್ರಶ್ನೆಗಳೇ ಅಸಮಾ ದಾನದ ಮೂಲವಾಗಿದೆ.


ಮಲ್ಲೇಪುರಂ ವೆಂಕಟೇಶ್


ಇನ್ನು ಯೋಜನಾ ಸಹಾಯಕರಾಗಿ ಆಯ್ಕೆಯಾದವರು ಇಡೀ ತಿಂಗಳು ಕೆಲಸ ಮಾಡಬೇಕು. ಹಾಜರಾತಿ ಇರಬೇಕು. ಕ್ಷೇತ್ರ ಭೇಟಿಯ ಮಾಹಿತಿಯನ್ನು ದಾಖಲಿಸಬೇಕೆಂಬ ನಿಯಮವಿದೆಯಾದರೂ ಆ ಪ್ರಕಾರ ನಡೆಯುತ್ತಿಲ್ಲ. ಕೆಲ ಪ್ರಾಧ್ಯಾಪಕ ಮಹಾಶಯರು ಯೋಜನಾ ಸಹಾಯಕರಿಗೆ ಬರುವ ವೇತನದಲ್ಲಿ ಪಾಲು ಪಡೆದು ಪೂರ್ತಿ ವೇತನ ಪಡೆದುದಕ್ಕೆ ದಾಖಲೆಯಾಗಿ ಸಹಿ ಮಾಡಿಸಿಕೊಳ್ಳುವ ಹಂತಕ್ಕೂ ತಲುಪಿದ್ದಾರೆ. ವಿಶೇಷವೆಂದರೆ ಇದೆಲ್ಲಾ ನಿಯಮಾವಳಿಗಳ ಪ್ರಕಾರವೇ ನಡೆಯುತ್ತದೆ!

ಪುಸ್ತಕ ಪ್ರಸಾರಾಂಗದ ಲಾಭದಾಯಕ ಹುದ್ದೆ

ವಿವಿಯ ಪ್ರಸಾರಾಂಗದಿಂದ ವಿವಿಧ ಅಧ್ಯಯನ ವಿಭಾಗಗಳಿಂದ ಲಕ್ಷಾಂತರ ಮೌಲ್ಯದ ಪ್ರಕಟಣೆಗಳು ಆಗಾಗ ಹೊರಬರುತ್ತವೆ. ಈ ಪ್ರಕಟಣೆಗಳ ಮುದ್ರಣವೆಲ್ಲಾ ಬೆಂಗಳೂರಿನ ಲಕ್ಷ್ಮಿ ಮುದ್ರಣಾಲಯ, ವಿಶ್ವಾಸ್ ಪ್ರಿಂಟಿಂಗ್ ಪ್ರೆಸ್ ಹಾಗೂ ಶಕ್ತಿ ಪ್ರಿಂಟರ್ಸ್‌ನಲ್ಲೇ ಆಗುತ್ತದೆ. ಈ ಮುದ್ರಣಾಲಯಗಳ ಮಾಲೀಕರು ಪ್ರಸಾರಾಂಗದ ನಿರ್ದೇಶಕರಾದ ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ್‌ರನ್ನು ಬುಕ್ ಮಾಡಿಕೊಂಡು ಲಕ್ಷಾಂತರ ರೂಪಾಯಿಗಳನ್ನು ಮುಂಡಾಮೋಚುತ್ತಾರೆಂಬ ಆರೋಪಗಳಿವೆ. ಇದಕ್ಕೆ ಪ್ರತಿ ಯಾಗಿ ಈ ಪ್ರಿಂಟಿಂಗ್ ಪ್ರೆಸ್‌ನ ಮಾಲೀಕರು ಮಲ್ಲೇಪುರಂ ಬೆಂಗಳೂರಿಗೆ ಹೋದಾಗಲೆಲ್ಲಾ ಅವರ ಆತಿಥ್ಯದ ಉಸ್ತುವಾರಿ, ಜೊತೆಗೆ ಕಾಣಿಕೆಗಳನ್ನೂ ಸಲ್ಲಿಸುತ್ತಾರೆಂಬುದು ಮುಂದುವರಿದ ಆರೋಪ. ಇಂತಹ ಕಾರಣಗಳಿಗಾಗಿಯೇ ವಿವಿಯಲ್ಲಿ ಪಸ್ತಕ ಪ್ರಸಾರಾಂಗದ ನಿರ್ದೇಶಕ ಹುದ್ದೆಯನ್ನು ಲಾಭದಾಯಕ ಹುದ್ದೆಯೆಂದು ಲೇವಡಿ ಮಾಡುವುದುಂಟು. ಈ ಲಾಭದಾಯಕ ಹುದ್ದೆಯನ್ನಲಂಕರಿಸುವ ಬಯಕೆ ಹಲವರಿಗಿದ್ದರೂ ಈವರೆಗೂ ಹಿ.ಚಿ. ಬೋರಲಿಂಗಯ್ಯ, ಡಾ. ಕರಿಗೌಡ ಬೀಚನಹಳ್ಳಿ, ಈಗ ಮಲ್ಲೇಪುರಂರವರಿಗೆ ಮಾತ್ರ ಈ ಅವಕಾಶ ಒದಗಿ ಬಂದಿದೆ.

ಮುದ್ರಣ ವ್ಯವಹಾರದ ಸುತ್ತ ನಡೆದಿವೆಯೆನ್ನಲಾದ ಗೋಲ್‌ಮಾಲ್ ಆರೋಪಗಳಿಗೆ ಹಿ.ಚಿ. ಬೋರಲಿಂಗಯ್ಯ, ಡಾ. ಕರಿಗೌಡ ಬೀಚನಹಳ್ಳಿ ಕೂಡಾ ಹೊರತಾಗಿಲ್ಲವೆಂಬುದು ಅಸಲಿ ಸಂಗತಿ. ಈ ಮುದ್ರಣ ವ್ಯವಹಾರದಲ್ಲಿ ನಡೆಯುತ್ತಿದೆಯೆನ್ನಲಾದ ಅವ್ಯವಹಾರ ನಿಯಂತ್ರಣಕ್ಕಿರುವ ಏಕೈಕ ದಾರಿಯೆಂದರೆ ಇದನ್ನು ಆಡಳಿತಾಧಿಕಾರಿಗಳ ವ್ಯಾಪ್ತಿಗೆ ತರಬೇಕು. ಹಾಗೂ ಮುದ್ರಣ ವ್ಯವಹಾರವೆಲ್ಲಾ ಪಾರದರ್ಶಕವಾಗಿರುವಂತೆ ನೋಡಿಕೊಳ್ಳಬೇಕು.

ಈಗ ಕನ್ನಡ ವಿವಿಗೆ ಕುಲಸಚಿವರಾಗಿರುವ ಎ. ಶಂಕರ್ ಕಳೆದ ಮೇ 9 ರಂದು ಅಧಿಕಾರ ವಹಿಸಿಕೊಳ್ಳಲಿದ್ದಾರೆಂಬ ಸುದ್ದಿ ಪ್ರಕಟವಾಗುತ್ತಿದ್ದಂತೆಯೇ ಅದಕ್ಕೆ ಮುನ್ನಾ ದಿನ ಅಂದರೆ ಮೇ 8 ರಂದು ಆಯ್ಕೆ ಸಮಿತಿ ಸೇರಿ ಸುಮಾರು ಹನ್ನೆರಡು ಜನರಿಗೆ ನೇಮಕಾತಿ ಆದೇಶ ಕೊಟ್ಟಿದೆ. ಈ ಹುದ್ದೆಗಳ ನೇಮಕಾತಿ ಸಂದರ್ಶನ ಮಾರ್ಚ್‌ನಲ್ಲೇ ಮುಗಿಸಿದರೂ ನೇಮಕಾತಿ ಆದೇಶವನ್ನು ಕೊಟ್ಟಿರಲಿಲ್ಲವೆನ್ನಲಾಗಿದೆ. ಯಾವಾಗ ನೂತನ ಕುಲಸಚಿವರನ್ನಾಗಿ ಕೆಎಎಸ್ ಶ್ರೇಣಿಯ ಅಧಿಕಾರಿಯೊಬ್ಬರನ್ನು ನೇಮಿಸುವ ಆದೇಶ ಹೊರಬಿತ್ತೋ, ತರಾತುರಿಯಲ್ಲಿ ಅಭ್ಯರ್ಥಿಗಳನ್ನು ನೇರವಾಗಿ ವಿವಿಗೆ ಕರೆಯಿಸಿ ನೇಮಕಾತಿ ಆದೇಶ ನೀಡಲಾಗಿದೆ. ಈ ನೇಮಕಾತಿಯಲ್ಲಿ ಬ್ಯಾಕ್‌ಲಾಗ್ ಹುದ್ದೆಗಳನ್ನೂ ಭರ್ತಿ ಮಾಡಲಾಗಿದ್ದು, ವಿವಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಆಡಳಿತ ಸಿಬ್ಬಂದಿಯ ಬಂಧು ಬಳಗ ವಲಯದ ಏಳೆಂಟು ಜನ ನೌಕರಿ ಗಿಟ್ಟಿಸಿದ್ದಾರೆ. ಈ ಯಾದಿಯಲ್ಲಿ ಉಪಕುಲಪತಿ ಡಾ. ಬಿ.ಎ. ವಿವೇಕ ರೈ ಕಡೆಯ ಅಭ್ಯರ್ಥಿಯೆನ್ನಲಾದ ಮೋಹನ್ ಎಂಬುವರನ್ನು ಪ್ರಕಟಣಾ ಸಹಾಯಕರನ್ನಾಗಿ ನೇಮಕಾತಿ ಮಾಡಿಕೊಳ್ಳಲಾಗಿದೆ. ಸಂದರ್ಶನಕ್ಕೆ ಹಾಜರಾದವರಲ್ಲಿ ಈತನಿಗಿಂತಲೂ ಶೇಕಡಾವಾರು ಅಧಿಕ ಅಂಕಗಳನ್ನು ಪಡೆದವರು ಹಾಜರಾಗಿದ್ದರೂ ಅಂತಹವರನ್ನು ಕಡೆಗಣಿಸಿ ಮೋಹನ್‌ರನ್ನು ನೇಮಕ ಮಾಡುವ ಕರಾಮತ್ತು ಹೇಗೆ ನಡೆಯಿತು? ಸರ್ಕಾರಿ ಸ್ವಾಮ್ಯದ ಸಂಸ್ಥೆಯೊಂದರ ಸಿಬ್ಬಂದಿಯ ಸಂಬಂಧಿ ಗಳೇ ಇಷ್ಟೊಂದು ಪ್ರಮಾಣದಲ್ಲಿ ನೌಕರಿ ಗಿಟ್ಟಿಸುವುದು ಕಾಕತಾಳೀಯ ವಾಗಲಾರದು. ಹಾಗಾಗಿಯೇ ಈ ನೇಮಕಾತಿಯ ಸುತ್ತಲಿನ ಸಂಶಯ ಗಳು ಇನ್ನೂ ಬಗೆಹರಿದಿಲ್ಲ. ಈ ಸಂಶಯಗಳಿಗೆ ಆಗ ಕುಲಸಚಿವ ರಾಗಿದ್ದ ಡಾ. ಕರಿಗೌಡ ಬೀಚನಹಳ್ಳಿ ಯವರೇ ಉತ್ತರಿಸಬೇಕು.


ವಿವೇಕ್ ರೈ

ಕಿರಿಯ ಇಂಜಿನಿಯರ್ ಆಗಿದ್ದ ನಂಜಯ್ಯ ಕೈ ಶುದ್ಧವಿರುವಾತನಲ್ಲ. ಈತ ನುಂಗುವ ಕಾಯಕಕ್ಕಾಗಿಯೇ ಕುಖ್ಯಾತಿ ಪಡೆದಿದ್ದಾನೆ. ವಿವಿಯಲ್ಲಿ ನಡೆದಿರುವ ಕಳಪೆ ಕಾಮಗಾರಿ ಗಳಲ್ಲೆಲ್ಲಾ ಈತನ ಕೈಚಳಕದ ಪ್ರಭಾವವಿದೆ. ಇಂತಾ ನಂಜಯ್ಯನನ್ನು ಹಿಂದೆ ಸಮಾಜ ಕಲ್ಯಾಣ ಸಚಿವರಾಗಿದ್ದ ಕೃಷ್ಣಪ್ಪನವರು ವಿವಿಗೆ ಭೇಟಿ ನೀಡಿದ್ದಾಗ ಕಳಪೆ ಕಾಮಗಾರಿಯ ಕಾರಣ ಕ್ಕಾಗಿಯೇ ಸ್ಥಳದಲ್ಲೇ ಅಮಾನತು ಮಾಡಿಸಿದ್ದರು.

ಇದಾಗಿ ವರ್ಷ ಕಳೆಯುವ ಮುನ್ನವೇ ಈತ ಬಡ್ತಿ ಪಡೆದಿದ್ದಾನೆ. ಗುಡಿಮನಿ ಎಂಬ ದ್ವಿತೀಯ ದರ್ಜೆ ಸಹಾಯಕರಿಗೆ ಸಹಾಯಕ ಗ್ರಂಥಪಾಲಕರನ್ನಾಗಿ ಬಡ್ತಿ ನೀಡಲಾಗಿದೆ. ಆದರೆ ಈತನಿಗೆ ಆ ಹುದ್ದೆಗಿರಬೇಕಾದ ವಿದ್ಯಾರ್ಹತೆ ಇಲ್ಲ. ಸಹಾಯಕ ಕುಲ ಸಚಿವರಾಗಿದ್ದ ಪ್ರೇಮ್‌ಕುಮಾರ್‌ಗೆ [illegible] ನೀಡಲಾಗಿದೆ.

ಗ್ರಂಥಾಲಯ ಫಜೀತಿ

ಮುಖ್ಯ ಗ್ರಂಥಪಾಲಕ ಡಾ. ರಾಧಾಕೃಷ್ಣ ಉಪಗ್ರಂಥಪಾಲಕರಾದ ನಾಗವೇಣಿ ಇವರ ನಡುವಿನ ವೈಮನಸ್ಯದ ಕಾರಣಗಳಿಗಾಗಿ ವಿವಿಯ ಗ್ರಂಥಾಲಯ ಎರಡು ಪ್ರತ್ಯೇಕ ವಿಭಾಗಗಳಾಗಿವೆ. ಒಂದು ಪುಸ್ತಕ ವಿಭಾಗ, ಮತ್ತೊಂದು ಪರಾಮರ್ಶನ ವಿಭಾಗ. ಈ ವಿಭಾಗವನ್ನು ಒಂದೂವರೆ ಕಿ.ಮೀ. ದೂರದ ಕಟ್ಟಡಕ್ಕೆ ಸ್ಥಳಾಂತರಿಸಲಾಗಿದೆ. ಇದು ಅಧ್ಯಯನ ನಿರತ ವಿದ್ಯಾರ್ಥಿಗಳಿಗೂ, ಪ್ರಾಧ್ಯಾಪಕರುಗಳಿಗೂ ದೊಡ್ಡ ತಲೆನೋವಾಗಿ ಪರಿಣಮಿಸಿದೆ. ಎಚ್.ಜೆ. ಲಕ್ಕಪ್ಪಗೌಡರ ಅವಧಿಯಲ್ಲೇ ಆಗಿದ್ದ ಈ ಲೋಪವನ್ನು ಇದುವರೆಗೂ ಸರಿಪಡಿಸಲಾಗಿಲ್ಲ.

ಸಂಯೋಜಿತ ಕೋರ್ಸ್ ರದ್ಧತಿ

2003ರಲ್ಲಿ ಆರಂಭಿಸಲಾಗಿದ್ದ ಎಂ.ಎ., ಪಿಎಚ್‌ಡಿ ಸಂಯೋಜಿತ ಕೋರ್ಸಿಗೆ ಪ್ರಸಕ್ತ ವರ್ಷದಲ್ಲಿ ಎಳ್ಳುನೀರು ಬಿಡಲಾಗಿದೆ. ಈ ಕೋರ್ಸ್ ಆರಂಭಿಸಲು ಉತ್ಸುಕತೆಯಿಂದ ಒಪ್ಪಿಗೆ ಕೊಟ್ಟ ಅಧ್ಯಾಪಕರುಗಳೇ ಹಿಂದೆ ಸರಿದಿದ್ದರಿಂದ ಈ ಕೋರ್ಸ್ ನಿಲ್ಲಿಸಲಾಗಿದೆ ಎಂದು ಹೇಳಲಾಗುತ್ತಿದೆ. ಹೈದರಾಬಾದ್ ಕರ್ನಾಟಕದ ವಿದ್ಯಾರ್ಥಿಗಳಿಗೆ ಶೈಕ್ಷಣಿಕವಾಗಿ ಪ್ರಾದೇಶಿಕ ಅಸಮತೋಲನದ ಕೊರತೆಯನ್ನು ನೀಗಿಸಲು ಈ ಕೋರ್ಸ್ ಸಹಕಾರಿಯಾಗುತ್ತದೆ ಎಂದೇ ಭಾವಿಸಲಾಗಿತ್ತು. ಈ ಸಂಯೋಜಿತ ಕೋರ್ಸ್‌ನ ರದ್ಧತಿಯಿಂದಾಗಿ ಹೈದರಾಬಾದ್ ಕರ್ನಾಟಕ ಭಾಗದ ವಿದ್ಯಾರ್ಥಿಗಳೀಗ ಮತ್ತೆ ದೂರದ ಗುಲ್ಬರ್ಗಾಕ್ಕೆ ಹೋಗಬೇಕಿದೆ. ಇದು ಈ ಭಾಗದ ಉನ್ನತ ಶಿಕ್ಷಣಾಕಾಂಕ್ಷಿ ವಿದ್ಯಾರ್ಥಿ ಸಮುದಾಯದಲ್ಲಿ ಅಸಮಧಾನವನ್ನಂತೂ ಮೂಡಿಸಿದೆ.


ವಿವಿಯೊಳಗಿನ ವಸ್ತು ಸಂಗ್ರಹಾ ಲಯಕ್ಕೆ ಪ್ರವೇಶ ಶುಲ್ಕ ನಿಗದಿಪಡಿಸಿ ರುವುದೇಕೆಂಬುದು ತಿಳಿಯುತ್ತಿಲ್ಲ. ಅಲ್ಲಿ ತಿರುಗಿ ನೋಡುವವರೂ ಇಲ್ಲ. ಜೊತೆಗೆ ವಿವಿಯಲ್ಲಿ ಕುಡಿಯುವ ನೀರು, ಶೌಚಾಲಯ, ಬಸ್‌ನಿಲ್ದಾಣ, ಕ್ಯಾಂಟೀನ್ ಸೌಲಭ್ಯ ಏನೊಂದೂ ಸಮರ್ಪಕ ವಾಗಿಲ್ಲ. ಹೊಸಪೇಟೆಯಿಂದ ವಿವಿಗೆ ಬೆಳಿಗ್ಗೆ 9.30, ಸಂಜೆ 5.30ರ ಸಮಯ ಹೊರತುಪಡಿಸಿದರೆ ಬೇರೆ ಟೈಮಿಗೆ ಬಸ್ ಸೌಲಭ್ಯವಿಲ್ಲ. ಇಂತಹ ಸಮಸ್ಯೆಗಳ ಬಗ್ಗೆ ಹೇಳುವವರು, ಕೇಳುವವರು ಇಲ್ಲದಂತಾಗಿದೆ.

ಡಾ. ವಿವೇಕ್ ರೈರವರು ಉಪ ಕುಲಪತಿಗಳಾಗಿ ಬಂದಾಗ ವಿವಿಯಲ್ಲಿ ಒಂದಷ್ಟು ಗುಣಾತ್ಮಕ ಬದಲಾವಣೆಗಳಾಗಬಹುದೆಂಬ ನಿರೀಕ್ಷೆಯಿತ್ತು. ಈಗದೆಲ್ಲಾ ಹುಸಿಯಾಗಿದೆ. ವಿವಿಯ ವಾತಾವರಣವೇ ಡಲ್ಲು ಹೊಡೆಯುತ್ತಿದೆ. ಕುಲಸಚಿವ ಎ. ಶಂಕರ್ ಇನ್ನೂ ವಿವಿಯ ಆಡಳಿತಾತ್ಮಕ ಹಿಡಿತಕ್ಕಾಗಿ ತಿಣುಕುತ್ತಿರುವಂತಿದೆ. ಇಷ್ಟರ ನಡುವೆ ಡಾ. ಕೃಷ್ಣಕಟ್ಟಿ ಎಂಬ ಯೋಜನಾಧಿಕಾರಿ ಕುಲಸಚಿವ ಎ. ಶಂಕರ್‌ಗೆ ಭೋಪರಾಕ್ ಹೇಳುತ್ತಾ, ಚಾಡಿ ಹೇಳುತ್ತಾ ವಿವಿಯ ನೌಕರರು ಹಾಗೂ ಸಿಬ್ಬಂದಿ ವರ್ಗಕ್ಕೆ ಕಿರುಕುಳ ಕೊಡಿಸುವ ಕೆಲಸದಲ್ಲಿ ಸಾರ್ಥಕ್ಯ ಕಾಣುತ್ತಿದ್ದಾನೆ. ಹದಗೆಟ್ಟಿರುವ ಕನ್ನಡ ವಿವಿಯ ಆಡಳಿತವನ್ನು ಬಿಗಿಗೊಳಿಸುವವರಾರು?

-ವರದಿಗಾರ

ಚಿನ್ನಕ್ಕೆ ಖಾಕಿ ಕನ್ನ

5 ಕೋಟಿ ನಿಧಿ ನಾಪತ್ತೆ!


ಲಕ್ಷ್ಮಿ ಮತ್ತು ಶೇಖರಪ್ಪ

ರಾಯಚೂರು

ಅಣಾಮತ್ತು 280 ಚಿನ್ನದ ಬಿಲ್ಲೆಗಳು, 400 ಬೆಳ್ಳಿ ಬಿಲ್ಲೆ(ಹುಂಡಿ)ಗಳು! 5 ಕೋಟಿ ಮೊತ್ತದ ಈ ನಿಧಿ ಹಲವಾರು ಕೈಗಳನ್ನು ದಾಟಿ ಕೊನೆಗೆ ಮಾಯವಾಗಿ ಹೋಗಿದೆ! ಅನುಮಾನವೇನಿದ್ದರೂ ಪೊಲೀಸರತ್ತಲೇ ತಿರುಗುತ್ತಿದೆ. ಲಿಂಗಸುಗೂರಿನ ಪೊಲೀಸರ ಈ ಕರಾಮತ್ತು [illegible] ತಲ್ಲಣಗೊಳಿಸಿದೆ.

ಲಿಂಗಸುಗೂರಿಗೆ 5 ಕಿ.ಮೀ. ದೂರದಲ್ಲಿರುವ ಕಾಳಾಪುರ ಗ್ರಾಮದ ಲಕ್ಷ್ಮಿ ಎನ್ನುವವರ ಮನೆಯಲ್ಲಿ ದೊರೆತ ಈ ನಿಧಿ ಶೆಟ್ಟಿಯೊಬ್ಬನ ಕೈ ತಲುಪಿ, ಈಗ ಮಂಗಮಾಯವಾಗಿದೆ. ಲಕ್ಷ್ಮಿ ಮಾತ್ರ ಆ ಸಂಪತ್ತಿಲ್ಲ, [illegible] ಹಾಳಾಗಲು ಬಿಡುವುದಿಲ್ಲ ಎಂದು ಹಟ ಹಿಡಿದಿದ್ದಾಳೆ. ಪೊಲೀಸರಿಗೆ ದೂರು ಕೊಟ್ಟರೆ, ಪಾಪಿ ಪೊಲೀಸರು [illegible] ಚಿನ್ನದ ಬಿಲ್ಲೆಗಳ ಸಂಖ್ಯೆಯನ್ನು 280 [illegible] 140 ಕ್ಕೂ, ಬೆಳ್ಳಿಯ ಹುಂಡಿಗಳನ್ನು 400 ರಿಂದ 250 ಕ್ಕೂ ಇಳಿಸಿಬಿಟ್ಟಿದ್ದಾರೆ. ಈಗ ಕದಿಮೆಯಾಗಿರುವ ನಿಧಿ ಪೊಲೀಸಪ್ಪಗಳಿಂದಲೇ ಮಾರಾಟವಾಗಿರುವ ಸುದ್ದಿ ಹಬ್ಬಿದೆ!

ಈಗ ತನಿಖೆಯ ಡ್ರಾಮಾ ನಡೆದಿದೆ. ಆ ನೆಪದಲ್ಲಿ ಲಕ್ಷ್ಮಿಯನ್ನು ಆಗಾಗ ಠಾಣೆಗೆ ಕರೆಸಿ ಅವಾಚ್ಯ ಶಬ್ದಗಳಿಂದ ಬೈದು, ಕಂಪ್ಲೆಂಟ್ ವಾಪಸ್ ಪಡೆಯಲು ಒತ್ತಾಯಿಸುತ್ತಿದ್ದಾರೆ ಖಾಕಿ ದೈನ್ಯರ ಖದೀಮರು.

ಶೆಟ್ಟಿಯ ಕಿತಾಪತಿ

ಬೆಸಕನಾಳದ ಲಕ್ಷ್ಮಿ ಮದುವೆಯಾಗಿ ಕಾಳಾಪುರಕ್ಕೆ ಬಂದಳು. ಈ ಕುಟುಂಬದಲ್ಲಿ ಕಳೆದ ವರ್ಷಗಳಲ್ಲಿ ಸರಣಿ ಸಾವುಗಳೇ ಸಂಭವಿಸಿವೆ. ಲಕ್ಷ್ಮಿಯ ಮಾವಂದಿರಾದ ಈರಪ್ಪ ಸಾಬಣ್ಣ, ಮಲ್ಲಣ್ಣ, ಅತ್ತೆ ಯಲ್ಲಮ್ಮ, ಲಕ್ಷ್ಮಿಯ ಐದು ವರ್ಷದ ಮಗಳು ಯಲ್ಲಮ್ಮ, ಮೂರು ವರ್ಷದ ಮಗ [illegible] ಮರಣ ಹೊಂದಿದ್ದಾರೆ. ಆರು ತಿಂಗಳ ಹಿಂದಷ್ಟೇ ಲಕ್ಷ್ಮಿಯ ಗಂಡ ಹುಲಿಗೆಪ್ಪನೂ ತೀರಿಹೋದ. ಹೀಗೆ 5 ವರ್ಷದಲ್ಲಿ ಒಂದೇ ಮನೆಯ ಏಳು ಜನ ಸಾವಿಗೀಡಾಗಿದ್ದೂ ವಿಚಿತ್ರವಾಗಿದೆ. ಆ ಮನೆಯಲ್ಲಿನ ನಿಧಿಗಾಗಿ ಬಲಿಗಳು ನಡೆದವೆ? ಖಚಿತವಾಗಿ ಹೇಳಲಾಗುತ್ತಿಲ್ಲ.

ಕೂಲಿ ಮಾಡಿ ಜೀವನ ಸಾಗಿಸುವ ಲಕ್ಷ್ಮಿಗೆ ತನ್ನ ಮನೆಯಲ್ಲಿ ನಿಧಿ ಇರುವುದನ್ನು ಯಾರು ಹೇಳಿದರು ಎಂಬುದು ನಿಗೂಢವೇ! ಬೆಸಕನಾಳದಿಂದ ತನ್ನಣ್ಣ ಶೇಖರಪ್ಪನನ್ನು ಕರೆಸಿ ಮನೆಯೊಳಗೆಲ್ಲ ಅಗೆದಿದ್ದಾರೆ. ಒಂದು ಕಡೆ ತಾಮ್ರದ ಹಂಡೆ ದೊರೆತಿದೆ. ಗಟ್ಟಿಯಾಗಿ ಮುಚ್ಚಲ್ಪಟ್ಟಿದ್ದ ಆ ಹಂಡೆಯನ್ನು ಹಾರೆಯಿಂದ ಹೊಡೆದು ಓಪನ್ ಮಾಡಿದ್ದಾರೆ. ಬೆಚ್ಚಿಬೀಳುವಷ್ಟು ಚಿನ್ನ, ಬೆಳ್ಳಿ ದೊರೆತಿದೆ. ಅದನ್ನೆಲ್ಲ ಗೊಬ್ಬರದ ಚೀಲದಲ್ಲಿ ತುಂಬಿ ಸಜ್ಜೆ ಚೀಲಗಳ ಹಿಂದೆ ಬಚ್ಚಿಟ್ಟಿದ್ದಾರೆ. ಲಕ್ಷ್ಮಿಯ ಅಣ್ಣ ಶೇಖರಪ್ಪ ರಾಯಚೂರಿಗೆ ದೌಡಾಯಿಸಿ ಸರಾಫ್ ಬಜಾರ್‌ನಲ್ಲಿರುವ ಅಂತರಗಂಗಿ ಅಮರಪ್ಪನ ಚಿನ್ನದಂಗಡಿಯಲ್ಲಿ ವಿಚಾರಿಸಿದ್ದಾನೆ. ಅಮರಪ್ಪ ಚಿನ್ನ ತರಲು ಹೇಳಿದ್ದಾನೆ. ಆದರೆ ಶೇಖರಪ್ಪನಿಗೆ ಧೈರ್ಯ ಸಾಲದೇ ತಾನು ರೇಷನ್ ತೆಗೆದುಕೊಳ್ಳುತ್ತಿದ್ದ ಮಸ್ಕಿಯ ಅಂಗಡಿಗೆ ಹೋಗಿ, ಅದರ ಮಾಲೀಕ ನಾರಾಯಣ ಶೆಟ್ಟಿಗೆ ಹೇಳಿದ್ದಾನೆ. ಕಾಳಾಪುರಕ್ಕೆ ಬಂದು ನಿಧಿ ನೋಡಿದ ಶೆಟ್ಟಿ, ಗೋವಾದಲ್ಲಿ ತನ್ನ [illegible]. ಅವರಿಗೆ ಈ ಚಿನ್ನ ಮಾರೋಣ ಎಂದು ಶೇಖರಪ್ಪನಿಗೆ [illegible]


ದಾನರೆಡ್ಡಿ ಮತ್ತು ಯಲಿಗಾರ

ಒಂದು ದಿನ ಶೇಖರಪ್ಪನಿಗೆ ಫುಲ್ ಟೈಟ್ ಆಗುವಂತೆ ಕುಡಿಸಿದ ಶೆಟ್ಟಿ ಸೀದಾ ಕಾಳಾಪುರದ ಲಕ್ಷ್ಮಿ ಕಡೆ ಬಂದು ನಿಧಿ ಚೀಲ ಕೊಡು, ನಿನ್ನಣ್ಣ ಅಲ್ಲಿ ಕಾಯುತ್ತಿದ್ದಾನೆ, ನಾವು ಗೋವಾಕ್ಕೆ ಹೋಗಿ ಅದನ್ನು ಮಾರಿಬರುತ್ತೇವೆ ಎಂದು ಪೀಡಿಸಿದ್ದಾನೆ. ಅನುಮಾನಪಟ್ಟ ಲಕ್ಷ್ಮಿ ಕೊನೆಗೆ ನಿಧಿ ಚೀಲ ಕೊಟ್ಟೇ ಬಿಟ್ಟಿದ್ದಾಳೆ. ನಿಶೆ ಇಳಿದ ಮೇಲೆ ಮನೆಗೆ ಬಂದ ಶೇಖರಪ್ಪನಿಗೆ ಶೆಟ್ಟಿಯ ಕುತಂತ್ರ ಆಗ ಅರ್ಥವಾಗಿದೆ. ಶೆಟ್ಟಿಯ ಬಳಿ ಹೋದರೆ ಶೆಟ್ಟಿ ಕೈ ಎತ್ತಿಬಿಟ್ಟಿದ್ದಾನೆ.

ಕೊನೆಗೆ ಗ್ರಾಮದ ನಾಡಗೌಡರ ಮೂಲಕ ಕಂಪ್ಲೆಂಟ್ ನೀಡಿದ್ದಾರೆ. ಆರಂಭದಲ್ಲಿ ಲಿಂಗಸುಗೂರು ಪೊಲೀಸರು ನಾರಾಯಣ ಶೆಟ್ಟಿಗೆ [illegible] ರುಬ್ಬಿದ್ದಾರೆ. ನಂತರ ಶೆಟ್ಟಿ ಪರ ಮೃದು ಧೋರಣೆ ತಳೆದಿದ್ದು ಪೊಲೀಸರ ಮೇಲೆಯೇ ಅನುಮಾನ ಬರುವಂತೆ ಮಾಡಿದೆ.


ಲಿಂಗಸುಗೂರಿನ ಡಿವೈಎಸ್‌ಪಿ ಉಮೇಶ್ ದಾನರೆಡ್ಡಿ, ಸಿಪಿಐ ಎಲಿಗಾರರ ನಿಧಾನ ತನಿಖೆಗೆ ತಡೆ ಹಾಕಲು ಮಸ್ಕಿಯ ಸಿಪಿಐ [illegible] ಕುಂಬಳಗೆ ಪ್ರಕರಣವನ್ನು ವಹಿಸಿದರು ಎಸ್‌ಪಿ ಸಾಹೇಬರು. ಪರಿಣಾಮ ಮಾತ್ರ ಶೂನ್ಯ.

[illegible] ಪೊಲೀಸರು ಲಕ್ಷ್ಮಿಗೆ [illegible] [illegible]. ಹಾಗೆಯೇ ನಿಧಿಯನ್ನು ಸರ್ಕಾರಕ್ಕೆ ಒಪ್ಪಿಸುವ ಕೆಲಸವೂ ಆಗಬೇಕಿದೆ.


-ಅಶೋಕ್ ನೀಮಕರ್


ಚಿತ್ರ ವಿಮರ್ಶೆ: ನಾಯಿ ನೆರಳು

ನಾಯಿ ಇಲ್ಲದ ನೆರಳು.. ಸಮರ್ಥ ನಿರ್ದೇಶಕರೊಬ್ಬರ ದುರ್ಬಲ ರೂಪಾಂತರ..!



ಗಿರೀಶ್ ಕಾಸರವಳ್ಳಿಯವರ "ನಾಯಿ ನೆರಳು" ಬಿಡುಗಡೆಯಾಗಿದೆ. ಬಿಡುಗಡೆಯಾಗಿದೆ ಎಂದರೆ ಈಗಾಗಲೇ ಅದಕ್ಕೆ ರಾಜ್ಯ ಪ್ರಶಸ್ತಿ ಬಂದಿದೆ. ಅಷ್ಟು ಮಾತ್ರವಲ್ಲದೆ ಆಸಕ್ತರಿಗಾಗಿ ಮಾತ್ರ ಮೊನ್ನೆ ತ್ರಿಭುವನ್ ಚಿತ್ರಮಂದಿರದಲ್ಲಿ ಒಂದು ವಿಶೇಷ ಪ್ರದರ್ಶನವನ್ನೂ ಏರ್ಪಡಿಸಲಾಗಿತ್ತು. ಗಿರೀಶ್ ಕಾಸರವಳ್ಳಿಯವರು ಈ ಚಿತ್ರದ ತಯಾರಿಯಲ್ಲಿ ತೊಡಗಿಕೊಂಡಾಗಲೇ ಇದೇ ಪತ್ರಿಕೆಯಲ್ಲಿ ಹಲವು ಸಂದೇಹಗಳನ್ನು ವ್ಯಕ್ತಪಡಿಸಲಾಗಿತ್ತು.





ಎಸ್. ಎಲ್. ಭೈರಪ್ಪನವರ ಅತ್ಯಂತ ಸನಾತನವಾದಿ ಕಾದಂಬರಿಯನ್ನಿಟ್ಟುಕೊಂಡು ಚಿತ್ರ ಮಾಡುವ ಮೂಲಕ ಭೈರಪ್ಪನವರಂತಹವರ ಸನಾತನವಾದಿ ಸಂದೇಶಗಳಿಗೆ ಮಾನ್ಯತೆ ತಂದುಕೊಟ್ಟಂತಾಗುವುದಿಲ್ಲವೆ? ಕಾಸರವಳ್ಳಿಯವರ ಬೌದ್ಧಿಕ ಭೂಮಿಕೆ ಇದಕ್ಕೆ ತದ್ವಿರುದ್ಧವಾಗಿದ್ದಾಗಲೂ ಅವರ ಕಾದಂಬರಿ ಸೃಜನಶೀಲ ಪ್ರತಿಭೆಗಳಿಗೆ ಕೊಡುವ ಅಪಾರ ಅವಕಾಶಗಳನ್ನೇ ಪ್ರಧಾನವಾಗಿಸಿಕೊಂಡು ಅದರಿಂದ ಉಂಟಾಗಬಹುದಾದ ಸಾಮಾಜಿಕ ಪರಿಣಾಮಗಳ ಬಗ್ಗೆ ಕುರುಡಾಗುವುದು ತರವೆ? ಎಂಬ ಪ್ರಶ್ನೆಗಳನ್ನು ಎತ್ತಲಾಗಿತ್ತು.

ಅದರಲ್ಲೂ ಭೈರಪ್ಪನವರು ತಮ್ಮ ಒಪ್ಪಿಗೆ ಇಲ್ಲದೆ ಕಾದಂಬರಿ ಹಂದರದಲ್ಲಿ ಯಾವುದೇ ಬದಲಾವಣೆ ಮಾಡಿಕೊಳ್ಳಲು ಬಿಡುವುದಿಲ್ಲ ಎಂದೂ, ಕಾಸರವಳ್ಳಿಯವರು ಅಂಥ ಶರತ್ತುಗಳಿಗೆ ಒಪ್ಪಿಕೊಂಡಿದ್ದಾರೆ ಎಂಬುದೂ ಪತ್ರಿಕೆಗಳಲ್ಲಿ ವರದಿ ಆದ ಮೇಲೆ ಭೈರಪ್ಪನವರ ಸನಾತನವಾದಿತನ ಕಾಸರವಳ್ಳಿಯವರ ಪ್ರಗತಿಪರತೆಗಿಂತ ಗಟ್ಟಿಗಿದೆ ಎಂದು ಬಲ್ಲ ಯಾರಿಗೇ ಆದರೂ ಈ ಚಿತ್ರದ ಬಗ್ಗೆ ಕುತೂಹಲವೂ ಆತಂಕವೂ ಒಟ್ಟಿಗೆ ಹುಟ್ಟಿಕೊಂಡಿದ್ದು ಸಹಜವೇ ಆಗಿತ್ತು.

ಆದೇ ಅತಂಕದಿಂದ ಚಿತ್ರವನ್ನು ನೋಡಿದವರಿಗೆ, ಹಾಗೆಯೇ ನನಗೂ ಸಹ, ಚಿತ್ರ ನೋಡಿದ ಮೇಲೆ ಮಾತ್ರ ಒಂದು ಬಗೆಯ ನಿರಾಳತೆ ಉಂಟಾಗಿಬಿಡುತ್ತದೆ. ಏಕೆಂದರೆ ಅದು ಭೈರಪ್ಪನವರ ನಾಯಿ ನೆರಳು ಅಲ್ಲವೇ ಅಲ್ಲ. ಏಕೆಂದರೆ ಆದರಲ್ಲಿ ನಾಯಿಯೇ ಇಲ್ಲ. ಹೀಗಾಗಿ ಅದರ ನೆರಳೂ ಸಹ ಇಲ್ಲ. ಮೂಲ ಕಥೆ ಭೈರಪ್ಪನವರದು ಎಂದಿದ್ದರೂ ಸಹ ಹೆಸರುಗಳು ಮತ್ತು ಕೆಲವು ಎಳೆಗಳನ್ನು ಬಿಟ್ಟರೆ ಈ ಚಿತ್ರಕ್ಕೂ ಮೂಲ ಭೈರಪ್ಪನವರ ಕಾದಂಬರಿಗೂ ಸಂಬಂಧವೇ ಇಲ್ಲ.

ಮೂಲ ಕಥೆಯು ವಿಶ್ವೇಶ್ವರನೆಂಬ ಕರ್ಮಠ ಬ್ರಾಹ್ಮಣ ತನ್ನ ಪೂರ್ವಜನ್ಮದ ಪಾಪಕರ್ಮ ತೊಳೆಯದೇ ಇದ್ದರಿಂದ ಪುನರ್ಜನ್ಮವೆತ್ತಿ ಆ ಕರ್ಮವನ್ನು ತೊಳೆದುಕೊಳ್ಳುವ ಕಥೆ. ಆದ್ದರಿಂದಲೇ ಸ್ವರ್ಗದ ಬಾಗಿಲತನಕ ಬಂದರೂ ಪೂರ್ವಜನ್ಮದ ಪಾಪಶೇಷ ಧರ್ಮರಾಯನನ್ನು ನಾಯಿಯಾಗಿ ಅನುಸರಿಸಿದ ರೂಪಕವನ್ನು ಆಧರಿಸಿ ಕಾದಂಬರಿಯ ಶೀರ್ಷಿಕೆ 'ನಾಯಿ ನೆರಳು' ಎಂದಾಗಿದೆ. ಅದು ನಿಂತಿರುವುದೇ ಕಥೆಯಲ್ಲಿ ಬರುವ ಸನಾತನವಾದಿಗಳ ನಂಬಿಕೆಯ ಅಥೆಂಟಿಕ್ ಗಟ್ಟಿತನದ ಮೇಲೆ.... ಹಾಗೂ ಆಧುನಿಕವಾದಿಗಳ ಅಪನಂಬಿಕೆಯ ಸ್ವಾರ್ಥ ಹಾಗೂ ಲೌಕಿಕತೆಯ ತಳಹದಿಯ ಮೇಲೆ..

ಆದರೆ ಕಾಸರವಳ್ಳಿಯವರು ಹೇಳುವ ಕಥೆ ನಿಂತಿರುವುದೇ ಅತ್ಯಂತ ಸನಾತನವಾದಿ ಹೆಂಗಸೊಬ್ಬಳು ಪುನರ್ಜನ್ಮದ ಬಗ್ಗೆ ಆಳದಲ್ಲಿ ಇಟ್ಟುಕೊಂಡಿದ್ದ ಅಪನಂಬಿಕೆಯನ್ನು ಮತ್ತು ಅದನ್ನು ಹೊರಗೆಡವದೇ ತನ್ನ ಬದುಕನ್ನು ಮತ್ತೆ ಪಡೆದುಕೊಳ್ಳಲು ನಡೆಸುವ ಹೋರಾಟವನ್ನು ಆಧರಿಸಿ... ಆ ಮೂಲಕ ಸಂಪ್ರದಾಯವನ್ನು ತಮ್ಮದೇ ರೀತಿಯಲ್ಲಿ ಬುಡಮೇಲು ಮಾಡುತ್ತಾರೆಂಬುದನ್ನು ಆಧರಿಸಿ. ಅಲ್ಲದೆ ಮೂಲಕಥೆ ಕರ್ಮಠ ಬ್ರಾಹ್ಮಣನ ಪುರುಷನೋರ್ವ ಸ್ವರ್ಗ ಪ್ರಸ್ಥಾನದ ಕಥೆಯಾದರೆ ಕಾಸರವಳ್ಳಿಯವರ ಕಥೆ ವಂಕಟಲಕ್ಷ್ಮಿ ಎಂಬ ಬ್ರಾಹ್ಮಣ ವಿಧವೆಯ ಆತ್ಮ ಪ್ರತ್ಯಯದ ಮತ್ತು ಸ್ವನಿರ್ಣಯದ ಅಂದರೆ Assertion ನ ಕಥೆ. ಹೀಗಾಗಿ ಈ ಚಿತ್ರ ಭೈರಪ್ಪನವರ ಹಂಗಿಲ್ಲದ ಒಂದು ಸ್ವತಂತ್ರ ಚಿತ್ರವಾಗಲು ಪ್ರಯತ್ನಿಸಿದೆ ಎಂದು ಹೇಳಬಹುದು. ಆದರೆ ಅಂತಿಮವಾಗಿ ಕಾಸರವಳ್ಳಿಯವರ ಚಿತ್ರ ಪ್ರಸ್ಥಾನವನ್ನು ಭೈರಪ್ಪನವರ ಕಥಾ ಋಣದ ಪಾಪಶೇಷವೇ ಹಿಡಿದೆಳೆಯುವುದು ಇಡೀ ಸಂದರ್ಭದ ವಿಪರ್ಯಾಸ!!


ಚಿತ್ರಕಥೆ ಸಾರಾಂಶದಲ್ಲಿಷ್ಟು: ವಂಕಟಲಕ್ಷ್ಮಿ ಎಂಬ ಬ್ರಾಹ್ಮಣ ಯುವ ವಿಧವೆ ಕೇಶಮುಂಡನ ಮಾಡಿಸಿಕೊಂಡು ಒಬ್ಬ ಮಡಿ ಹೆಂಗಸಾಗಿ ಕಾಲಯಾಪನೆ ಮಾಡುತ್ತಿರುತ್ತಾಳೆ. ಅವಳಿಗೆ 20 ವಯಸ್ಸಿನ ಹೆಣ್ಣು ಮಗಳು. ಅವಳು ಮೈಸೂರಿನಲ್ಲಿ ಆಕೆಯ ತಮ್ಮನ ಮನೆಯಲ್ಲಿ ಉನ್ನತ ವ್ಯಾಸಂಗ ಮಾಡುತ್ತಿರುತ್ತಾಳೆ. ಆಧುನಿಕ ಮನೋಭಾವದವಳಾಗಿರುತ್ತಾಳೆ. ತನ್ನ ತಾಯಿಯು ಕೇಶಮುಂಡನ ಮಾಡಿಸಿಕೊಳ್ಳುವುದು ಮತ್ತು ಮಡಿ ಹೆಂಗಸಿನಂತೆ ಆಕೆ ಎಲ್ಲಾ ಲೌಕಿಕ ಸುಖಗಳಿಂದ ವಂಚಿತಳಾಗಿ ಬದುಕುವುದು ಆಕೆಗೆ ಇಷ್ಟವಿರುವುದಿಲ್ಲ. ಆದರೆ ಅದು ಸಂಪ್ರದಾಯನಿಷ್ಠ ಶ್ಯಾನುಭೋಗರ ಕುಟುಂಬವಾದ್ದರಿಂದ ಸಂಪ್ರದಾಯದ ಬಗ್ಗೆ ಆಕೆಗಿದ್ದ ಅಸಹನೆ ಕುಟುಕು ಮಾತುಗಳಿಂದ ಆಚೆಗೆ ಹೋಗುತ್ತಿರುವುದಿಲ್ಲ.

ಇದ್ದಕ್ಕಿದ್ದಂತೆ ದೂರದ ಮೈದಾನ ಪ್ರದೇಶದ ಊರೊಂದರಲ್ಲಿ ವಿಶ್ವೇಶ್ವರ ಎಂಬ ವ್ಯಕ್ತಿ ತಾನು ಇದೇ ಶ್ಯಾನುಭೋಗರ ಮಗನೆಂದೂ ಮತ್ತು ತನಗೆ ವೆಂಕಟಲಕ್ಷ್ಮಿ ಎಂಬುವಳ ಜೊತೆ ಮದುವೆ ಆಗಿರುವುದಾಗಿ ಹೇಳುತ್ತಿರುವುದೂ ಕೇಳಿ ಬಂದು ಹಾಸಿಗೆ ಹಿಡಿದಿದ್ದ ವೆಂಕಟಲಕ್ಷ್ಮಿಯ ಅತ್ತೆ ಆತನನ್ನು ನೋಡಲೇಬೇಕೆಂದು ಹಠ ಹಿಡಿಯುವುದರಿಂದ ಆತನನ್ನು ಮನೆಗೆ ಕರೆತರಲಾಗುತ್ತದೆ.

ವೆಂಕಟಲಕ್ಷ್ಮಿಯ ಅತ್ತೆ ಬಹಳ ಬೇಗನೇ ಅವನನ್ನು ತನ್ನ ಮಗನೆಂದು ಒಪ್ಪಿಕೊಂಡು ಚೇತರಿಸಿಕೊಂಡು ಬಿಡುತ್ತಾಳೆ. ಮಾವ ಅದರ ಸತ್ಯಾಸತ್ಯತೆಯ ಬಗ್ಗೆ ಚಿತ್ರದುದ್ದಕ್ಕೂ ಒಂದು ಬಗೆಯ ನಿಗೂಢ ಮೌನ ವಹಿಸುತ್ತಾನೆ. ಮೊದಲಿಗೆ ವೆಂಕಟಲಕ್ಷ್ಮಿ ಈ ಗಂಡನ ಅಪರಾವತಾರವನ್ನು ನಿರಾಕರಿಸುತ್ತಾಳೆ..ಆದರೆ ಕ್ರಮೇಣ ಒಪ್ಪಿಕೊಳ್ಳುತ್ತಾಳೆ. ಆ ರೀತಿ ವಿರುದ್ಧ ದಿಕ್ಕಿನಲ್ಲಿ ಯೋಚಿಸುವಂತೆ ಅಪ್ರಜ್ಞಾಪೂರ್ವಕವಾಗಿ ಪ್ರಚೋದಿಸುವುದೇ ಆಕೆಯ ಅತ್ತೆ. ತನ್ನ ಹೆಂಡತಿ ಇನ್ನೂ ಮಡಿ ಹೆಂಗಸಿನಂತೆ ಇರುವುದನ್ನು ಆಕ್ಷೇಪಿಸುವ ಮಗನ ಆಗ್ರಹಕ್ಕೆ ಮಣಿದು ಅತ್ತೆಯೇ ವೆಂಕಟಲಕ್ಷ್ಮಿಗೆ ಕೆಂಪು ಬಟ್ಟೆ ತೆಗೆಯಲು ಒತ್ತಾಯಿಸುತ್ತಾಳೆ ಮತ್ತು ರಾತ್ರಿ ಊಟ ಮಾಡಲು ಒಪ್ಪಿಕೊಳ್ಳುತ್ತಾಳೆ.

ಆದರೆ ಇವೆಲ್ಲಾ ಮಗನನ್ನು ಗಮನದಲ್ಲಿಟ್ಟುಕೊಂಡು ನಡೆದ ಕೆಲವು ಮಾರ್ಪಾಡುಗಳೆ ವಿನಃ ಸೊಸೆಯ ಮೇಲೆ ಇದರ ಪರಿಣಾಮದ ಬ[illegible] ಯೋಚಿಸಿರುವುದಿಲ್ಲ. ಆದರೆ ಕ್ರಮೇ[illegible] ವೆಂಕಟಲಕ್ಷ್ಮಿಯೂ ಆತನನ್ನು ತ[illegible] ಗಂಡನೆಂದು ಒಪ್ಪಿಕೊಂಡು ಸಂಸಾ[illegible] ಮಾಡಲು ಪ್ರಾರಂಭಿಸಿದಾಗ ಮಗನಿಗಾ[illegible] ಸಂಪ್ರದಾಯದಲ್ಲಿ ಕೊಂಚ ಮಾರ್ಪಾಡು ಮಾಡಿಕೊಂಡ ಅತ್ತೆ ಸೊಸೆಯನ್ನು ತೀವ್ರವಾಗಿ ವಿರೋಧಿಸಲು ಪ್ರಾರಂಭಿಸುತ್ತಾ[illegible] ಮತ್ತೊಂದು ಕಡೆ ಆಧುನಿಕವಾದಿ ಮಗಳೂ ಸಹಾ ತನ್ನ ತಾಯಿ ತನ್ನದೇ ವಯಸ್ಸಿ[illegible] ಪರ ಪುರುಷನ ಜೊತೆ ಮಲಗುವುದನ್ನು ವಿರೋಧಿಸಿ ಸಂಪ್ರದಾಯದಲ್ಲಿ ಎಂದೆ[illegible] ದಿಗೂ ನಂಬಿಕೆ ಇಲ್ಲದಿದ್ದರೂ ಉದ್ದೇಶ[illegible] ಪೂರ್ವಕವಾಗಿ ತಂದೆಯ ತಿಥಿ ಮಾಡಿ[illegible] ಅಮ್ಮನಿಗೆ ನೋವು ಕೊಡುತ್ತಾಳೆ.

ಹೀಗೆ ಸಂಪ್ರದಾಯ ಮತ್ತು ಆಧುನಿಕತೆ ಎರಡೂ ಸಹಾ ಹೇಗೆ ಒಬ್ಬ ಮಹಿಳೆಯ ಸ್ವಾತಂತ್ರ್ಯದ ಹಕ್ಕನ್ನು ಹರಣ ಮಾಡುತ್ತವೆ ಎಂದು ಕಾಸರವಳ್ಳಿ ಹೇಳಿಸುತ್ತಾರೆ. ನಂತರದಲ್ಲಿ ಇಷ್ಟೆಲ್ಲಾ ವಿರೋಧದ ನಡುವೆಯೂ ವೆಂಕಟಲಕ್ಷ್ಮಿ ತನ್ನ ನಿರ್ಣಯವನ್ನು ಅಸರ್ಟ್ ಮಾಡಿಕೊಳ್ಳುತ್ತಾಳೆ ಮತ್ತು ಅದರಿಂದ ಬರುವ ಎಲ್ಲಾ ಕಷ್ಟ ನಷ್ಟಗಳನ್ನು ಏಕಾಂಗಿಯಾಗಿ ಎದುರಿಸುತ್ತಾಳೆ. ಅಂತಿಮವಾಗಿ ಮಗಳು ನಿಜಕ್ಕೂ ಆ ಪುರುಷ ತನ್ನ ಸತ್ತುಹೋದ ಗಂಡನೆಂದು ನಂಬುತ್ತೇನೆಯೇ, ಆತ ತನ್ನ ಗಂಡನಿರಲಾರ ಎಂಬ ಅನುಮಾನವೇ ಬರಲಿಲ್ಲವೇ ಎಂದು ಕೇಳಿದಾಗ ವೆಂಕಟಲಕ್ಷ್ಮಿ ಅತ್ಯಂತ ತಣ್ಣಗೆ ಅನುಮಾನ ಬರಲು ಮೊದಲು ನಂಬಿಕೆ ಇದ್ದಿರಬೇಕಲ್ಲವಾ ಎಂದು ಪ್ರಶ್ನಿಸುತ್ತಾಳೆ. ಅಂದರೆ ತನಗೆ ಆತ ತನ್ನ ಗಂಡನಲ್ಲವೆಂದು ಗೊತ್ತಿದ್ದರೂ ಆತನ ಜೊತೆ ಸಂಸಾರ



ಮಾಡಿದೆನೆಂಬ ಸತ್ಯವನ್ನು ಹೇಳುತ್ತಾಳೆ. ಹೀಗೆ ಈ ಚಿತ್ರದ ಯುವ ವಿಧವೆ ಒಬ್ಬಳು ತನ್ನದೇ ನೆಲೆಯಲ್ಲಿ ಸಂಪ್ರದಾಯವನ್ನು ಬುಡಮೇಲು ಮಾಡುವ ಸ್ತ್ರೀವಾದಿ ಸ್ವಾತಂತ್ರ್ಯದ ಕಥನವಾಗಿ ಮಾರ್ಪಾಡಾಗುತ್ತದೆ.


ಇದೇ ಕಾಸರವಳ್ಳಿಯವರ ಚಿತ್ರದ ಅಂತಿಮ ಶಾಟ್ ಮತ್ತು ಚಿತ್ರದ ಆತ್ಮ. ಆದರೆ ಅದೇ ಅತ್ಯಂತ ಪೇಲವವಾಗಿ ಬಂದಿರುವುದು ಚಿತ್ರದ ಒಟ್ಟಾರೆ ಮಿತಿಯನ್ನು ಎತ್ತಿ ಹಿಡಿಯುತ್ತದೆ. ಇಡೀ ಚಿತ್ರ ಈ ಅಂತಿಮ ಹೇಳಿಕೆಯನ್ನು ಮಾಡಲು ಧಾವಿಸಿದಂತೆ ಕಾಣುತ್ತದೆ. ಇಡೀ ಚಿತ್ರದಲ್ಲಿ ವೆಂಕಟಲಕ್ಷ್ಮಿಯ ಮಾವನ ಪಾತ್ರವೊಂದನ್ನು ಬಿಟ್ಟರೆ ಯಾವ ಪಾತ್ರಗಳೂ ಅಥೆಂಟಿಕ್ ಎನ್ನಿಸುವುದಿಲ್ಲ.

ಸಣ್ಣ ಹುಡುಗರಾಗಿದ್ದಾಗ ತಲೆ ಮೇಲೆ ಪಾತ್ರೆಗಳ ಗಂಟು ಹೊತ್ತುಕೊಂಡು ಅರ್ಧ ಬಾಗಿದ ಬೆನ್ನಿನ ಬಿಳಿಗಡ್ಡದ ಅಜ್ಜ ಬರುತ್ತಿದ್ದುದು ಇನ್ನೂ ಕಣ್ಣಮುಂದೆ ನಡೆದ ಹಾಗಿದೆ. ಅಜ್ಜನ ಜೊತೆಗೊಬ್ಬ ನಮ್ಮದೇ ಪ್ರಾಯದ ಪುಟ್ಟ ಹುಡುಗ ಒಂದೆರಡು ಪಾತ್ರೆಗಳನ್ನು ಹೊತ್ತು ತರುತ್ತಿದ್ದ. ಅಜ್ಜನ ಹೆಸರೇನೆಂದು ನಮಗಂತೂ ಗೊತ್ತಿರಲಿಲ್ಲ, ಉಳಿದವರಿಗೂ ತಿಳಿದಿತ್ತೋ ಇಲ್ಲವೋ, ನಮಗಂತೂ ತಿಳಿಯುವ ಜರೂರತ್ತು ಇರಲಿಲ್ಲ. ಎಲ್ಲರೂ ಅವನನ್ನು ಕರೆಯುತ್ತಿದ್ದುದು 'ಕಲಾಯಿ ಬ್ಯಾರಿ'ಯೆಂದು. ಹಿತ್ತಾಳೆಯ ಪಾತ್ರೆಗಳಿಗೆ ತವರದ ಕಲಾಯಿ ಹಾಕಿ ಕೊಡುತ್ತಿದ್ದ ಅಜ್ಜ ನದಿಯ ಪಕ್ಕದಲ್ಲಿ ಪುಟ್ಟ ಗುಡಿಸಲು ಹಾಕಿಕೊಂಡಿದ್ದ. ಆ ತಾತ್ಕಾಲಿಕ ಗುಡಿಸಲಿನಲ್ಲಿ ದಿನವಿಡೀ ಪಾತ್ರೆಗಳ ಸದ್ದು. ನೆಗ್ಗಿ ಹೋದ ಪಾತ್ರೆಗಳು ಹೊಸ ಮದುವಣಗಿತ್ತಿಯರ ಹಾಗೆ ಹೊಸರೂಪ ಪಡೆದು ಮತ್ತೆ ಅವುಗಳ ಯಜಮಾನರ ಕೈ ಸೇರುತ್ತಿದ್ದವು. ಹಳೆಯ ಪಾತ್ರೆಗಳನ್ನು ಸಂಗ್ರಹಿಸಿ ಕಲಾಯಿ ಹಾಕಿ ಮತ್ತೆ ಮನೆಮನೆಗಳಿಗೆ ತಲುಪಿಸಿ ತೆಂಗಿನಕಾಯಿ ಅಕ್ಕಿ, ಬತ್ತ ಹೀಗೆ ಕೊಟ್ಟದ್ದನ್ನು ಸಂಗ್ರಹಿಸಿ ಮಳೆ ಹನಿ ಬೀಳುವ ಹೊತ್ತಿಗೆ ಜಾಗ ಖಾಲಿ ಮಾಡುತ್ತಿದ್ದ ಈ ಅಜ್ಜ ನಾಲ್ಕೈದು ತಿಂಗಳು ನಮ್ಮೂರಿನ ಭಾಗವೇ ಆಗಿರುತ್ತಿದ್ದ. ಎಲ್ಲ ಮನೆಗಳ ಸುಖ ದುಃಖಗಳಿಗೆ ಕಿವಿಯಾಗುತ್ತಿದ್ದ. ಅಗತ್ಯವಿದ್ದಾಗ ಅಷ್ಟೋ ಇಷ್ಟೋ ಸಹಾಯವೂ ಮಾಡುತ್ತಿದ್ದ. ಈ ಕಲಾಯಿ ಅಜ್ಜ ನಾವು ಹೈಸ್ಕೂಲು ಮೆಟ್ಟಲು ಹತ್ತುವ ಹೊತ್ತಿಗಾಗಲೇ ಇತಿಹಾಸದ ಪುಟ ಸೇರಿಯಾಗಿತ್ತು. ಸ್ಟೀಲ್‌ನ ಪಾತ್ರೆಗಳು ಹಿತ್ತಾಳೆಯ ಸ್ಥಾನವನ್ನು ಅಲಂಕರಿಸಿದ್ದವು.

ಮಳೆ ನಿಂತು ಚಳಿ ಇಣುಕುವಾಗ, ಕಾರ್ತಿಕದ ಅಮವಾಸ್ಯೆ ಕಳೆಯುತ್ತಿದ್ದ ಹಾಗೆ ಇನ್ನೊಬ್ಬ ಅಜ್ಜ ತನ್ನ ಸರಂಜಾಮುಗಳೊಡನೆ ಪ್ರತ್ಯಕ್ಷವಾಗುತ್ತಿದ್ದ. ಊರ ಹೊರಗಿದ್ದ ಮೈದಾನದಂಥ ಪ್ರದೇಶದಲ್ಲಿ ಸಣ್ಣ ಗುಡಿಸಲು ಹಾಕಿಕೊಂಡು ಮಣ್ಣಿನ ಒಂದೂವರೆ ಆಳೆತ್ತರದ ಗೂಡು ನಿರ್ಮಿಸಿ ಹೊಗೆಯೆಬ್ಬಿಸುತ್ತಿದ್ದ. ಮಂಗಳೂರಿನಿಂದ ಹಾಡಿಗಳಲ್ಲಿ ಬರುತ್ತಿದ್ದ ಕಪ್ಪೆಚಿಪ್ಪುಗಳನ್ನು ಕಟ್ಟಿಗೆಯ ತುಂಡಿನೊಂದಿಗೆ ಗೂಡಿನಲ್ಲಿ ತುಂಬಿಸಿ ಬೆಂಕಿ ಉರಿಸಿ ಸುಣ್ಣ ತಯಾರಿಸುತ್ತಿದ್ದ. ಈ ಸುಣ್ಣದ ಬ್ಯಾರಿ ಆ ಪ್ರದೇಶದಲ್ಲಿ ಅಡಿಕೆಯ ಕೊಳೆರೋಗಕ್ಕೆ ಸಿಂಪಡಿಸುವ ಬೋರ್ಡೋ ದ್ರಾವಣಕ್ಕೆ ಬೇಕಾದ ಸುಣ್ಣ ಒದಗಿಸುತ್ತಿದ್ದ. ಅಪ್ಪನ ಎತ್ತಿನ ಗಾಡಿಯನ್ನು ಸುಣ್ಣ ಸಾಗಾಟಕ್ಕೆ ಬಳಸುತ್ತಿದ್ದುದರಿಂದ ಸುಣ್ಣದ ಬ್ಯಾರಿ ನಮಗೆ ಹೆಚ್ಚು ಪರಿಚಿತನಾಗಿದ್ದ. ನಂತರ ಪ್ಲಾಸ್ಟಿಕ್ ಪ್ಯಾಕೆಟ್‌ಗಳಲ್ಲಿ ಸುಣ್ಣ ಬರಲಾರಂಭಿಸಿದ ಮೇಲೆ ಅಜ್ಜನ ತಗಡಿನ ಡಬ್ಬಿಯ ಸುಣ್ಣ ಮರೆಯಾಯಿತು. ಸುಣ್ಣದ ಗೂಡೂ ಕೂಡಾ. ಈಗಲೂ ಅಜ್ಜನ ಗುಡಿಸಲಿದ್ದ ಜಾಗವನ್ನು ಸುಣ್ಣದ ಗೂಡು ಅಂತ ಗುರುತಿಸುವವರಿದ್ದಾರೆ.

ಅವನೊಟ್ಟಿಗೆ ಇನ್ನೊಬ್ಬ ಅಜ್ಜ ಬರುತ್ತಿದ್ದ. ಸುಗ್ಗಿಯ ಕೊಳಿಮೆ ಮುಗಿದ ಹಾಗೆ ಊರಿಗೆ ಚರ್ಮದ ದೊಡ್ಡ ಚೀಲದೊಂದಿಗೆ ಬರುತ್ತಿದ್ದವ ಲಾಳದ ಬ್ಯಾರಿ. ಎತ್ತುಗಳ ಸೊಂಟಕ್ಕೆ ಹಗ್ಗ ಹಾಕಿ ಬೀಳಿಸಿ ಕಾಲಿಗೆ ಲಾಳ ಹೊಡೆದು ಕೊಟ್ಟು ಹೊರಟುಬಿಡುತ್ತಿದ್ದ ಆತ ಅಷ್ಟೇನು ಪರಿಚಿತನಲ್ಲ. ಈಗ ಊರಿನಲ್ಲಿ ಎತ್ತಿನ ಗಾಡಿಗಳೂ ಇಲ್ಲ. ಲಾಳದ ಬ್ಯಾರಿಯೂ ಇಲ್ಲ.

ಶಿವರಾತ್ರಿ ಕಳೆದು ಚಳಿ ಕಡಿಮೆಯಾಗುತ್ತಿದ್ದ ಹಾಗೆ ಮೀನಿನ ಬುಟ್ಟಿ ಹೊತ್ತುಕೊಂಡು ಇನ್ನೊಬ್ಬ ಅಜ್ಜ ಕಾಣಿಸಿಕೊಳ್ಳುತ್ತಿದ್ದ. ಬುಟ್ಟಿ ತುಂಬಾ ಒಣಮೀನು ತುಂಬಿಕೊಂಡು ಮೈಲು ದೂರದಿಂದಲೇ ತಾನು ಬರುತ್ತಿದ್ದೇನೆ ಎನ್ನುವುದನ್ನು ವಾಸನೆಯಿಂದಲೇ ಸಾರುತ್ತಿದ್ದ. ಅಂಗಳ ಹತ್ತುತ್ತಿದ್ದ ಹಾಗೆ ನಂಗ್, ತೂರಕ್ಕೆ ಬಾರಿ ಅಗ್ಗ ಅಂತ ನಾಯಿಗಳೊಂದಿಗೆ ಸ್ಪರ್ಧೆಗೆ ಬಿದ್ದವನ



ತೆರೆಬಿದ್ದರೂ ರಂಗ ಬಿಡದವರು.....

ಯಾವ ಪಾತ್ರಗಳು ಚಿತ್ರಕಥೆಯ ಸಾದಯವ ಸಂಬಂಧದೊಂದಿಗೆ ವಿಕಸನಗೊಳ್ಳುತ್ತವೆ ಎನಿಸುವುದಿಲ್ಲ. ಬದಲಿಗೆ ಪೂರ್ವ ನಿರ್ಧಾರಿತವಾದ ಹೇಳಿಕೆಯತ್ತ ಧಾವಿಸುತ್ತವೆ ಎಂದೆನಿಸು ತ್ತವೆ. ಮೂಲಕಥೆಯಲ್ಲಿ ಇದ್ದ ವೆಂಕಟಲಕ್ಷ್ಮಿಯ ಮಗನ ಪಾತ್ರವನ್ನು ಬದಲಾಯಿಸಿ ಮಗಳ ಪಾತ್ರವನ್ನಾಗಿ ಮಾಡಲಾಗಿದೆ. ಅದನ್ನು ಕಾಸರವಳ್ಳಿಯವರ ಮಗಳೆ ಚತುರ ಅಭಿನಯದಿಂದ ನಿರ್ವಹಿಸಿದ್ದಾರೆ. ಆದರೆ ಸ್ವಾತಂತ್ರ್ಯ ಪೂರ್ವದ ಆ ಕಾಲದಲ್ಲಿ ಮಲೆನಾಡಿನ ಕುಗ್ರಾಮದಿಂದ ಪಟ್ಟಣಕ್ಕೆ ಒಬ್ಬ ಹೆಣ್ಣು ಮಗಳು ಹೋಗುವುದು ಕಥೆಯ ಕಾಲವಿವರಗಳಿಗೆ ಹೊಂದುವುದಿಲ್ಲ. ಪವಿತ್ರ ಲೋಕೇಶರ ಭಾವಾಭಿನಯ ಚೆನ್ನಾಗಿದ್ದರೂ ಹಲವು ಕಡೆ ಕೃತಕ ಅನ್ನಿಸಿಬಿಡುತ್ತದೆ. ಆದರೆ ಶೃಂಗೇರಿ ರಾಮಣ್ಣರ ನಟನೆ ಎಲ್ಲಕ್ಕೂ ಮೀರಿದ ಅತ್ಯದ್ಭುತತೆಯಿಂದ ಮನಸೆಳೆಯು ತ್ತದೆ. ಕಾಸರವಳ್ಳಿಯವರಿಗೆ ಸಿದ್ಧಿಸಿರುವ ಚಿತ್ರ ಮಾಧ್ಯಮದ ತಾಂತ್ರಿಕ ಪರಿಣಿತಿ, ಸಂಕೇತಗಳ ಬಳಕೆ ಚಿತ್ರದ ಪ್ರತಿ ವಿವರಗಳಲ್ಲೂ ಇವೆ. ಆದರೂ ಒಂದು ವಿಪರ್ಯಾಸವೆಂದರೆ ಭೈರಪ್ಪ ತಮ್ಮ ಅತಿ ಪ್ರತಿಗಾಮಿ ಕಥೆಯನ್ನು ಕಥನ ಕುಸರಿಯಿಂದ ಹೇಳಿದಷ್ಟು ಪರಿಣಾಮಕಾರಿಯಾಗಿ ಅದರ ಈ ಫೆಮಿನಿಸ್ಟ್ ರೂಪಾಂತರ ಪರಿಣಾಮಕಾರಿಯಾಗಿ ಮೂಡುವುದಿಲ್ಲ. ಒಂದು ಪ್ರಬಲ ಫೆಮಿನಿಸ್ಟ್ ನರೇಟೀವ್ ಆಗಿ ಕಾಸರವಳ್ಳಿಯವರು ಈ ಕಥೆಯನ್ನು ಹೇಳಲು ಪ್ರಯತ್ನಿಸಿದ್ದಾರೆ ಎಂಬುದಂತೂ ಎದ್ದು ಕಾಣುತ್ತದೆ. ಆದರೆ ಚಿತ್ರ ನೋಡಿ ಹಲವು ಸಾರಿ ಮೆಲುಕು ಹಾಕಿದ ನಂತರವೂ ಅದರಲ್ಲಿ ಯಶಸ್ವಿಯಾದರು ಎಂದು ಹೇಳಲಾಗುತ್ತಿಲ್ಲ.

ಇದಕ್ಕೆ ಕೆಲವು ಕಾರಣಗಳಿವೆ ಎಂದೆನಿಸುತ್ತದೆ. ಭೈರಪ್ಪನವರ ಮೂಲಕಥೆಯೇ ತನ್ನ ಪ್ರತಿಯೊಂದು ವಿವರ ಮತ್ತು ಪಾತ್ರಗಳಲ್ಲಿ ಅದರ ಮೂಲಧಾತುವಾದ ಪುನರ್ಜನ್ಮ ಹಾಗೂ ಪಾಪಶೇಷ ನಿವೃತ್ತಿಯೊಂದಿಗೆ ಪ್ರತಿಗಾಮಿ ಬ್ರಾಹ್ಮಣ್ಯದ ಹರಹಿನಲ್ಲಿ ಎಷ್ಟು ಬೆರೆತು ಬಿಟ್ಟಿದೆ ಯೆಂದರೆ ಅದೇ ಎರಕವನ್ನಿಟ್ಟುಕೊಂಡು ಅದರಲ್ಲಿ ಅಥೆಂಟಿಕ್ ಫೆಮಿನಿಸ್ಟ್ ಧ್ವನಿಯನ್ನು ಹೊಮ್ಮಿಸುವುದು ಕಾಸರವಳ್ಳಿಯಂತಹವರಿಗೂ ಕಷ್ಟವಾಗಿದೆ. ಹಾಗಿದ್ದಲ್ಲಿ ಭೈರಪ್ಪನವರ ಕಥೆಯನ್ನೇ ಏಕೆ ತೆಗೆದುಕೊಳ್ಳಬೇಕಿತ್ತು ಎಂಬ ಪ್ರಶ್ನೆ ಹುಟ್ಟಿಕೊಂಡರೆ ಅದು ಯಾರ ಅಭಿವ್ಯಕ್ತಿ ಸ್ವಾತಂತ್ರ್ಯದ ಹರಣದ ಪ್ರಶ್ನೆಯೂ ಅಲ್ಲ ಎಂದು ಅರ್ಥವಾದರೆ ಸಾಕು.

ಭೈರಪ್ಪನವರ ಇತರ ಕಾದಂಬರಿಗಳನ್ನು ಸಿನಿಮಾ ಮಾಡಿದ ಗಿರೀಶ್ ಕಾರ್ನಾಡರು ಇತ್ತೀಚೆಗೆ ಭೈರಪ್ಪನವರು ಟಿಪ್ಪುವಿನ ಮೇಲೆ ಹಾಗೂ ತಮ್ಮ ಮೇಲೆ ಮಾಡಿದ ದಾಳಿಗೆ ಉತ್ತರಿಸುತ್ತಾ.... "ಭೈರಪ್ಪನವರ ಅನುಭವ ಸಾಮಗ್ರಿಯಿಂದ ಅವರ ತತ್ವ ಪ್ರಣಾಲಿಯನ್ನು ಬೇರ್ಪಡಿಸುವ ಹೆಡ್ಡತನಕ್ಕೆ ನಾನು ಒಪ್ಪಬಾರದಾಗಿತ್ತು. ಆ ಮೂಲ ದರ್ಶನದಲ್ಲೇ ನನಗೆ ನಂಬಿಕೆ ಇರಲಿಲ್ಲವಾದ್ದರಿಂದ ನನ್ನ ಕೃತಿಯಲ್ಲಿ 'ವಂಶವೃಕ್ಷ' ಮತ್ತು 'ತಬ್ಬಲಿಯು ನೀನಾದೆ ಮಗನೆ' ಅತ್ಯಂತ ದುರ್ಬಲ ಕೃತಿಗಳಾಗಿವೆ" ಎಂದು ಪಶ್ಚಾತ್ತಾಪ ಪಟ್ಟಿದ್ದಾರೆ. ಒಬ್ಬರು ಮಾಡಿದ ತಪ್ಪು ಮತ್ತೊಬ್ಬರಿಗೆ ಎಚ್ಚರಿಕೆಯ ಪಾಠವಾಗದಿದ್ದರೆ ಹೇಗೆ?

-ಶಿವಸುಂದರ್

ಹಾಗೆ ಕಿರುಚುತ್ತಿದ್ದ. ಕೈಯಲ್ಲಿ ಹಿಡಿದ ಬೆತ್ತದಿಂದ ನಾಯಿಗಳಿಗೆ ತೂ ತೂ ಅನ್ನುತ್ತಾ ನಾಯಿಗಳು ಮುಟ್ಟದ ಹಾಗೆ ಜಾಗೃತೆ ವಹಿಸುತ್ತಿದ್ದ. ಅಜ್ಜಿ ಹೇಳುತ್ತಿದ್ದಳು ಬ್ಯಾರಿಯನ್ನು ನಾಯಿ ಮುಟ್ಟಿದರೆ ಅವನ ಜಾತಿ ಹೋಗುತ್ತದಂತೆ ಅಂತ. ನಾವೂ ಅದನ್ನು ಸತ್ಯವೆಂದು ನಂಬಿದ್ದೆವು. ಆದಕ್ಕೆ ಸರಿಯಾಗಿ ಆತ ನಾಯಿಯಿಂದ ಮುಟ್ಟಿಸಿಕೊಂಡದ್ದನ್ನು ನಾವೆಂದೂ ನೋಡಿಲ್ಲ. ಅಜ್ಜನ ನಂತರ ಅವನ ಮಗನೂ ಬರುತ್ತಿದ್ದ. ಮೀನು ಮಾರಿ, ಅಡಿಕೆ, ಗೇರು ಬೀಜ, ತೆಂಗಿನಕಾಯಿ ತೆಗೆದುಕೊಂಡು ಹೋಗುತ್ತಿದ್ದ. ರಾಮನ ರಥ, ಇಟ್ಟಿಗೆ ಊರಿಗೆ ಬರುವವರೆಗೆ ಪ್ರತಿವಾರ ಬರುತ್ತಿದ್ದ. ಊರಿನ ಒಂದು ಭಾಗವೇ ಆಗಿದ್ದ ಮೀನಿನ ಬ್ಯಾರಿ ಸದ್ದಿಲ್ಲದೆ ಮರೆಯಾಗಿದ್ದ.

ಈಗ ರಸ್ತೆ ಅಗಲವಾಗಿದೆ. ಐದೈದು ನಿಮಿಷಕ್ಕೂ ಬಸ್ಸು ಜೀಪುಗಳು ಓಡಾಡುತ್ತವೆ. ಪೇಟೆ ಹತ್ತಿರವಾಗಿದೆ. ಬಾರದ ಈ ಬ್ಯಾರಿಗಳು ಮರೆತು ಹೋಗಿದ್ದಾರೆ. ಇವರೆಲ್ಲ ನಮ್ಮ ಪುಟ್ಟ ಊರಿನ ಅವಿಭಾಜ್ಯ ಅಂಗಗಳಾಗಿದ್ದರು. ಇವರಿಲ್ಲದೇ ವರ್ಷದ ಬದುಕು ಪೂರ್ಣವಾಗುತ್ತಿರಲಿಲ್ಲ. ಊರಿನ ಮನೆಮನೆಯ ನೋವು ನಲಿವು ಅವರಿಗೆ ತಿಳಿದಿತ್ತು. ಮದುವೆ ದಲ್ಲಾಳಿಗಳಾಗಿಯೂ ಇವರು ನಡೆದುಕೊಂಡದ್ದುಂಟು. ತೂಕದಲ್ಲಿ ಒಂದಷ್ಟು ಮೋಸ ಇದ್ದರೂ ಮಾನವೀಯ ಸಹಕಾರಕ್ಕೆ ಕೊರತೆಯಿರಲಿಲ್ಲ. ಈಗ ಈ ಜನ ನೆನಪಾಗಿ ಉಳಿದಿದ್ದಾರೆ. ಅದರೊಂದಿಗೆ ಜಾತಿ, ಮತ, ನಂಬಿಕೆಗಳನ್ನು ಮೀರಿ ನಿಂತಿದ್ದ ಒಂದು ಬಾಂಧವ್ಯ ಕೂಡಾ!

-ಜಿತು ನಿಡ್ಲೆ

ತನನಂ ತನನಂ



ತೇಲಿ ಬಂದ ದಾರಿ 10 ಕವಿತಾ ಲಂಕೇಶ್

ನಮ್ಮ 'ತನನಂ ತನನಂ' ಆಡಿಯೋ ಕ್ಯಾಸೆಟ್ಟು ಮಾರುಕಟ್ಟೆಗೆ ಬಂದಾಯ್ತು! ಮಾರುಕಟ್ಟೆಗೆ ಬರುವ ಮುನ್ನವೇ ಅದರ ಇಂಪಿಗೆ ಒಲಿದು ಸುಗಂಧ ಅದರೆಡೆಗೆ ಹರಿದು ಬಂದಿದೆ. ಅಂತರರಾಷ್ಟ್ರೀಯ ಮೈಸೂರ್ ಸೋಪ್ಸ್ ತಯಾರಕರಾದ ಮೈಸೂರು ಸೋಪ್ಸ್ ಅಂಡ್ ಡಿಟರ್ಜೆಂಟ್ಸ್‌ನವರು ಈಗಾಗಲೇ ಒಂದು ಲಕ್ಷ ಆಡಿಯೋ ಕ್ಯಾಸೆಟ್ ಖರೀದಿಸಿಬಿಟ್ಟಿದ್ದಾರೆ! ನೀವೆಲ್ಲೇ ಮೂರು ಮೈಸೂರ್ ಸೋಪ್ ಕೊಂಡರೂ ಒಂದು 'ತನನಂ ತನನಂ' ಆಡಿಯೋ ಕ್ಯಾಸೆಟ್ ಫ್ರೀ! ಹಾಗೆಯೇ ಈಗಾಗಲೇ 25 ಸಾವಿರದಷ್ಟು ಹರ್ಬಲ್ ಕೇರ್ ಸೋಪ್‌ಗಳನ್ನು ಅಶ್ವಿನಿ ಆಡಿಯೋ ಕಂಪನಿಗೆ ಕೊಟ್ಟಿದ್ದಾರೆ ಮೈಸೂರ್ ಸೋಪ್ಸ್‌ನವರು. ಅಂದರೆ ನೀವು ಒಂದು 'ತನನಂ ತನನಂ' ಕ್ಯಾಸೆಟ್ ಅಥವಾ CD ತೆಗೆದುಕೊಂಡರೆ, ಒಂದು ಸೋಪ್ ಫ್ರೀ! ಇಂಪಾದ ಸಂಗೀತದ ಜೊತೆ ಸುಗಂಧದ ಲಹರಿ!

ಇದು 'ತನನಂ ತನನಂ'ನ ನಾಡ ಸಂಸ್ಕೃತಿ ಬಿಂಬಿಸುವ ಯುವ ಪ್ರೇಮಿಗಳ ಕತೆಯ ದೃಶ್ಯಕಾವ್ಯಕ್ಕೆ ಮೈಸೂರ್ ಸೋಪ್ಸ್ ಒಲಿದು ಬಂದ ಬಗೆ. ಇತ್ತೀಚೆಗೆ ಕಾರ್ಪೊರೇಟ್ ಸಂಸ್ಥೆಗಳು ಕನ್ನಡ ಚಿತ್ರಗಳ ಜೊತೆ ಟೈ ಅಪ್ ಮಾಡಿಕೊಳ್ಳುತ್ತಿರುವುದು ಒಳ್ಳೆ ಬೆಳವಣಿಗೆ. ಅವರ ಪ್ರಾಡೆಕ್ಟ್‌ಗಳಿಗೆ ಪ್ರಚಾರ ಸಿಕ್ಕಂತೆಯೂ ಆಗುತ್ತೆ... ಸಿನಿಮಾದವರಿಗೊಂದಿಷ್ಟು ಪ್ರಚಾರವೂ ದೊರೆತಂತೂ ಆಗುತ್ತೆ.... ಆದರೆ ನನ್ನ ಪ್ರಕಾರ ಪ್ರಾಡೆಕ್ಟುಗಳನ್ನು ಚಿತ್ರದಲ್ಲಿ ತೋರಿಸುವಾಗ ನಿರ್ದೇಶಕ ಸೂಕ್ಷ್ಮತೆಯಿಂದ ತನ್ನ ಕೌಶಲ್ಯ ಪ್ರದರ್ಶಿಸಬೇಕು... ಪ್ರಾಡೆಕ್ಟುಗಳ ಜಾಹೀರಾತು ನೀಡಿದಂತಾಗಬಾರದು... 'ಬಾಗ್‌ಬಾನ್'ನಲ್ಲಿ ಮೇಲಿಂದ ಮೇಲೆ ಹೇಮಾಮಾಲಿನಿ ಟಾಟಾ ಟೀ ಪ್ಯಾಕೇಟ್ ಕತ್ತರಿಸಿ ಟೀ ರೆಡಿ ಮಾಡಿ ಅಮಿತಾಭ್‌ಗೆ ಕೊಡುವುದು ಚಿತ್ರದ ಓಟಕ್ಕೆ disturb ಮಾಡಿದಂತೆ ಕಾಣುತ್ತೆ ಅಲ್ವಾ? ವಿಚಿತ್ರ ನೋಡಿ, ಆ ಚಿತ್ರ ಬಿಡುಗಡೆಯಾದ ಮೇಲೆ ಟಾಟಾ ಟೀ ಮಾರಾಟದಲ್ಲಿ ಶೇ. 20 ರಷ್ಟು ಹೆಚ್ಚಳ ವಾಯ್ತಂತೆ!

ಮೈಗೂ ತಂಪು... ಮನಕೂ ತಂಪು....

ನಿರ್ಮಾಪಕ ಸುರೇಶ್ ಒಂದಿನ ಅನೀಸ್ ಮೊರಾಬ್ ಎನ್ನುವವರನ್ನು ಕರೆದುಕೊಂಡು ಬಂದರು. ಅನೀಸ್ ಈ ಮೊದಲು ಚಂದ್ರಿಕಾ, ಇಂಪೀರಿಯಲ್ ಬ್ಲೂ ಕಂಪನಿಗಳನ್ನು ಕನ್ನಡ ಸಿನಿಮಾಗಳೊಂದಿಗೆ ಬೆಸೆದ ಆ್ಯಡ್ ಮ್ಯಾನೇಜರ್. ಅವರು ಕರ್ನಾಟಕ ಸೋಪ್ಸ್ ಆಂಡ್ ಡಿಟರ್ಜಂಟ್ಸ್ ನಮ್ಮ 'ತನನಂ ತನನಂ' ಬಗ್ಗೆ ಆಸಕ್ತಿ ತಾಳಿರುವ ವಿಷಯ ಹೇಳಿ, ಆ ಇಲಾಖೆಯ ಅಧಿಕಾರಿಗಳನ್ನು ಭೇಟಿ ಮಾಡಿಸಿದರು. 'ತನನಂ ತನನಂ'ನ ಹಾಡು, ಚಿತ್ರಕತೆ, ಲವ್‌ಸ್ಟೋರಿಗೆ ಮಾರುಹೋದ ಅಧಿಕಾರಿಗಳು ತಾವು ಈ ಚಿತ್ರದ ಪ್ರಚಾರಕ್ಕೆ ಟೈ ಅಪ್ ಮಾಡಿಕೊಳ್ಳಲು ಒಪ್ಪಿ ಇಲಾಖೆಯ ನಿರ್ದೇಶಕ ಪೆರುಮಾಳ್‌ರನ್ನು ಭೇಟಿ ಮಾಡಿಸಿದರು... ಪೆರುಮಾಳ್‌ರಂತೂ "ಈ ಚಿತ್ರದ theme ನಮ್ಮ ಸುಗಂಧದ ಪ್ರಾಡೆಕ್ಟ್‌ಗಳಿಗೆ ಪರ್‌ಫೆಕ್ಟ್ ಮ್ಯಾಚ್" ಎಂದು ಖುಷಿಗೊಂಡರು. ಅವತ್ತೇ ಗೊತ್ತಾಗಿದ್ದು ಪೆರುಮಾಳ್ ಅಪ್ಪನಿಗೆ ಸ್ನೇಹಿತರಾಗಿದ್ದವರು, ಸಾಹಿತ್ಯದಲ್ಲಿ ಆಸಕ್ತಿ ಉಳ್ಳವರು ಎಂಬುದು.... ಆದರೆ ಅಪ್ಪ ಎಂತಹ ದೈತ್ಯ ನೋಡಿ! ಜಾಹೀರಾತುಗಳ ಹಂಗಿಲ್ಲದೇ ವಾರಪತ್ರಿಕೆ ಗೆಲ್ಲಿಸಿದ ಪ್ರತಿಭೆ ಅದು! ಇವತ್ತು ಖಾಸಗೀಕರಣದ ಅಬ್ಬರದಲ್ಲಿ ನಮ್ಮ ಬಹುತೇಕ ಪಬ್ಲಿಕ್ ಸೆಕ್ಟರ್ ಕಂಪನಿಗಳು ಲಾಸ್‌ನತ್ತ ಸಾಗುತ್ತಿರುವಾಗ, ಪೆರುಮಾಳ್ ಕರ್ನಾಟಕ ಸೋಪ್ಸ್ ಆಂಡ್ ಡಿಟರ್ಜಂಟ್ಸ್‌ನ್ನು ಲಾಭದತ್ತ ಒಯ್ಯುತ್ತಿರುವುದು ಖುಷಿಯ ವಿಷಯ.



ಈಗ ಸಿನಿಮಾ ಪ್ರಚಾರದ ವಿಷಯಕ್ಕೆ ಬರೋಣ.... ನಿರ್ಮಾಪಕ ಸುರೇಶ್ 'ಎಕ್ಸ್‌ಕ್ಯೂಸ್ ಮಿ' ಚಿತ್ರಕ್ಕೆ ಅಪಾರ ಹಣ ಖರ್ಚು ಮಾಡಿ ಪ್ರಚಾರ ಮಾಡಿದ್ದರು. ಚಿತ್ರವೂ ಸೂಪರ್ ಹಿಟ್ ಆಗಿತ್ತು. ನಂತರ ಅವರ 'ಪ್ರೀತಿಯ ರಾಮು' ಚಪ್ಪಾಳೆ ಹೊಡೆಯಲೇ ಇಲ್ಲ. ಪ್ರೇಕ್ಷಕನೂ ಕೈ ತಟ್ಟಲೇ ಇಲ್ಲ. ಆ ಎಲ್ಲ ಲಾಸ್ ನಡುವೆಯೂ ಇತರ ಬಿಸಿನೆಸ್‌ಗಳ ಲಾಭವನ್ನು ತಂದು 'ತನನಂ ತನನಂ'ಗೆ ಸುರಿದು ಖರ್ಚು ಮಾಡಿದ್ದಾರೆ ಸುರೇಶ್... ಮೊದಲು ಅವರು ನನ್ನನ್ನು approach ಮಾಡಿದಾಗ 'ಏನು, ಎಲ್ಲ ಮಳೆ ನಿಂತಾದ ಮೇಲೆ ಈ ಕಡೆ ಬಂದಿದ್ದೀರಾ?' ಎಂದು ಅವರನ್ನು ಕಿಚಾಯಿಸಿದ್ದೆ. ಕೆಲವೊಮ್ಮೆ ವಿಪರೀತ ಪ್ರಚಾರವೂ ಮುಳುವಾಗಬಹುದು. ಆಫ್‌ಬೀಟ್ ಚಿತ್ರವಾದ 'ದೇವೀರಿ'ಗೆ ನಾನು ಹೆಚ್ಚು ಪ್ರಚಾರ ಮಾಡಲಿಲ್ಲ. ಪತ್ರಕರ್ತರ ಮೆಚ್ಚುಗೆಯ ಬರಹ, ಪ್ರೇಕ್ಷಕರ ಪ್ರೋತ್ಸಾಹದಿಂದ ಆ ಲೊ ಬಜೆಟ್ ಚಿತ್ರ ಆರ್ಥಿಕವಾಗಿಯೂ ಹೊರೆ ಆಗಲಿಲ್ಲ. 'ಸೈನೈಡ್' ಚಿತ್ರವೂ ಪತ್ರಕರ್ತರ ಮೆಚ್ಚುಗೆಯಿಂದಲೇ ಗೆಲುವು ಕಂಡಿತಲ್ಲವೆ?

ನಿರ್ಮಾಪಕ ಸುರೇಶ್‌ಗೆ ಚಿತ್ರದ ಸ್ಟಿಲ್‌ಗಳಲ್ಲಿ ತಮ್ಮ ಫೋಟೋ ಹಾಕಿಕೊಳ್ಳುವ ಚಟ ಇರುವುದು ನಿಮಗೆ ಗೊತ್ತೇ ಇದೆ. ಮೊನ್ನೆ ಅವರು "ಸ್ಟಿಲ್‌ಗಳಲ್ಲಿ, ವಿನೈಲ್ ಹೋರ್ಡಿಂಗ್‌ಗಳಲ್ಲಿ ನಿಮ್ಮದೊಂದು ಫೋಟೋ ಇರಲಿ ಮೇಡಮ್" ಎಂದರು. ಆಗ ನಮ್ಮ ಮ್ಯಾನೇಜರ್ ರಾಜಶೇಖರ್ ಅವರು ಸುರೇಶ್‌ಗೆ "ಫೋಟೋ ಹಾಕಿದ್ರಿ ಅಂತಾ ಇಟ್ಕೊಳ್ಳಿ.... ಜನ 'ಇದೇನಿದು ಮೊನ್ನೆ ಮೊನ್ನೆ ಬೋಳಾಗಿದ್ದ ತಲೆಯಲ್ಲಿ ಎಷ್ಟೊಂದು ಕೂದಲು ಬೆಳೆದಿವೆ?' ಎಂದು ಗಾಬರಿ ಬೀಳ್ತಾರೆ ಬಿಡಿ" ಎಂದೆ... ಏಕೆಂದರೆ ನನ್ನ ತಮ್ಮ ಮತ್ತು ನಾನು ಒಂದೊಂದು ಆ್ಯಂಗಲ್‌ನಲ್ಲಿ ಒಂದೇ ತರಹ ಕಾಣ್ತೇವಲ್ಲ!

ನನಗೆ ನನ್ನ ಪ್ರಚಾರ ಬೇಕಿಲ್ಲ.... ನನ್ನ ಚಿತ್ರ ಪ್ರಚಾರವಾದರೆ ಸಾಕು. ಒಳ್ಳೆ ಪ್ರಾಡೆಕ್ಟ್ ಕೊಟ್ಟರೆ ಜನರೇ ನಮ್ಮನ್ನು ಗುರುತಿಸುತ್ತಾರೆ. ಸಂದರ್ಶನಗಳಲ್ಲೂ ಕ್ಯಾಮರಾಕ್ಕೆ ನೇರವಾಗಿ ಮುಖ ಕೊಟ್ಟು ಮಾತನಾಡಲು ಸಹ ನನಗೆ ಸಂಕೋಚ. ಹಾಗೊಮ್ಮೆ try ಮಾಡಿದರೂ, ಏನೇನೋ ಅಪಡ ತಪಡ ಆಗಿ ಬಿಡುತ್ತದೆ!

ಮನಕೆ ತಂಪು ಇಂಪು ನೀಡುವ 'ತನನಂ ತನನಂ' ಆಡಿಯೋ ಎಲ್ಲರ ಮೆಚ್ಚುಗೆ ಗಳಿಸುತ್ತಿದೆ... ಇನ್ನೇನು 'ತನನಂ ತನನಂ' ವಿನೈಲ್ ಹೋರ್ಡಿಂಗ್‌ಗಳು ಮಿಂಚಲಾರಂಭಿಸಿ ನಿಮ್ಮನ್ನೆಲ್ಲಾ ಆಕರ್ಷಿಸಲಿವೆ...

ನಿರೂಪಣೆ : ಪಿ.ಕೆ. ಮಲ್ಲನಗೌಡರ್

ಕಸ್ತೂರಿ ವಿಗ್ರಹ

-ರತ್ನ ಚಂದ್ರಶೇಖರ್



ಬೆಂಕಿಯಲಿ ಬೇಯುತ್ತಾ
ಬೆಳದಿಂಗಳ ಹುಡುಕುತ್ತಾ
ಮೀನು ಮಾರ್ಕೆಟ್ಟಿನಲ್ಲಿ
ಮಲ್ಲಿಗೆಯ ಕಂಪನ್ನು
ಅರಸುತ್ತಾ ಸಾಗಿರಲು
ಕಂಡವಾಗ ಆಸು ಪಾಸಿನಲಿ
ಬಟ್ಟ ಬಯಲಿನಲಿ
ಉರಿವ ಕಾರಂಜಿಯನು
ಗುಟುಕರಿಸುತ್ತಾ ಕುಳಿತಿದ್ದವು
ಮನುಕುಲದ ಸಂಕೇತಗಳು.

ಒಂದನೊಂದನು ಪರಚಿ, ಕಿರುಚಿ
ಅದ್ಭುತ ಶಬ್ದ
ಭಂಡಾರಗಳನ್ನುಗುಳುತ್ತಾ
ಉಚಿತವಾಗಿ ವಿರಚಿತಗಳ
ಸಾಲು, ಸಾಲುಗಳನ್ನುದುರಿಸುತ್ತಿದ್ದವು
ಕಸಿವಿಸಿಗೊಂಡ ಮನವು
ಆ ಕಸ್ತೂರಿ ವಿಗ್ರಹಗಳನ್ನು
ಅಚ್ಚರಿಯಿಂದಾ, ಬೆಚ್ಚಿ
ದಿಟ್ಟಿಸಿದಾಗ ಕಂಡವು
ಬಧಾಭಾರತದ ಬೆನ್ನೆಲುಬುಗಳು


ಶಂಕರಮೂರ್ತಿ: ಆಡಿದ್ದೇ ಆಡೋ ಕಿಸುಬಾಯಿದಾಸ

ನೀವು ಅಪರೂಪಕ್ಕೆ ಒಮ್ಮೆಯಾದರೂ ಸಿನಿಮಾ ನೋಡುವಂತಿದ್ದರೆ ಇದನ್ನು ಗಮನಿಸಿಯೇ ಇರುತ್ತೀರಿ. ಸುಮಾರು ಸಿನಿಮಾ ನೋಡುವವರಾಗಿದ್ದರೆ ಸರಿಯೇ ಸರಿ. ಅದು ಏನಪಾ ಅಂದರೆ... ನಾಯಕನನ್ನು ಸದೆಬಡಿಯೋಕೆ ಅಂತ ಖಳನಾಯಕ ಹಾಗೂ ಅವನ ಸಂಗಡಿಗರು ಅಟ್ಟಹಾಸದಿಂದ ಮೆರೆಯುತ್ತಾ ಬರುತ್ತಾರೆ. ನಾಯಕನನ್ನು ಮೂದಲಿಸುತ್ತಾರೆ. ಕಾಲು ಕೆರೆದು ಜಗಳಕ್ಕೆ ಎಳೆಯುತ್ತಾರೆ. ಇದರಿಂದ ಕುಪಿತಗೊಂಡ ನಾಯಕ ಹೊಡೆದಾಟಕ್ಕೆ ಸಿದ್ಧ ಆಗುತ್ತಾನೆ. ಸಿನಿಮಾ ಸೆಟ್ಟಿನಲ್ಲಿ ತರಕಾರಿ ಗಾಡಿ ಇರಬೇಕು. ಟೊಮ್ಯಾಟೋ ಗಾಡಿಯಂತೂ ಕಡ್ಡಾಯ. ವೈರಿಗಳು ಅವುಗಳ ಮೇಲೆ ಬಿದ್ದು ಮೂಳೆ ಮುರಿದುಕೊಳ್ಳಬೇಕಲ್ಲ ಅದಕ್ಕೆ. ಅದಲ್ಲ ವಿಷಯ. ಈ ನಾಯಕ ಆಗಿರೋನು ಹತ್ತು ಹದಿನೈದು ಮಂದಿಗೆ ಹೊಡೆದು ಬಿಸಾಕ್ತಾನೆ. ಆಮೇಲೆ ನಾಯಕ ಕೈ ಎತ್ತಿದರೆ ಸಾಕು, ಅವರೇನು ಮಾಡ್ತಾರೆ ಹೇಳಿ, ಮೀಸೆ ತಿರುವಿಕೊಂಡು ನಮ್ಮನ್ನ ಬಿಟ್ಟರೆ ಇನ್ನಿಲ್ಲ ಅಂತ ಬಂದವರು ಹೇಳದೇ ಕೇಳದೇ ಪರಾರಿಯಾಗ್ತಾರೆ.

ಇದನ್ನ ಯಾಕೆ ಇಲ್ಲಿ ಪ್ರಸ್ತಾಪಿಸಬೇಕಾಯಿತು ಅಂದರೆ ಉನ್ನತ ಶಿಕ್ಷಣ ಸಚಿವ ಶಂಕರಮೂರ್ತಿ ಕಂಪನಿಯ ಸ್ವಭಾವವೂ ತದ್ರೂಪು ಇದೇ: ಆಗಾಗ್ಗೆ ಟಿಪ್ಪು ಕುರಿತ ಅವಹೇಳನದ ಮಾತನ್ನು ಆಡದಿದ್ದರೆ, ಅದರ ಮೂಲಕ ಮುಸಲ್ಮಾನರ ಹೀಯಾಳಿಸದೇ ಇದ್ದರೆ ಅವರಿಗೆ ಉಂಡಿಟ್ಟು ಕರಗುವುದಿಲ್ಲ, ನಾಲ್ಕು ವರ್ಷಗಳ ಹಿಂದೆ ಇದೇ ಕೆಲಸ ಮಾಡಿದ್ದರು. 'ಟಿಪ್ಪು: ನಿಜಸ್ವರೂಪ' ಎನ್ನುವ ಪುಸ್ತಕ ಬಿಡುಗಡೆ ಮಾಡಿದ್ದ ಸಂದರ್ಭ ಅದು. ಮಾಮೂಲಿನಂತೆ ಸುಲ್ತಾನನ ಅವಹೇಳನ ಮಾಡಿದರು. ಅದನ್ನು ಪ್ರತಿಭಟಿಸಿದವರಿಗೆ 'ಏನೂ ಅರಿಯದವರು', 'ಹುಸಿ ಜಾತ್ಯತೀತವಾದಿಗಳು' ಪಟ್ಟ ಕಟ್ಟಿದರು. ಆಗ ವಿಧಾನ ಪರಿಷತ್ತಿನ ಸದಸ್ಯರಾಗಿದ್ದ ಗೋ. ಮಧುಸೂದನ ಅವರು ಮಂಡ್ಯದಲ್ಲಿ ಪತ್ರಿಕಾಗೋಷ್ಠಿ ನಡೆಸಿದರು. ಟಿಪ್ಪು ಬಗ್ಗೆ ಸರಿಯಾದ ಕಲ್ಪನೆ ಬರಬೇಕಾದರೆ ಈ ಪುಸ್ತಕ ಓದಿ ಎಂದು ಬುದ್ಧಿ ಮಾತು ಹೇಳಿದರು. ನನ್ನ ಬಳಿ ಹಣ ಇಲ್ಲ ಎಂದೋ ಏನೋ, ನನಗೂ ಪುಸ್ತಕವನ್ನು ಕಳುಹಿಸಿಕೊಡುವುದಾಗಿ ಪ್ರಚುರಪಡಿಸಿದರು. ಪುಸ್ತಕ ಕಳುಹಿಸಲಿಲ್ಲ! ಮುಂದಿನ ಚುನಾವಣೆಯಲ್ಲಿ ಮತದಾರರು ಮಧುಸೂದನ್ ಗೋ ಅಂದರು! ಅದು ಹಾಗಿರಲಿ, ಆಗ ನಾವು ಅವರಿಗೆ ಟಿಪ್ಪು ಕುರಿತು ಚರ್ಚೆ ಆಗಲಿ ಎಂಬ ಸಂದೇಶ ನೀಡಿದೆವು. ಮೀಸೆ ತಿರುವಿ ಆಗಲಿ ಎಂದರು. ನಾಲ್ಕು ವರ್ಷ ಕಳೆಯಿತು. ಚರ್ಚೆಗೇ ಬರಲಿಲ್ಲ!

ಈಗ ಶಂಕರಮೂರ್ತಿ ಚರ್ಚೆ ಆಗಲಿ ಎಂದಿದ್ದಕ್ಕೆ ಗಿರೀಶ್ ಕಾರ್ನಾಡ್ ನಾವು ಚರ್ಚೆಗೆ ಸಿದ್ಧ ಎಂದಿದ್ದಾರೆ. ಚರ್ಚೆಗೆ ಬರಬೇಕು ತಾನೆ. ಚರ್ಚೆಗೆ ಬರಲ್ಲ, ಯಾಕೆ ಅಂದರೆ ಅವರ ಬಳಿ ಯಾವುದೇ ಅಧಿಕೃತ ದಾಖಲೆಗಳಿಲ್ಲ! 'ಯಾಕೆ ಒಲ್ಲೆ ಮಲ್ಲಿ ಅಂದರೆ ಇಲ್ಲದ್ದಕ್ಕೆ ಒಲ್ಲೆ' ಅಂದ ಹಾಗೆ. ಅವರೇನು ಮಾಡುತ್ತಾರೆ ಈಗ ಅಂದರೆ 'ಯಾರಿಗಾದರೂ ನೋವಾಗಿದ್ದರೆ ಕ್ಷಮೆ ಯಾಚಿಸುತ್ತೀನಿ. ಇಲ್ಲಿಗೆ ಈ ವಿವಾದ ಮುಕ್ತವಾಗಲಿ' ಅಂತಾರೆ.

ಆದರೆ ವಿವಾದ ಮುಕ್ತಾಯ ಆಗುತ್ತಾ? ಇಲ್ಲ, ಅವರ ಪರವಾಗಿ ಪತ್ರಿಕೆಗಳಲ್ಲಿ ಪುಂಖಾನುಪುಂಖವಾಗಿ ಲೇಖನಗಳು ಪ್ರಕಟವಾಗುತ್ತಲೇ ಇರುತ್ತವೆ. ಯಾವುದೋ ಕಪೋಲಕಲ್ಪಿತ ಜಾನಪದ ಹಾಡು, ಲಾವಣಿ, ನಾಟಕದ ಆಧಾರದ ಮೇಲೆ ಇವರು ಮಾತನಾಡುತ್ತಾರೆ ಎಂದು



ಹೇಳಿ ಟಿಪ್ಪುವಿಗೆ ಮಾತ್ರ ಅಲ್ಲ, ಜನಪದರಿಗೇ ಅವಮಾನ ಮಾಡುತ್ತಾರೆ. ಮತ್ತೆ ಸಮಯ ನೋಡಿ ಆಡಿದ್ದೇ ಆಡೋ ಕಿಸುಬಾಯಿದಾಸ ಅನ್ನುವ ಹಾಗೆ ಇದೇ ಮಾತನ್ನು ಆಡುತ್ತಾರೆ.

ಇತಿಹಾಸ ಎನ್ನುವುದು ಯಾರ ಮರ್ಜಿಗೂ ಒಳಗಾಗಬಾರದು. ಟಿಪ್ಪು ಕುರಿತು ಚರ್ಚೆ ನಡೆಯಲಿ. ಅವನು ದೇಶದ್ರೋಹಿ ಎಂದಾದರೆ ಶಂಕರಮೂರ್ತಿ ಕುಟುಂಬವೇ ಸ್ವಾತಂತ್ರ್ಯ ಚಳವಳಿಯ ನೇತಾರರು ಎಂದು ಒಪ್ಪೋಣ. ಚರ್ಚೆಗೆ ಸಿದ್ಧರಾಗಿಲ್ಲದಿದ್ದಲ್ಲಿ ಟಿಪ್ಪು ಕುರಿತ ಅವಹೇಳನಕಾರಿ ಮಾತುಗಳನ್ನು ನಿಲ್ಲಿಸಲಿ.

ಅನಿಕ

ಬಾಂಬಿದೆ! ಬಾಂಬಿದೆ!

ಕೇರಳದ ಆರೋಗ್ಯ ಮಂತ್ರಿಣಿಗೆ ಸಿನಿಮಾ ಹುಚ್ಚಂತೆ. ಬಿಡುಗಡೆ ಆದ ದಿನ, ಆದ ನೋಡದೆ ಇದ್ದರೆ ಆರೋಗ್ಯವೇ ಬಿಗಡಾಯಿಸಿಕೊಳ್ಳುತ್ತದಂತೆ. ಅದರಲ್ಲೂ ತಮ್ಮ ನೆಚ್ಚಿನ ನಾಯಕ ನಟನ ಸಿನಿಮಾ ಬಿಡುಗಡೆ ಅಂದಮೇಲೆ ಕೇಳಬೇಕೆ. ಅದನ್ನು ನೋಡಿದಾಗಲೇ ಮನಸ್ಸಿಗೆ ಒಂದು ರೀತಿಯ ಸಮಾಧಾನ. ಅದರೇನು ಮಾಡ್ತೀರಿ. ಅದ್ದೂರಿ ಪ್ರಚಾರದೊಂದಿಗೆ ಬಿಡುಗಡೆಯಾದ ಸಿನಿಮಾ ಅದು. ಬಿಡುಗಡೆಯಾಗಿದ್ದ ಎಲ್ಲಾ ಸಿನಿಮಾ ಮಂದಿರಗಳ ಬಳಿಯೂ ಅಸಾಧ್ಯ ಜನ ಜಂಗುಳಿ. ಮಂತ್ರಿಣಿ ಅಮ್ಮನವರಿಗೆ ಟಿಕೆಟ್ ದೊರೆಯುವುದು ಹೇಗೆ. ಅದು ಸ್ತ್ರೀ ಮಲೆಯಾಳವೇ ಆದರೂ ಕಮ್ಯುನಿಸ್ಟ್ ಮಲೆಯಾಳ ಜನ ಮಂತ್ರಿಣಿ ಆದರೆ ಏನು ಆಕೇನೂ ಕ್ಯೂನಲ್ಲಿ ಬರಲಿ ಅಂತಾರೆ. ಖಾಕಿ ಬಟ್ಟೆಯವರನ್ನು ಕಳಿಸಿ ತರಿಸೋಣ ಅಂದರೆ ಅವರೂ ಟಿಕೆಟ್ ಕೌಂಟರ್‌ಗೆ ಕ್ಯೂನಲ್ಲೇ ಬರಬೇಕು. ಅಂದರೆ ಮಂತ್ರಿಣಿ ಅಮ್ಮನವರು ಸಿನಿಮಾ ನೋಡುವಂತಿಲ್ಲ! ಹಾಗಾಂತ ಸುಮ್ಮನಿರಲು ಸಾಧ್ಯವೆ ನಮ್ಮ ಪೊಲೀಸು ಪಡೆ. ತಲೆ ಉಪಯೋಗಿಸಿತು. ಏನು ಮಾಡಿದರಪ್ಪ ಅವರು ಅಂದರೆ... ಪೊಲೀಸ್ ಜೀಪ್ ಬಂದಿತು, ಪೇದೆಗಳು ಪ್ಲಸ್ ಮೂಸುವ ನಾಯಿ ಜೊತೆ. 'ಬಾಂಬಿದೆ ಹುಷಾರು' 'ಬಾಂಬಿದೆ ಜಾಗ್ರತೆ' ಎಂದು ಹೇಳುತ್ತಾ ಖಾಕಿ ಬಟ್ಟೆಯವರು ಸಡಗರದಿಂದ ಚಿತ್ರಮಂದಿರದ ಒಳಕ್ಕೆ ನುಗ್ಗಿದರು. ಸುತ್ತಾ ತಲಾಯಿಸಿದರು. ಶಂಖದಿಂದ ಬಿದ್ದ ತೀರ್ಥ ಅಲ್ಲವೆ. ಜನ ನಂಬಿದರು. ನಿಮಿಷ ಮಾತ್ರದಲ್ಲಿ ಕೆಟ್ಟೆನೋ ಬದುಕಿದೆನೋ ಅನ್ನುತ್ತಾ ಚೆಲ್ಲಾಪಿಲ್ಲಿಯಾದರು. ಬಿಕೋ ಅನ್ನುತ್ತಿದ್ದ ಕೌಂಟರ್ ಬಳಿಗೆ ಹೋಗಿ ಅಮ್ಮಾವರಿಗೆ ಟಿಕೆಟ್ ಪಡೆದುಕೊಂಡರು. ಅಲ್ಲ, ಹುಸಿಬಾಂಬ್ ಬೆದರಿಕೆ ಒಡ್ಡುವವರಿಂದ ಪೊಲೀಸರು ಈ ತಂತ್ರ ಕಲಿತರೋ ಅಥವಾ ಪೊಲೀಸರಿಂದ ಅವರು ಕಲಿತರೋ ಎಂಬುದೇ ಕುತೂಹಲದ ಸಂಗತಿ.

ವಿಶ್ವ ಗೋ ಸಮ್ಮೇಳನ!

ಪತ್ರಿಕೆಯಲ್ಲಿದ್ದ ಶೀರ್ಷಿಕೆ ಇದು.

ರಾಮಚಂದ್ರಪುರ ಮಠದ ರಾಘವೇಶ್ವರ ಭಾರ[ತೀ] ಸ್ವಾಮೀಜಿ ಅವರ ಹೇಳಿಕೆ.

ವಿಶ್ವದ ಎಲ್ಲೆಡೆಯಿಂದ ವಿವಿಧ ಜಾತಿಯ ಗೋಗಳನ್ನು ತರಿಸಬಹುದು. ಅವನ್ನು ಒಂದೆ ಕಡೆ ನೋಡುವ ಸೌಭಾಗ್ಯ ದೊರೆಯುತ್ತ[ದೆ] ಅನ್ನುವ ಖುಷಿಲಿ ನೋಡಿದರೆ ಗೋವಿ[...] ಸುದ್ದೀನೆ ಇಲ್ಲ, ಇಪ್ಪತ್ತು ಲಕ್ಷ ಜನರ ಸೇರುತ್ತಾರಂತೆ ಗೋ ಸಂರಕ್ಷಣೆ ಬಗ್ಗೆ ಚರ್ಚಿಸಲು[...]

ಸ್ವಾಮೀಜಿ ಅವರಿಗೆ ನಾಟಿ ಹಸುಗಳ ಬಗ್ಗೆ ಬಹ[ಳ] ಮಮತೆಯಂತೆ. ಅವುಗಳ ಸಂರಕ್ಷಣೆಗೆ ಅವರ[ು] ಕಟಿಬದ್ಧರಾಗಿದ್ದಾರಂತೆ.

ಅಂದಹಾಗೆ ಸ್ವಾಮೀಜಿ ತಾವು ಮುಖ್ಯಮಂತ್ರಿಗ[ಳ] ಅಧಿಕೃತ ನಿವಾಸ ಅನುಗ್ರಹಕ್ಕೆ ನೀಡಿದ ಹಸು ನಾಟಿ ಹಸು ಅಂತೀರಾ? ಅಥವಾ ರಾಮಚಂದ್ರಪುರ ಮಠದ[...] ನಾಟಿ ಹಸು ಆಗಿದ್ದು ಬೆಂಗಳೂರಿನಲ್ಲಿ ಜೆರ್ಸಿ ಹಸು ಆಗೋಯ್ತಾ!

ವಿಚ್ಛೇದನಕ್ಕೆ ಪೈಪೋಟಿ!

ವಿವಾಹ ವಿಚ್ಛೇದನವೂ ಸರಳ ಆಗುತ್ತಾ ಇದೆ!

ಕೆಲವು ಮುಸಲ್ಮಾನರು ಫೋನಿನ ಮುಖಾಂತರ ತಲಾಕ್ ಮಾಡಿದರಂತೆ! ಈಗ ಆನ್‌ಲೈನಿನಲ್ಲೂ ಪಡೆಯ[...] ಬಹುದು.

ವಿಷಯ ಅದಲ್ಲ, ಚೀನಾದಲ್ಲಿ ಅನ್ಯೋನ್ಯವಾಗಿರುವ ದಂಪತಿಗಳೂ ವಿಚ್ಛೇದನಕ್ಕೆ ಮುಗಿ ಬೀಳುತ್ತಿದ್ದಾರಂತೆ!

ಏನಿದು ವಿಪರ್ಯಾಸ ಅಂತೀರಾ. ಚೀನಾ ಕುರಿತಂತೆ ಏನೆಲ್ಲ ಕೇಳಿದ್ದೀವಿ. ಜಾಗತೀಕರಣದ ಲಾಭ ಪಡೆಯುತ್ತಿದ[ೆ] ಅಂತೆಲ್ಲ ಓದಿದ್ದೀವಿ. ಆದರೆ ನಿಜ ಏನು ಅಂದರೆ ಅಧ್ಯಾಪಕರ ಸಂಖ್ಯೆ ಕಡಿಮೆ ಮಾಡುವ ಅನಿವಾರ್ಯ ಸ್ಥಿತಿ ಅಲ್ಲಿನ ಶಾಲೆಗಳಿಗೆ ಬಂದಿದೆಯಂತೆ!

ಯಾರನ್ನು ತೆಗೆದು ಹಾಕುವುದು? ವಯಸ್ಸು, ನೈಪುಣ್ಯ, ದಕ್ಷತೆ ಇದರ ಆಧಾರದ ಮೇಲೆ ತಾನೆ? ಅಲ್ಲವಂತೆ. ವಿಧವೆ, ವಿಚ್ಛೇದಿತ ಮಹಿಳೆಯರಿಗ[ೆ] ರಿಯಾಯಿತಿಯಂತೆ. ಕೆಲಸ ಉಳಿಸಿಕೊಳ್ಳಲು ಅಲ್ಲಿಯ ಉಪಾಧ್ಯಾಯಿನಿಯರು ಅನ್ಯೋನ್ಯವಾಗಿರುವ ಗಂಡನಿಗ[ೆ] ಸೋಡಾ ಚೀಟಿ ನೀಡಲು ಮುಗಿಬೀಳುತ್ತಿದ್ದಾರಂತೆ!

ಏನು ಅಭಿವೃದ್ಧಿ, ಏನು ಜಾಗತೀಕರಣ, ಏನು ಕಥೆ!

-ಎಚ್.ಎಲ್. ಕೇಶವಮೂರ್ತಿ

ಶಂಕರಮೂರ್ತಿ ಹೇಳಿಕೆ ಅಕ್ಷಮ್ಯ


'ಲಂಕೇಶ್'ನಲ್ಲಿ ಮೂಡಿಬಂದ ಸಸ್ಪೆಂಡ್ ಪೇದೆ ಕಾಡಿನ ಮಂತ್ರಿಯ ಉಪಟಳಗಳು ಕುಮಾರಸ್ವಾಮಿಯ ಶಾಕಾಂಬರಿಯ ಹಗರಣಗಳು ಚೆನ್ನಾಗಿದ್ದವು. ಕಳ್ಳ ಚೆನ್ನಿಗಪ್ಪ ರಾಶಿರಾಶಿ ನೋಟಿನ ಮುಂದೆ ಕುಳಿತು ಅಮ್ಮನ್, ಅಕ್ಕನ್, ಅವುಗಳು (ದೇವೇಗೌಡನ ಮಕ್ಕಳು ಹಾಗೂ ಸೊಸೆಯಂದಿರು) ಎಂದು ಸಂಭೋದಿಸಿದರೂ, ಪಾಪಿ ದೇವೇಗೌಡ ತನ್ನ ಮಗನನ್ನು ರಕ್ಷಿಸಲು ಸುಮ್ಮನಿದ್ದಾರೆ. ಇದು "ಪಾಪಿ ಚಿರಾಯು" ಎಂಬ ನಾಣ್ನುಡಿಯನ್ನು ನೆನಪಿಸುತ್ತದೆ.

-ಮುತ್ತಣ್ಣ ಪೂಜಾರ್, ಕದಲಬಾಳು

ಸೆಪ್ಟೆಂಬರ್ 27 ರ ಸಂಚಿಕೆಯಲ್ಲಿ ಮುಖ್ಯಮಂತ್ರಿಯವರು ಸದ್ದುಗದ್ದಲವಿಲ್ಲದೆಯೇ ಪವನಶಕ್ತಿ ವಿದ್ಯುತ್ ವಹಿವಾಟಿನಲ್ಲಿ ತೊಡಗಿರುವುದರ ವೃತ್ತಾಂತವನ್ನು ಬಹಿರಂಗಗೊಳಿಸಿದ್ದೀರಿ. ನಿಮ್ಮ ಪತ್ರಿಕೆಗೆ ತುಂಬು ಹೃದಯದ ಧನ್ಯವಾದಗಳು. ತಮ್ಮ ಕುಟುಂಬದ ಸದಸ್ಯರು ಸಂವಿಧಾನದ ಚೌಕಟ್ಟು ಮೀರಿ, ಅಕ್ರಮವಾಗಿ, ಅಧಿಕಾರ ದುರುಪಯೋಗ ಮಾಡಿಕೊಂಡು ಪಂಚಿಸಿ ಆಸ್ತಿ ಮಾಡಿಲ್ಲ ಎಂದು ಬೀಗುವ ಮುಖ್ಯಮಂತ್ರಿಯವರೇ ಸುಜಲಾನ್ ಕಂಪನಿಯೇ ಸಂಪೂರ್ಣವಾಗಿ ವಹಿಸಿಕೊಂಡಿದ್ದರೂ ಲಾಭಾಂಶ ಮಾತ್ರ ಶಾಕಾಂಬರಿಗೆ ತಪ್ಪದೆ ಸಲ್ಲುವಂತಹ ವ್ಯವಸ್ಥೆಯನ್ನು ಮಾಡಿಕೊಂಡಿರುವುದನ್ನು ಬಹಿರಂಗ ಪಡಿಸಿದ್ದೀರಿ. ಇಲ್ಲಿ ಉತ್ಪಾದನೆಯಾಗುವ ವಿದ್ಯುತ್ತಿಗೆ ಕರ್ನಾಟಕ ಸರ್ಕಾರವೇ 'buy-back' ಆಧಾರದ ಮೇಲೆ ಖರೀದಿಸುವ ಗಿರಾಕಿ. ಇವೆಲ್ಲವು ಕರ್ನಾಟಕವನ್ನು ಕೊಳ್ಳೆ ಹೊಡೆಯುವುದಲ್ಲದೇ ಮತ್ತೇನು?


-ದಿ.ಎಲ್. ಸುರೇಶ್, ಹರಪನಹಳ್ಳಿ

ಈ ವಾರದ ಸಂಚಿಕೆಯಲ್ಲಿ 'ಟಿಪ್ಪು ಸುಲ್ತಾನ್: ಸ್ವತಂತ್ರ ಕರ್ನಾಟಕದ ಹರಿಕಾರ' ಎಂಬ ಶಿವಸುಂದರ್‌ರವರ ಲೇಖನವು ಡಿ.ಎಸ್. ಶಂಕರಮೂರ್ತಿಯಂತಹ ಅಧೋಗಾಯಿ ವಿಚಾರವಂತನಿಗೆ ಚಾಟಿ ಏಟು ಬಾರಿಸುವಂತಿದೆ. ಉನ್ನತ ಶಿಕ್ಷಣ ಮಂತ್ರಿ ಶಂಕರಮೂರ್ತಿ "ಟಿಪ್ಪು ಸುಲ್ತಾನ್ ಕನ್ನಡ ದ್ರೋಹಿ" ಎನ್ನುವ ಮೂಲಕ ತನ್ನ ಪುರೋಹಿತಶಾಹಿ ಕುತಂತ್ರಿ ಬುದ್ಧಿಯನ್ನು ಪ್ರದರ್ಶಿಸಿದ್ದಾನೆ. ಶಂಕರಮೂರ್ತಿಯ




ಹೇಳಿಕೆ ಅಕ್ಷಮ್ಯ, ಜಾತ್ಯತೀತತೆಯ ಹಣೆಪಟ್ಟಿ ಹಾಕಿಕೊಂಡು, ಚಡ್ಡಿ ತೊಟ್ಟಿರುವ ದೇವೇಗೌಡ ಶಂಕರಮೂರ್ತಿ ಹೇಳಿಕೆಗೆ ಕ್ಷಮೆ ಯಾಚಿಸಿರುವುದು ಹಾಸ್ಯಾಸ್ಪದವಾಗಿದೆ.

-ರಮಜಾನ ಕೆ. ಕೊರ್ತಿ, ಬಾದಾಮಿ



ಇತ್ತೀಚಿನ ಸಂಚಿಕೆಯಲ್ಲಿ "ಪತ್ರಿಕೆಗಳ ಅರೆಬರೆಸುದ್ದಿ, ಕೋ-ಜಾಗಳ ಜಾಹೀರಾತುಗಳ ಲದ್ದಿ" ಎಂದು ವರದಿ ಮಾಡಿ ಪ್ರಸ್ತುತ ಸರಕಾರದ ಅವಿವೇಕತನವನ್ನು ಬಯಲಿಗೆಳೆದಿದ್ದೀರಿ. ಯಾವುದೇ ಒಂದು ದೇಶ, ರಾಜ್ಯ ಅಭಿವೃದ್ಧಿ ಆಗಬೇಕಾದರೆ ಅಲ್ಲಿನ ಜನರಲ್ಲಿ ರಾಜಕೀಯ ಪ್ರಜ್ಞೆ ಮೂಡಿಸುವ ಕೆಲಸವನ್ನು ಪತ್ರಿಕೆಗಳು ಮಾಡಬೇಕು. ಆದರೆ ಎಲ್ಲಾ ಕನ್ನಡ ದಿನಪತ್ರಿಕೆಗಳಿಗೆ ಸರ್ಕಾರ ಜಾಹೀರಾತುಗಳನ್ನು ಕೊಡುತ್ತಿದೆಯಲ್ಲದೆ, ಕೋಟ್ಯಂತರ ರೂಪಾಯಿಗಳನ್ನು ಖರ್ಚು ಮಾಡುವ ಸರ್ಕಾರ ಜನರ ದುಡ್ಡನ್ನು ಪೋಲು ಮಾಡುತ್ತಿದೆ. ಇದೆಲ್ಲ ಯಾರದ್ದೋ ದುಡ್ಡು ಎಲ್ಲಮ್ಮನ ಜಾತ್ರೆ ಎಂಬಂತಾಗಿದೆ.



ಚೆನ್ನಿಗಪ್ಪನ ಲಂಚದ ಹಗರಣವನ್ನು ಮೊಬೈಲ್ ಕ್ಯಾಮರಾದಲ್ಲಿ ಸೆರೆಹಿಡಿದಿದ್ದುದರಿಂದ ಧ್ವನಿ ಅಸ್ಪಷ್ಟವಾಗಿರಬಹುದು, ಕನ್ನಡಿ ಬಿಂಬವನ್ನು ಸೆರೆಹಿಡಿದ್ದರಿಂದ ವೀಡಿಯೋ ಕೊಂಚ ಮಸುಕಾಗಿರಬಹುದು, ಅಂದ ಮಾತ್ರಕ್ಕೆ ಲಂಚ ಕೊಟ್ಟಿರುವುದು ಮತ್ತು ಲಂಚ ಪಡೆದಿರುವುದು ಸುಳ್ಳಲ್ಲ. ಇಂತಹ ಸೀಡಿಯ ಬಗ್ಗೆ ಎಂತಹ ತನಿಖೆಯಾಗಬೇಕಿತ್ತೋ ಅದನ್ನು ಮಾಧ್ಯಮಗಳು ಮಾಡದೇ ತಲಾ ಪತ್ರಿಕೆಯೊಂದಕ್ಕೆ ಕೋಟಿ ಲೆಕ್ಕದಲ್ಲಿ ಜಾಹೀರಾತು ಗಿಟ್ಟಿಸಿಕೊಂಡು ತಮ್ಮ ನೀಚತನವನ್ನು ಪ್ರದರ್ಶಿಸಿವೆ. ಇನ್ನು ಚೆನ್ನಿಗಪ್ಪನ ಸೀಡಿ ಕುರಿತು ಇನ್ನೆಂಥಾ ತನಿಖೆ ಸಾಧ್ಯ?

- ದಿ.ಎಲ್. ನಾಗರಾಜ್, ಹರಪನಹಳ್ಳಿ

ಯಾರೀ ಮುನ್ನಿ? ಧಾರವಾಡದವಳಾ?

Zero Hour ಖುಷಿ ಕೊಡುತ್ತೆ, ಹಾಗೆಯೇ ಮುನ್ನಿ ಬರೆವ ಪತ್ರಗಳೂ ಸಹ.

-ಡಾ. ಎಂ.ಬಿ. ರಾಮಮೂರ್ತಿ, ಬೆಂಗಳೂರು

''ಪತ್ರಿಕೆಗಳಿಗೆ ಪೊಳ್ಳು ಜಾಹೀರಾತು''

ಪೊಳ್ಳು ಪೊಳ್ಳೆಂದು
ಹೀಗಳೆಯಬೇಡ ಅಕ್ಕ


ಪೊಳ್ಳನ್ನೆ ಸತ್ಯವಾಗಿಸುವ
ಪತ್ರಕರ್ತರಿದ್ದಾರು ಪಕ್ಕ

ಪೊಳ್ಳು ನುಡಿವುದೇನೋ
ರಾಜಕಾರಣದ ಕಾಯಕ

ಆದರೆ ಅದ ಪರಾಮರ್ಶಿಸದ
ಪತ್ರಿಕೆಗಳು ಯಾತಕ್ಕೆ ಬೇಕ
ಹಾಗಂತ ಪೊಳ್ಳಿನ ಆರ್ಭಟಕ್ಕೆ
ತಲೆದೂಗಿಲ್ಲ ಸಮುದಾಯ
'ಲಂಕೇಶ್'ನಂತಹ
ಪತ್ರಿಕೆಯ ಅಭಯ
ಇನ್ನೂ ಜೀವಂತವಾಗಿರಿಸಿದೆ
ಸಮುದಾಯದ ನೈಜ ಆಶಯ.

-ಅನಾರ್ಕಲಿ ಸಲೀಂಚಿಣ್ಯ, ಶ್ರೀರಂಗಪಟ್ಟಣ

ಮೈಸೂರಿನಲ್ಲಿ ರಾಜ - ಗಾಜನೂರಿನಲ್ಲಿ ಮುತ್ತುರಾಜ!



ಮೈಸೂರಿನಲ್ಲಿ ರಾಜ ಮನೆತನದ ವೈಭವವನ್ನು ಕಂಡು ಆನಂದಿಸಿದ್ದ ಅವರಿಗೆಲ್ಲ ಗಾಜನೂರಿನಲ್ಲಿ 'ರಾಜ್' ರವರ ಸರಳ ಜೀವನದ ಮನೆ ಎದುರಾಯಿತು. "ಮೈಸೂರಿನಲ್ಲಿ ರಾಜ, ಗಾಜನೂರಿನಲ್ಲಿ ಮುತ್ತುರಾಜ" ಎಂದು ನನ್ನ ಗೆಳೆಯರು ಅಂದು ಹೇಳಿದ್ದು ನೆನಪಿನಲ್ಲಿದೆ.

"ಮೈಸೂರು ದಸರಾ... ಎಷ್ಟೊಂದು ಸುಂದರಾ..." ಎಂಬ ಹಾಡಿನಷ್ಟೇ ಸುಂದರವಾಗಿತ್ತು ನಾನು ನನ್ನ ಗೆಳೆಯರೊಂದಿಗೆ ದಸರಾವನ್ನು ಎಂಜಾಯ್ ಮಾಡಿದ ದಿನಗಳು. ಮದರಾಸಿನಿಂದ ಬಂದಿದ್ದ ಗೆಳೆಯರಿಗೆಲ್ಲಾ ಮೈಸೂರಿನ ಅರಮನೆ, ಬೃಂದಾವನ, ಚಾಮುಂಡಿ ಬೆಟ್ಟ ಎಲ್ಲವನ್ನೂ ತೋರಿಸಿದೆ. ಹಾಗೆ ತೋರಿಸುವಾಗ ಅವರಿಗೆ ನಮ್ಮ ಕರ್ನಾಟಕದ ವೈಭವವನ್ನು ಹೇಳುವುದೇ ತುಂಬಾ ಸಂತೋಷ ನೀಡುತ್ತಿತ್ತು. ಅವಕಾಶ ಸಿಕ್ಕರೆ ಸಾಕು ನಮ್ಮ ರಾಜ್ಯ ಮತ್ತು ನಮ್ಮ ಭಾಷೆಯನ್ನು ಹೊಗಳಿದ್ದೇ ಹೊಗಳಿದ್ದು.


ಅದೇ ಸಂದರ್ಭದಲ್ಲಿ ಬಂಗಾರಪ್ಪನವರು ತಮ್ಮ ಕುಟುಂಬ ಸಮೇತ ಮೈಸೂರಿಗೆ ಬಂದಿದ್ದರಿಂದ ಒಂದೆರಡು ಬಾರಿ ಅವರೆಲ್ಲರನ್ನು ಭೇಟಿಯಾಗಿದ್ದೆ. ಮೊದಲೇ ಹೇಳಿದಂತೆ ವಸಂತ್ ನನ್ನ ಆತ್ಮೀಯ ಗೆಳೆಯನಾಗಿದ್ದರಿಂದ ಅವನೊಂದಿಗೆ ಒಂದಿಷ್ಟು ಹರಟೆ ಹೊಡೆಯುತ್ತಿದ್ದೆ. ಗೀತಾ ನನ್ನ ಭಾವೀ ಪತ್ನಿಯೆಂದು ಆಗಲೇ ನಿರ್ಧಾರವಾಗಿದ್ದರಿಂದ ಆಕೆಯೊಂದಿಗೂ ಕುಳಿತು ಹರಟೆ ಹೊಡೆಯುತ್ತಿದ್ದೆ. ಹೀಗೆ ಮೈಸೂರಿನಲ್ಲಿ ಗೆಳೆಯರು ಮತ್ತು ಭಾವೀ ಪತ್ನಿಯೊಂದಿಗೆ ಕಳೆದ ಆ ರಸಮಯ ಕ್ಷಣಗಳನ್ನು ನಾನೆಂದೂ ಮರೆಯಲಾರೆ.

ಕೆಲವು ದಿನಗಳಲ್ಲಿ ಬಂಗಾರಪ್ಪನವರ ಕುಟುಂಬದವರು ಬೆಂಗಳೂರಿಗೆ ಹಿಂದಿರುಗಿದರು. ನನ್ನ ಗೆಳೆಯರಿಗೆಲ್ಲಾ ಮೈಸೂರನ್ನು ತೋರಿಸಿದ ನಂತರ ಅವರನ್ನೆಲ್ಲ ಅಪ್ಪಾಜಿಯವರ ಊರಾದ ಗಾಜನೂರಿಗೆ ಕರೆದುಕೊಂಡು ಹೋದೆ. ಮೈಸೂರಿನಲ್ಲಿ ರಾಜ ಮನೆತನದ ವೈಭವವನ್ನು ಕಂಡು ಆನಂದಿಸಿದ್ದ ಅವರಿಗೆಲ್ಲ ಗಾಜನೂರಿನಲ್ಲಿ 'ರಾಜ್' ರವರ ಸರಳ ಜೀವನದ ಮನೆ ಎದುರಾಯಿತು. "ಮೈಸೂರಿನಲ್ಲಿ ರಾಜ, ಗಾಜನೂರಿನಲ್ಲಿ ಮುತ್ತುರಾಜ" ಎಂದು ನನ್ನ ಗೆಳೆಯರು ಅಂದು ಹೇಳಿದ್ದು ನೆನಪಿನಲ್ಲಿದೆ.

ಗಾಜನೂರಿನ ಹಳ್ಳಿಯ ಸುತ್ತ ನಾವೆಲ್ಲಾ ತಿರುಗಾಡಿದೆವು. ಅವರಿಗೆಲ್ಲ ಆ ಹಳ್ಳಿಯ ಸರಳತೆ, ಅಲ್ಲಿಯ ಮಾಲಿನ್ಯ ರಹಿತ ವಾತಾವರಣ ತುಂಬಾ ಇಷ್ಟವಾಯಿತು. ನಿಜ ಹೇಳಬೇಕೆಂದರೆ ನನ್ನ ಸ್ನೇಹಿತರು ಬೆಂಗಳೂರಿಗೆ ಬಂದಾಗಲೆಲ್ಲ 'ಬೆಂಗಳೂರು ಸುತ್ತಾಡುವ' ಎಂದು ನಾನು ಯಾವತ್ತೂ ಅವರನ್ನು ಪೀಡಿಸಿದ್ದೇ ಇಲ್ಲ. ಆದರೆ ಬೆಂಗಳೂರಿಗಿಂತ ಗಾಜನೂರೆಂದರೆ ನನಗೆ ಒಂಥರಾ ಬಾಲ್ಯದಿಂದಲೂ ಆಕರ್ಷಣೆ. ನನ್ನ ಗೆಳೆಯರಿಗೂ ಅಪ್ಪಾಜಿಯ ಗಾಜನೂರು ಇಷ್ಟವಾಗಿದ್ದು ನನಗೆ ಇನ್ನಷ್ಟು ಸಂತೋಷವನ್ನು ನೀಡಿತ್ತು.

ಅದೇ ಸಂದರ್ಭದಲ್ಲಿ ಸುಜಾತಕ್ಕನವರ ಎಂಗೇಜ್‌ಮೆಂಟ್ 'ಡೆಕ್ಕನ್ ಹೆರಾಲ್ಡ್' ಪತ್ರಿಕೆಯ ತಿಲಕ್ ಕುಮಾರ್ ಜೊತೆ ಫಿಕ್ಸ್ ಆಯಿತು. ಸುಜಾತಕ್ಕ ಎಂದರೆ ನನ್ನ ಪತ್ನಿ ಗೀತಾ ಅವರ ಅಕ್ಕ. ಬಹಳ ಅದ್ದೂರಿಯಾಗಿ ನಡೆದ ಆ ಸಮಾರಂಭಕ್ಕೆ ನಾನೂ ಹೋಗಿದ್ದೆ. ಸುಜಾತಕ್ಕನವರ ನಿಶ್ಚಿತಾರ್ಥವಾಗಿದ್ದರಿಂದ ನನ್ನ ಮತ್ತು ಗೀತಾ ಮದುವೆ ಬೇಗ ನಡೆಯಬಹುದೆಂದು ನಾನು ಲೆಕ್ಕಹಾಕಿಕೊಂಡೆ. ಆದರೆ ಮದುವೆ ಬೇಗ ಆಗಬೇಕೆಂಬ ಆತುರ ನನಗೇನು ಇರಲಿಲ್ಲ. ಅದಕ್ಕಿಂತ ಮುಖ್ಯವಾಗಿ ನಾನು ನಾಯಕನಾಗಿ ನಟಿಸುವ ಚಿತ್ರ ಆದಷ್ಟು ಬೇಗ ಆರಂಭವಾಗಬೇಕು ಎಂದು ಕನಸು ಕಾಣುತ್ತಿದ್ದೆ.

ಸುಜಾತಕ್ಕನಿಗೆ ಎಂಗೇಜ್‌ಮೆಂಟ್ ಆದ ಕೂಡಲೇ ಆ ವರ್ಷದ ನ್ಯೂ ಇಯರ್ ಅನ್ನು ನಾವೆಲ್ಲ ಜೊತೆಯಾಗಿ ಆಚರಿಸಿದ್ದೆವು. ಏರ್ ಪೋರ್ಟ್ ರಸ್ತೆಯಲ್ಲಿದ್ದ ಫಿಯೆಸ್ಟಾ ಎಂಬ ಹೋಟೆಲಿನಲ್ಲಿ ಸುಜಾತಕ್ಕ, ತಿಲಕ್ ಕುಮಾರ್, ನಾನು, ಗೀತಾ, ವಸಂತ್ ಎಲ್ಲರೂ ಸೇರಿ ಮಧ್ಯ ರಾತ್ರಿ ನಂತರವೂ ಹೊಸ ವರ್ಷಾಚರಣೆಯ ಸಂಭ್ರಮದಲ್ಲಿ ಕಾಲ ಕಳೆದಿದ್ದನ್ನು ಮರೆಯಲು ಸಾಧ್ಯವೇ ಇಲ್ಲ. ಪಾರ್ಟಿ ಮುಗಿದ ನಂತರ ಎಲ್ಲರನ್ನು ಮನೆಗೆ ತಲುಪಿಸುವ ಜವಾಬ್ದಾರಿ ವಹಿಸಿಕೊಂಡಿದ್ದೆ. ಮುಂದುಗಡೆ ಕಾರನ್ನು ನಾನು ಡ್ರೈವ್ ಮಾಡಿಕೊಂಡು ಹೋಗುತ್ತಿದ್ದರೆ, ಉಳಿದವರೆಲ್ಲ ನನ್ನನ್ನು ಹಿಂಬಾಲಿಸುತ್ತಿದ್ದರು. ಎಲ್ಲರನ್ನೂ ಮನೆಗೆ ತಲುಪಿಸಿದ ನಂತರ ನಾನು ಮನೆ ತಲುಪಿದಾಗ ಬೆಳಗಿನ ಜಾವವಾಗಿತ್ತು!



'ಆನಂದ್' ಚಿತ್ರದಲ್ಲಿ...

ಆನಂತರ ನಾನು ಮದ್ರಾಸಿನಲ್ಲಿ ಹೆಚ್ಚು ಕಾಲ ಕಳೆಯುತ್ತಿದ್ದೆ. ಅಲ್ಲಿ ನನ್ನ ಚಿತ್ರಕ್ಕೆ ಸಂಬಂಧಪಟ್ಟಂತೆ ಚಿತ್ರಕತೆಯ ತಯಾರಿ ನಡೆಯುತ್ತಿತ್ತು. ಅದರ ಚರ್ಚೆಗಳಲ್ಲಿ ಭಾಗವಹಿಸುವುದೇ ನನಗೆ ಒಂದು ರೀತಿಯ ವಿಭಿನ್ನವಾದ ಅನುಭವವನ್ನು ನೀಡುತ್ತಿತ್ತು. **Later on** ನನ್ನ ಅದೃಷ್ಟವೇನೆಂದರೆ ಸುಜಾತಕ್ಕ ಮತ್ತು ತಿಲಕ್ ಕುಮಾರ್ ಅವರ ಮದುವೆಯ ದಿನವೇ ನನ್ನ ಚಿತ್ರದ ಮುಹೂರ್ತ ಫಿಕ್ಸ್ ಆಯಿತು.

ನಿರೂಪಣೆ: ಸದಾಶಿವ ಶೆಣೈ

22



ಹ್ಯಾಟ್ರಿಕ್ ಹೀರೋನ ಹಾರ್ಟ್ ಬೀಟ್!

ಅದು ಫೆಬ್ರವರಿ ಹತ್ತೊಂಭತ್ತು.... ನನ್ನ ಹಲವು ವರ್ಷಗಳ ಕನಸನ್ನು ನನಸಾಗಿಸಿದ ದಿನ. ಆ ದಿನ ಫಿಕ್ಸ್ ಆದಾಗ ನಾನು ಹೆದರಲಿಲ್ಲ. ಅದಕ್ಕಾಗಿ ವಿಶೇಷವಾಗಿ ತಯಾರಿ ಕೂಡ ನಡೆಸಿರಲಿಲ್ಲ. ನನ್ನಲ್ಲಿ ಅದಮ್ಯವಾದ ಆತ್ಮವಿಶ್ವಾಸವಿತ್ತು. ಆದರೆ ಆ ದಿನಕ್ಕೆ ಒಂದು ವಾರವಿದ್ದಾಗ ಟೆನ್ಷನ್ ಶುರುವಾಯಿತು. ಒಂದು ದಿನ ಬಾಕಿ ಇದ್ದಾಗ ಇನ್ನಷ್ಟು ಟೆನ್ಷನ್ ಆಯಿತು.

ಆದರೆ ಅದೇನಾಯಿತೋ ಏನೋ, ಕೊನೆಯ ಒಂದು ಗಂಟೆ ಬಾಕಿಯಿದ್ದಾಗ ನಾನು ಥ್ರಿಲ್ ಆದೆ. ಅರ್ಧ ಗಂಟೆ ಬಾಕಿ ಎಂದಾಗ ರೋಮಾಂಚನಗೊಂಡೆ. ಆ ಕ್ಷಣ ಬಂದ ಕೂಡಲೇ ಧೈರ್ಯದಿಂದ ಕ್ಯಾಮೆರಾ ಮುಂದೆ ನಿಂತೆ. ಅದು ನನ್ನ ಜೀವನದ ಅತ್ಯಂತ ಹಾಗೂ ಅಮೂಲ್ಯವಾದ ಕ್ಷಣ. ನಾನು ಸಾಯುವ ತನಕವೂ ಅದನ್ನು ಮರೆಯಲು ಸಾಧ್ಯವೇ ಇಲ್ಲ.

"ನನ್ನ ಹೆಸರು ಆನಂದ್." ಇದು ನಾನು ಕ್ಯಾಮೆರಾ ಎದುರಿಸಿದಾಗ ಹೇಳಿದ ಮೊದಲ ವಾಕ್ಯ. ಈ ವಾಕ್ಯ ಹೇಳಿ ಮುಗಿಸಿದ್ದೇ ತಡ ಎಲ್ಲರೂ ಜೋರಾಗಿ ಚಪ್ಪಾಳೆ ಹೊಡೆದರು. ಸ್ಟುಡಿಯೋದ ಹೊರಗಡೆ ಅಪ್ಪಾಜಿಯ ಅಭಿಮಾನಿಗಳು ಪಟಾಕಿಯನ್ನು ಸಿಡಿಸಿದರು. ಎಲ್ಲರೂ ಸಿಹಿ ಹಂಚಲು ಶುರುಮಾಡಿದರು. ನನಗಂತೂ ನಾಗೆಲ್ಲಿದ್ದೇನೆ? ಎಂಬುದೇ ಅರ್ಥವಾಗಲಿಲ್ಲ. ನಾನು ಕ್ಯಾಮೆರಾ ಎದುರಿಸಿದ ನಂತರ ನನ್ನನ್ನು ಮೊದಲಿಗೆ ಗಟ್ಟಿಯಾಗಿ ಆಲಿಂಗಿಸಿದ್ದು ನನ್ನ ಅಪ್ಪಾಜಿ. ಆ ನಂತರ ನನ್ನ ಅಮ್ಮ. ಇದಾದ ನಂತರ ಅದೆಷ್ಟೋ ಜನ ನನಗೆ ದೊಡ್ಡ ದೊಡ್ಡ ಹಾರಗಳನ್ನು ಹಾಕಿದರು. ನಿಜವಾಗಿಯೂ ಹೇಳುತ್ತಿದ್ದೇನೆ ನಾನು ಅಂದು ತುಂಬಾ ಭಾವುಕನಾಗಿಬಿಟ್ಟಿದ್ದೆ. ನನಗರಿವಿಲ್ಲದಂತೆಯೇ ನನ್ನ ಕಣ್ಣಿನಿಂದ ಕಣ್ಣೀರು ಹನಿಸಿತು. ನಾನು ಪುನಃ ಹಾಗೇ ಹೋಗಿ ಅಪ್ಪಾಜಿಯನ್ನು ತಬ್ಬಿಕೊಂಡು ಅವರ ಕಾಲಿಗೆ ನಮಸ್ಕರಿಸಿದೆ.

ಸ್ಟುಡಿಯೋದ ಹೊರಗಡೆ ಅಪ್ಪಾಜಿಯ ಅಭಿಮಾನಿಗಳು ಜೈಕಾರ ಹಾಕುತ್ತಿದ್ದರು. ಸ್ಟುಡಿಯೋದ ಒಳಗಡೆ ಗಾಂಧಿನಗರದ ದೊಡ್ಡ ದೊಡ್ಡ ವ್ಯಕ್ತಿಗಳೆಲ್ಲ ಜಮಾಯಿಸಿದ್ದರು. ಎಲ್ಲರ ಬಾಯಲ್ಲೂ ಒಂದೇ: "ಕನ್ನಡ ಚಿತ್ರರಂಗಕ್ಕೆ ಒಬ್ಬ ಯಂಗ್ ಹೀರೋ ಬರುತ್ತಿದ್ದಾನೆ" ಎಂದು. ಅವರು ಹೇಳಿದ್ದು ನಿಜ, ನಮ್ಮ 'ಆನಂದ್' ಚಿತ್ರದ ಟೀಮಿನಲ್ಲಿ ಎಲ್ಲರೂ ಯಂಗ್‌ಸ್ಟರ್ಸ್. ನಾನು, ಗುರುದತ್, ಸುಧಾರಾಣಿ, ರವಿಶಂಕರ್, ಬಾಲು... ಹೀಗೆ ಎಲ್ಲರೂ ತರುಣ, ತರುಣಿಯರೇ. ಹಿರಿಯ ನಟರೆಂದರೆ ರಾಜೇಶ್, ಜಯಂತಿ ಮತ್ತು ಶುಭಾ ಅವರು ಮಾತ್ರ. ಸಂಗೀತಂ ಶ್ರೀನಿವಾಸ್ ನಮಗೆಲ್ಲ ಕ್ಯಾಪ್ಟನ್. ಹಿರಿಯ ನಟರು ನಮ್ಮನ್ನು ಅತ್ಯಂತ ಪ್ರೀತಿಯಿಂದ ನೋಡಿಕೊಳ್ಳುತ್ತಿದ್ದರಿಂದ ನಮಗೆ ಯಾವುದೇ ಭಯ ಅಥವಾ ಆತಂಕ ಆಗಲೇ ಇಲ್ಲ.

ಆದರೆ ಉದ್ಯಮದ ಜನ ಯಂಗ್ ಹೀರೋ ಬರುತ್ತಿದ್ದಾನೆ ಎಂದು ಸಂತೋಷ ವ್ಯಕ್ತಪಡಿಸಿದರೂ ನಾನು ಮಾತ್ರ ನನ್ನ ಭವಿಷ್ಯದ ಬಗ್ಗೆ ಚಿಂತಿಸುತ್ತಲೇ ಇದ್ದೆ. ಜನ ನಿಜವಾಗಿಯೂ ನನ್ನನ್ನು ನಾಯಕ ನಟನಾಗಿ ಸ್ವೀಕರಿಸುತ್ತಾರೆಯೇ? ನನ್ನ ನಟನೆಯನ್ನು ಅಪ್ಪಾಜಿಯ ನಟನೆಗೆ ಹೋಲಿಸುತ್ತಾರೆಯೇ? ಒಂದು ವೇಳೆ ನನ್ನನ್ನು ನಾಯಕನಟನನ್ನಾಗಿ ಸ್ವೀಕರಿಸದಿದ್ದರೆ ನಾನೇನು ಮಾಡಬೇಕು? ಎಂಬಿತ್ಯಾದಿ ಪ್ರಶ್ನೆಗಳು ನನ್ನ ಮನಸ್ಸಿನಲ್ಲಿ ಕಾಡುತ್ತಲೇ ಇತ್ತು. ಆ ಸಂದರ್ಭದಲ್ಲೇ ಶೂಟಿಂಗ್ ಆದ ಮೂರನೇ ದಿನ ನಿರ್ದೇಶಕ ಸಂಗೀತಂ ಶ್ರೀನಿವಾಸ್ ನನ್ನ ಬಳಿ ಬಂದು "ಇವತ್ತು ಶೂಟಿಂಗ್ ಬೇಗ ಮುಗಿಸೋಣ. ಈ ತನಕ ಶೂಟಿಂಗ್ ಮಾಡಿದ ರಶಸ್‌ಅನ್ನು ಪ್ರಿಂಟ್ ಹಾಕಿ ನೋಡಿದ ನಂತರ ಶೂಟಿಂಗ್ ಮುಂದುವರೆಸೋಣ" ಎಂದಾಗ ನನಗೆ ಆದ ಭಯ ಅಷ್ಟಿಷ್ಟಲ್ಲ. "ನಾನು ಸರಿಯಾಗಿ ನಟಿಸಲಿಲ್ಲವೇ?" ಎಂದು ಕೇಳಿದೆ. ಆಗ ಸಂಗೀತಂ ಮತ್ತು ಛಾಯಾಗ್ರಾಹಕ ಗೌರಿಶಂಕರ್ ಏನೂ ಹೇಳದೆ ಸುಮ್ಮನಿದ್ದಾಗ ನನಗೆ ಹೆದರಿಕೆಯಾಯಿತು.....

(ಮುಂದುವರೆಯುತ್ತದೆ...)

ಚಿಲ್ಲಿಂಗ್ 'ತನನಂ ತನನಂ'

ಪುಟಾಣಿ ಇಶಾ ಮತ್ತು ಡಾ. ಎಲ್. ಸುಬ್ರಮಣ್ಯಂರು 'ತನನಂ ತನನಂ'ನ ಆಡಿಯೋ ಕ್ಯಾಸೆಟ್, ಸಿ.ಡಿ.ಗಳನ್ನು ಇದೇ ಶನಿವಾರ ಬಿಡುಗಡೆ ಮಾಡಿದರು.

ಅವತ್ತು ಕಲ್ಯಾಣ್ ತಂದೆ ತೀರಿಕೊಂಡಿದ್ದರಿಂದ ಅವರು ಬಂದಿರಲಿಲ್ಲ. ಕಲ್ಯಾಣ್ ತಂದೆಗಾಗಿ ಒಂದು ನಿಮಿಷ ಮೌನ ಆಚರಿಸಿದ ನಂತರ ಸಮಾರಂಭ ನಡೆಯಿತು. ಅರ್ಥಪೂರ್ಣ ಸಾಹಿತ್ಯ, ಮಧುರ ಸಂಗೀತ ನೀಡಿ 'ತನನಂ ತನನಂ' ಹಾಡುಗಳಿಗೆ ಜೀವ ತುಂಬಿರುವ ಕಲ್ಯಾಣ್‌ರವರು ಬರಲಾಗದಿದ್ದರೂ ಸಂಗೀತದ ಲಹರಿಯಲ್ಲಿ ಎಲ್ಲರ ಮನ ತುಂಬಿದ್ದರು.

ವಿಶ್ವವಿಖ್ಯಾತ ವಯೊಲಿನ್ ವಾದಕ ಡಾ. ಎಲ್. ಸುಬ್ರಮಣ್ಯಂರು "ಇತ್ತೀಚೆಗೆ ಕ್ಲಾಸಿಕ್ ಮ್ಯೂಸಿಕ್ ಆಧರಿಸಿದ ಚಿತ್ರಗಳ ನಿರ್ಮಾಣ ಕಡಿಮೆ ಆಗುತ್ತಿದೆ. 'ತನನಂ ತನನಂ' ಚಿತ್ರಕತೆ ಸಂಗೀತ, ರಂಗಭೂಮಿ, ಪ್ರೀತಿ, ಪ್ರಣಯಗಳ ಸಂಗಮದಂತೆ ಇರುವುದರಿಂದ ನಾನು ವಯೊಲಿನ್ ಬಿಟ್ಸ್ ನೀಡಲು ಒಪ್ಪಿದೆ. ಸಂಗೀತ ತುಂಬಾ ಚೆನ್ನಾಗಿ ಮೂಡಿಬಂದಿದೆ. ಹಾಗೆಯೇ ರಮ್ಯಾ, ರಕ್ಷಿತಾ ಸಹ ಮುದ್ದು ಮುದ್ದಾಗಿದ್ದಾರೆ" ಎಂದರು.

ಫುಲ್ ಖುಷಿಯಲ್ಲಿದ್ದ ನಿರ್ದೇಶಕ ಕವಿತಾ ಲಂಕೇಶ್ "ಕೆಲವರು ಜೋಗಿ ಚಿತ್ರದ ಆಡಿಯೋಗಿಂತ ತಮ್ಮ ಚಿತ್ರದ ಆಡಿಯೋ ಚೆನ್ನಾಗಿ ಹೋಗಿದೆ ಎಂದು ರೀಲು ಬಿಡುತ್ತಾರೆ. ... 12 ಕೋಟಿ ... !



ನಮ್ಮ 'ತನನಂ ತನನಂ' ಆಡಿಯೋ 'ಜೋಗಿ'ಯಷ್ಟು ಸೇಲ್ ಆದರೆ ಅದೇ ನನಗೆ ಖುಷಿ. ನಿರ್ಮಾಪಕ ಸುರೇಶ್, ಅಶ್ವಿನಿ ರಾಮಪ್ರಸಾದ್ ಇದರಲ್ಲಿ ಯಶಸ್ವಿ ಆಗ್ತಾರೆ ಅನ್ಸುತ್ತೆ" ಎಂದು ಹೇಳಿದರು.

ಆಡಿಯೋ ರಿಲೀಸ್

ರಮ್ಯ, ರಕ್ಷಿತರನ್ನು ನೋಡಬೇಕಿತ್ತು! ಅವಳ ಆಕ್ಟಿಂಗ್‌ನ್ನು ಇವಳು, ಇವಳ ಆಕ್ಟಿಂಗ್‌ನ್ನು ಅವಳು ಹೊಗಳಿದ್ದೇ ಹೊಗಳಿದ್ದು!

ಪಂಚತಾರಾ ವೆಸ್ಟ್ ಎಂಡ್ ಹೋಟೆಲ್‌ನಲ್ಲಿ ನಡೆದ ಮೊದಲ ಆಡಿಯೋ ಕ್ಯಾಸೆಟ್ ಸಮಾರಂಭವಿದು!

ಅಂದಂತೆ ಹಾಡಿನ ಬಿಟ್ಸ್‌ಗಳನ್ನು ತೋರಿಸಲಾಯ್ತು. ಅವುಗಳನ್ನು ಮೆಚ್ಚಿಕೊಂಡ ಪತ್ರಕರ್ತರು 'ಪೂರ್ತಿ ಹಾಡು ತೋರಿಸಬೇಕಿತ್ತು, ಬಿಟ್ಸ್ ನೋಡಿ ಕುತೂಹಲ ಹೆಚ್ಚಿದೆ' ಎಂದು 'ದೂರು' ನೀಡಿದ್ದೂ ಆಯ್ತು.

'ತನನಂ ತನನಂ' ರಾಗ ಶೇಲಿ ಬರ್‍ತಾ ಇದೆ. Enjoy it.

(ಸರ್) ಪ್ರೈಜು... ಆಜುಬಾಜು....

ಶಾರ್ಟ್ ಕಟ್

ಕಳೆದ ವರ್ಷ ಸೂಪರ್ ಹಿಟ್ ಆದ ಚಿತ್ರದ ನಿರ್ದೇಶಕ ಅವರ ಚಿತ್ರಕ್ಕೆ ಪ್ರೈಜು ಸಿಗದೇ ಹೋದದಕ್ಕೆ ಸರ್‌ಪ್ರೈಜಾಗಿ ಏನೇನೋ ಮಾತಾಡಿದ್ದಾರೆ.

'ನಾಯಿ ನೆರಳು' ಯಾರೂ ನೋಡಿಲ್ಲ 'ನೆನಪಿರಲಿ' ಆವರೇಜ್ ಫಿಲ್ಮು, 'ಅಮೃತಧಾರೆ'ಗಿಂತ ನಮ್ಮ ಸಿನಿಮಾ ಚೆನ್ನಾಗಿ ಓಡಿದೆ.... ಆದ್ದರಿಂದ ಪ್ರೈಜು ನಮ್ ಚಿತ್ರಕ್ಕೇ ಬರಬೇಕಿತ್ತು ಎಂದಿದ್ದಾರೆ.

'ರಹಸ್ಯ'ವೂ ನೂರು ದಿನ ಓಡಿದೆ ಎಂಬ ಕಾರಣಕ್ಕೆ ಅದನ್ನು ಪ್ರಶಸ್ತಿಗೆ ಪರಿಗಣಿಸಲಾಗುತ್ತದೆಯೇ? ಚಿತ್ರಗಳ ಗುಣಮಟ್ಟ ನೋಡಬೇಕಲ್ವೆ? ಕುವೆಂಪುರವರ 'ಶ್ರೀರಾಮಾಯಣ ದರ್ಶನಂ'ಗೆ ಜ್ಞಾನಪೀಠ ಪ್ರಶಸ್ತಿ ಸಿಕ್ಕಿದ್ದು ಅದರ ಗುಣಮಟ್ಟಕ್ಕಾಗಿ... ಆ ಕೃತಿಯನ್ನು ತುಂಬಾ ಜನ ಓದಿದ್ದಾರೆ ಎಂಬ ಕಾರಣಕ್ಕಲ್ಲ!



ಸಖತ್ ಸೇಲ್ ಆಗ್ತಾವೆ ಅಂತಾ ಯಂಡಮೂರಿ ವೀರೇಂದ್ರನಾಥನ ಪುಸ್ತಕಗಳಿಗೆ ಅವಾರ್ಡ್ ಕೊಡೋಕೆ ಆಗುತ್ತಾ? ಜನಪ್ರಿಯ ಸಿನಿಮಾಗಳಿಗೆ ಅಂತಲೇ ಫಿಲ್ಮ್‌ಫೇರ್ ಅವಾರ್ಡು, ಟಿವಿ ಅವಾರ್ಡುಗಳಿವೆಯಲ್ಲ... ಅಲ್ಲಿ 'ಬೇಡುವೆನು ವರವನ್ನು' ಎನ್ನದಿದ್ದರೂ ಅವಾರ್ಡು ಸಿಗುತ್ತೆ ಎಂದು ಆ ನಿರ್ದೇಶಕರಿಗೆ ಯಾರೋ ಸಮಾಧಾನ ಮಾಡಿದರಂತೆ!

R.B.P. LANKESH, Kannada Weekly Price Rs. 10/- 11-10-2006 RNI No. KARKAN2005/14648 Regd.No.KA/BG(S)/2036/2005



-ಶೆಣೈ

ರಾಷ್ಟ್ರ ಪ್ರಶಸ್ತಿ ವಿಜೇತೆ ತಾರಾ ಅವರಿಗೆ ಅಮೆರಿಕದಲ್ಲಿ ನಡೆದ ನಾಲ್ಕನೇ ವಿಶ್ವ ಕನ್ನಡ ಸಮ್ಮೇಳನದ ವೇದಿಕೆಯಲ್ಲಿ ಏಕ ಕಾಲದಲ್ಲಿ ಅವಮಾನ ಮತ್ತು ಬಹುಮಾನ ದೊರಕಿತು.

'ಉದಯೋನ್ಮುಖಿ ನಟಿ ತಾರಾ ಅವರು ಈಗ ಹಾಡಲಿದ್ದಾರೆ' ಎಂದು ವೇದಿಕೆಯಲ್ಲಿ ಅನೌನ್ಸರ್ ಘೋಷಿಸಿದಾಗ ಬೆಂಗಳೂರಿನಿಂದ ಹೋದ ಕನ್ನಡಿಗರೆಲ್ಲ ಹೋ ಎಂದು ನಕ್ಕರು. ಉದಯೋನ್ಮುಖಿ ನಟಿಯೆಂದರೆ ಈಗಷ್ಟೇ ಚಿತ್ರರಂಗಕ್ಕೆ ಕಾಲಿಟ್ಟ ಹದಿನಾರರ ತರುಣಿ ಎಂದು ತಾರಾ ಖುಷಿ ಪಡಬಹುದಿತ್ತು. ಆದರೆ ಇದರ ಅರ್ಥವನ್ನು ಅರಿತ ತಾರಾ ಮೈಕ್ ಕೈಗೆತ್ತಿಕೊಂಡ ಕೂಡಲೇ "ನಾನು ಉದಯೋನ್ಮುಖಿ ಅಲ್ಲ. ಯಾಕೆಂದರೆ ಇಪ್ಪತ್ತು ವರ್ಷಗಳಿಂದ ಈ ಚಿತ್ರರಂಗದಲ್ಲಿ ಇದ್ದೇನೆ. ರಾಜ್ಯ ಹಾಗೂ ರಾಷ್ಟ್ರ ಪ್ರಶಸ್ತಿಯನ್ನು ಕೂಡಾ ಪಡೆದಿದ್ದೇನೆ. ನೂರಕ್ಕೂ ಹೆಚ್ಚು ಚಿತ್ರಗಳಲ್ಲಿ ನಟಿಸಿದ್ದೇನೆ" ಎಂದು ಸ್ಪಷ್ಟೀಕರಣ ನೀಡಿದರು.

ಇದು ಅಮೆರಿಕದ ಕನ್ನಡಿಗರ ಉತ್ಸಾಹದಿಂದ ಆದ ಒಂದು ಚಿಕ್ಕ ಪ್ರಮಾದವಷ್ಟೇ. ಬೆಂಗಳೂರಿನಲ್ಲಿ ಪುಡಿ ಪುಢಾರಿಗಳು ತಮ್ಮ ನಾಯಕನನ್ನು ಹೊಗಳುವ ಭರಾಟೆಯಲ್ಲಿ ಧೀಮಂತ ನಾಯಕ ಎನ್ನುವ ಬದಲು ದಿವಂಗತ ನಾಯಕ ಎಂದು ಹೇಳಿದಂತೆ ತಾರಾಗೆ ಉದಯೋನ್ಮುಖಿ ನಟಿ ಎಂದಿದ್ದರು ಅಷ್ಟೇ.

ತಾರಾಮಣಿದ 'ಲಿಫ್ಟ್'!



ಹಾಗೆ ನೋಡಿದರೆ ಬಾಲ್ಟಿಮೋರಿನಲ್ಲಿ ನಡೆದ ನಾಲ್ಕನೇ ಸಮ್ಮೇಳನದಲ್ಲಿ ತಾರಾರನ್ನು ಹ್ಯಾಟ್ರಿಕ್ ನಾಯಕಿ ಎಂದು ಕರೆಯಬಹುದಿತ್ತು. ಯಾಕೆಂದರೆ ಈಕೆ ನಟಿಸಿದ 'ಸೈನೈಡ್', 'ಹಸೀನಾ' ಮತ್ತು 'ಕಾನೂರು ಹೆಗ್ಗಡತಿ' ಈ ಮೂರೂ ಚಿತ್ರಗಳು ಸಮ್ಮೇಳನದಲ್ಲಿ ಪ್ರದರ್ಶನಗೊಂಡವು. ಹೀಗಾಗಿ ಒಂದು ರೀತಿಯಲ್ಲಿ ಸಮ್ಮೇಳನ ತಾರಾಮಯವಾಗಿತ್ತು.

'ಕಾನೂರು ಹೆಗ್ಗಡತಿ'ಗೆ ನೀರಸ ಪ್ರತಿಕ್ರಿಯೆ ದೊರಕಿತು. 'ಹಸೀನಾ' ಬಗ್ಗೆ ಕುತೂಹಲವಿತ್ತು. ಅಲ್ಲಿನ ಕನ್ನಡಿಗರು ನಿಜವಾಗಿಯೂ ಅತ್ಯಂತ ಶ್ರದ್ಧೆಯಿಂದ ನೋಡಿದ ಚಿತ್ರ ರಮೇಶ್ ನಿರ್ದೇಶನದ 'ಸೈನೈಡ್'. ಆದರೆ ತಾಂತ್ರಿಕ ಕಾರಣಗಳಿಂದ ಚಿತ್ರ ಪ್ರದರ್ಶನ ತಡವಾದಾಗ ತಾರಾ ಜೊತೆ ಸಂವಾದ ಕಾರ್ಯಕ್ರಮ ಶುರುವಾಯಿತು. ಕನ್ನಡ ಚಿತ್ರಗಳು ಪರಭಾಷೆಯ ಚಿತ್ರಗಳಷ್ಟೇ ಶ್ರೀಮಂತವಾಗಿರುವುದಿಲ್ಲ ಯಾಕೆ? ಯಾಕೆ ರಿಮೇಕ್ ಚಿತ್ರಗಳನ್ನೇ ಕನ್ನಡದವರು ಮಾಡುತ್ತಾರೆ? ಬೆಂಗಳೂರು ಸಿಲಿಕಾನ್ ಸಿಟಿಯಾದರೂ ಸಿನಿಮಾದವರು ಮಾತ್ರ ತಾಂತ್ರಿಕವಾಗಿ ಯಾಕೆ ಹಿಂದುಳಿದಿದ್ದಾರೆ? ಹೀಗೆ ಪ್ರಶ್ನೆಗಳ ಸುರಿಮಳೆಯಾಯಿತು.

ಇದಕ್ಕೆಲ್ಲಾ ತಾರಾ ಫಿಲ್ಮ್ ಛೇಂಬರ್ ಅಧ್ಯಕ್ಷರ ಮಾದರಿಯಲ್ಲಿ "ಬೆಂಗಳೂರಿನಲ್ಲಿ ಹಲವಾರು ಭಾಷೆಯ ಜನ ಇದ್ದಾರೆ. ಹಲವಾರು ಚಿತ್ರಗಳು ಓಡುತ್ತವೆ...." ಹೀಗೆ ಏನೇನೋ ಉತ್ತರ ನೀಡುತ್ತಿದ್ದರು. ಒಂದು ರೀತಿಯಲ್ಲಿ ಛೇಂಬರ್ ಅಧ್ಯಕ್ಷ ಗಂಗರಾಜು ಪರಕಾಯ ಪ್ರವೇಶ ಮಾಡಿದ್ದರೋ ಏನೋ ಎಂಬ ರೀತಿಯಲ್ಲಿ ತಾರಾ ಕನ್ನಡ ಚಿತ್ರರಂಗವನ್ನು ಡಿಫೆಂಡ್ ಮಾಡುತ್ತಾ ಸಾಗಿದ್ದರು. ಕೊನೆಗೆ "ಕನ್ನಡ ಚಿತ್ರರಂಗ ತಾಂತ್ರಿಕವಾಗಿ ಹಿಂದುಳಿದಿದೆ ಎಂಬ ಮಾತನ್ನು 'ಸೈನೆಡ್' ಚಿತ್ರ ನೋಡಿದ ನಂತರ ನೀವು ಹಿಂತೆಗೆದುಕೊಳ್ಳುತ್ತೀರಿ" ಎಂದು ತಾರಾ ಹೇಳಿದರು. ಆಕೆ ಹೇಳಿದಂತೆ 'ಸೈನೈಡ್'ನ ತಾಂತ್ರಿಕತೆಯನ್ನು ಎಲ್ಲರೂ ಮನಸಾರೆ ಹೊಗಳಿದರು. ಆದರೆ ಪಾಪ ಅಮೆರಿಕನ್ನಡಿಗರಿಗೆ ಏನು ಗೊತ್ತು? 'ಸೈನೈಡ್' ಚಿತ್ರದ ತಂತ್ರಜ್ಞರೆಲ್ಲ ನೆರೆಯ ತಮಿಳುನಾಡಿನವರೆಂದು!

ಗುರುಕಿರಣ್ ಸಂಗೀತ ರಸಮಂಜರಿ ಕಾರ್ಯಕ್ರಮದಲ್ಲಿ ತಾರಾ ಹಾಡಿದ 'ಮೂಡಲ ಮನೆಯಾ... ಮುತ್ತಿನ... ' ಹಾಡು ಎಲ್ಲರ ಮನಸ್ಸನ್ನು ಗೆದ್ದಿತು. ಯಾಕೆಂದರೆ ಅಲ್ಲಿಯವರೆಗೆ ಗುರುಕಿರಣ್ ಅಬ್ಬರದ ಹಾಡುಗಳನ್ನು ಹೇಳುತ್ತಾ ಎಲ್ಲರೂ ಕುಣಿದಾಡುವಂತೆ ಮಾಡಿದ್ದರು. ತಾರಾ ಮೆಲೋಡಿಯಸ್ ಆಗಿ ಹಾಡಿದ್ದರಿಂದ ಹಳೇ ಕಾಲದವರಿಗೆಲ್ಲಾ ಖುಷಿಯಾಯಿತು. ಆಗ once more once more ಎಂದು ಕೂಗಾಡಿದರು. ಆದರೆ ತಾರಾ ವೇದಿಕೆಯಿಂದ ಕೆಳಗಿಳಿದು ಬಂದು "ನಾನು ಪ್ರಿಪೇರ್ ಆಗಿ ಬಂದಿದ್ದೇ ಒಂದೇ ಒಂದು ಹಾಡಿಗೆ. ಇನ್ನೊಂದು ಹಾಡು ಹೇಗೆ ಹೇಳಲಿ?" ಎಂದು ನಮ್ಮ ಕಿವಿಯಲ್ಲಿ ಪಿಸುಗುಟ್ಟಿದರು!

ಸಿನಿಮಾ ಪ್ರಶಸ್ತಿಗೆ ಕುಂಡಿ ತೋರಿಸೋದು!

ಇದೇನು ಮಜಾನೋ? ಪ್ರತಿಭಟನೆಯೊ? ಅಥವಾ ಇನ್ನೇನೋ....?



ಒಮ್ಮೆ ಆಸ್ಕರ್ ಅವಾರ್ಡ್ ಸ್ವೀಕರಿಸುವಾಗ ಮಾರ್ಲನ್ ಬ್ರಾಂಡೊ ಆಸ್ಕರ್ ಪ್ರಶಸ್ತಿ ಸುತ್ತಲಿನ ಪಾಲಿಟಿಕ್ಸ್‌ಗೆ ಹೇಗೆ ಪ್ರತಿಭಟಿಸಿದ್ದ ಗೊತ್ತೆ? ಪ್ರಶಸ್ತಿ ಸ್ವೀಕರಿಸಿ, ಕುಳಿತಿದ್ದ ಗಣ್ಯರು, ಪ್ರೇಕ್ಷಕರ ಕಡೆ ಬೆನ್ನು ಮಾಡಿ, ಪ್ಯಾಂಟನ್ನು ಮೊಳಕಾಲವರೆಗೆ ಇಳಿಸಿ ಕುಂಡಿ ತೋರಿಸಿ, ಅಲ್ಲಾಡಿಸಿಬಿಟ್ಟಿದ್ದ... ತಿಕ ತೋರ್ಸಿ ಹೋದ್ರು ಅಂದಂಗಾಯ್ತು...

ಇರಲಿ, ಈ ವಿಷಯಕ್ಕೆ ಆಮೇಲೆ ಬರೋಣ....

ಈ ಅವಾರ್ಡು, ಅವಾರ್ಡು ಕಮಿಟಿ, ಅವಾರ್ಡು ಟೈಪು ಕುರಿತು ಬರೆಯುತ್ತಾ ಹೋದರೆ ಅದೇ ಒಂದು ಸ್ಕ್ರಿಪ್ಟ್ ಆದೀತು... ಅದಕ್ಕೂ ಪ್ರಶಸ್ತಿ ಬಂದೀತು.... ಈ ಸಲದ ಅವಾರ್ಡು ಘೋಷಣೆ ಆಗಿವೆ. 'ನಾಯಿ ನೆರಳು' ಚಿತ್ರಕ್ಕೆ ಪ್ರಶಸ್ತಿ ಲಭಿಸಿದೆ. ಕಾಸರವಳ್ಳಿ ಇದ್ದಾಗ ಮತ್ತಾರಿಗೆ ಕೊಡಲಾಗುತ್ತೆ ಹೇಳಿ? ಕನ್ನಡದಲ್ಲಿ ಕಾರಂತ, ಕಾರ್ನಾಡ್, ಕಾಸರವಳ್ಳಿಗಳ ಹಾವಳಿಯನ್ನು ಕಾಕಾಲೋಕ ಎನ್ನಬಹುದೆ? ಅದಕ್ಕೇ ಕವಿತಾ ಲಂಕೇಶ್ ಸೇರಿದರೆ 'ಕ ಕಾ ಕಿ ಕೀ' ಆಗಿಬಿಡುತ್ತಲ್ವಾ? 'ನನ್ನ ಹೆಂಡ್ತಿ ಅವಾರ್ಡುಗಳನ್ನೆಲ್ಲ ಮೂಟೆ ಕಟ್ಟಿ ಮೂಲೇಲಿ ಇಟ್ಟಿದ್ದಾಳೆ' ಎನ್ನುತ್ತಾರೆ ನಾಗತಿಹಳ್ಳಿ. ಈ ಅವಾರ್ಡುಗಳ ಬಗ್ಗೆ ಇಷ್ಟು ತಾತ್ಸಾರ ಇದ್ದರೆ, ಅವಾರ್ಡನ್ನಾದರೂ ಏಕೆ ಸ್ವೀಕರಿಸುತ್ತಾರೆ? ಅವಾರ್ಡಿಗೆ ಯಾಕೆ apply ಮಾಡ್ತಾರೆ?



'ಮಠ' ಚಿತ್ರದಲ್ಲಿನ ನಾಯಕನ ಪಾತ್ರಾಭಿನಯಕ್ಕೆ ಜಗ್ಗೇಶ್‌ಗೆ ಅತ್ಯುತ್ತಮ ಪೋಷಕ ನಟ ಪ್ರಶಸ್ತಿ ಸಿಕ್ಕಿ ಬಿಡೋದೆ?

'ಜೋಗಿ' ಚಿತ್ರದಲ್ಲಿನ ಅಭಿನಯಕ್ಕಾಗಿ ಶಿವರಾಜ್‌ಕುಮಾರ್‌ಗೆ ಅತ್ಯುತ್ತಮ ನಾಯಕ ನಟ ಪ್ರಶಸ್ತಿ ಸಿಕ್ಕಿರುವುದು ಅವರ ಪ್ರತಿಭೆಗೆ ಸಂದ ಮನ್ನಣೆ ಆಗಿದೆ. ಆದರೆ ಆ ಚಿತ್ರದ ಪಾತ್ರ ಒಂದು ರೀತಿ ಆ್ಯಂಟಿ ಹೀರೋ ಅಲ್ಲವೆ? ಆ್ಯಂಟಿ ಹೀರೋಗೆ ಬೆಸ್ಟ್ ಹೀರೋ ಅವಾರ್ಡೆ? ಇದು ಬರೀ ಕನ್ನಡ ಚಿತ್ರರಂಗದ ಮಾತಲ್ಲ....ಬಾಲಿವುಡ್ ಸೇರಿದಂತೆ ಉಳಿದೆಲ್ಲ ಚಿತ್ರರಂಗಗಳಲ್ಲೂ ಬೆಸ್ಟ್ ಹೀರೋ, ಬೆಸ್ಟ್ ಹೀರೋಯಿನ್ ಎಂದು ಆ ಕಾಲದಿಂದಲೂ ಪ್ರಶಸ್ತಿ ನೀಡುತ್ತ ಬರಲಾಗಿದೆ. ಹಿಂದೆ ಇದೆಲ್ಲ ಓಕೆ.... ಈಗ ಚಿತ್ರಕತೆಗಳ ಸ್ವರೂಪವೇ ಬದಲಾಗಿದೆ. ಬಹುತೇಕ ಚಿತ್ರಗಳಲ್ಲಿ ನಾಯಕ 'ವಿಲನ್' ತರಹ ಇರುತ್ತಾನೆ ಅಥವಾ ಆತ ಚಿತ್ರರಂಗದವರ ಪ್ರಕಾರ ಆ್ಯಂಟಿ ಹೀರೋ! ಆ್ಯಂಟಿ ಹೀರೋಗೆ ಬೆಸ್ಟ್ ಹೀರೋ ಅವಾರ್ಡು ಕೊಡುವುದು ಚೆನ್ನಾಗಿರುತ್ತಾ? ಹಿಂದೇನೋ 'ಬಂಗಾರದ ಮನುಷ್ಯ'ದಂತಹ ಚಿತ್ರಗಳಲ್ಲಿ ಹೀರೋ ಹೀರೋನೇ ಆಗಿರುತ್ತಿದ್ದ...ಆಗಿನದು ಬೇರೆ ಮಾತು! ಚಲನಚಿತ್ರಗಳ ಸ್ವರೂಪ ಬದಲಾದಂತೆ ಅವಾರ್ಡುಗಳ ಸ್ವರೂಪವೂ ಬದಲಾಗಬೇಕಲ್ಲವೆ?



ಇತ್ತೀಚೆಗೆ ಎಂ.ಎಸ್. ಸತ್ಯು ಬರೆದದ್ದು ನೆನಪಾಗುತ್ತಿದೆ. ಬೆಸ್ಟ್ ಹೀರೋ, ಬೆಸ್ಟ್ ಹೀರೋಯಿನ್ ಎಂದು ಅವಾರ್ಡು ಕೊಡುವ ಪರಿಪಾಠ ಬಿಡಬೇಕು. ಹೀರೋ ಪಾತ್ರ, ಪೋಷಕ ಪಾತ್ರ, ವಿಲನ್ ಪಾತ್ರ, ಹೀರೋಯಿನ್ ಪಾತ್ರ, ಕಾಮಿಡಿ ಪಾತ್ರ- ಈ ಎಲ್ಲವನ್ನೂ ಬರೀ ನಟ/ನಟಿ ಆಗಿ ನೋಡಬೇಕು. ಅಲ್ಲಿ ಆಕ್ಟಿಂಗ್ ಎಬಿಲಿಟಿ ಮುಖ್ಯ..... ಅದಕ್ಕೇ ಬೆಸ್ಟ್ ಆಕ್ಟರ್ ನಂ. 1, ನಂ. 2, ಬೆಸ್ಟ್ ಆಕ್ಟ್ರೆಸ್ ನಂ 1, ನಂ. 2... ಹೀಗೆ ಪ್ರಶಸ್ತಿ ನೀಡಬೇಕು ಎಂದು ಸತ್ಯು ಅಭಿಪ್ರಾಯಪಟ್ಟಿದ್ದು ಅರ್ಥಪೂರ್ಣವಾಗಿದೆಯಲ್ಲವೆ?

ಈ ಸಲ ಡಬ್ಬಿಂಗ್ ಕಲಾವಿದರಿಗೂ ಪ್ರಶಸ್ತಿ ನೀಡುತ್ತಿರುವುದು ಓಕೆ.... ಆದರೆ ಡಬ್ಬಿಂಗ್ ಸಹಾಯ ಪಡೆದ ರಮ್ಯಾಗೆ ಆ ಕಾರಣಕ್ಕೇ ಪ್ರಶಸ್ತಿ ಇಲ್ವಂತೆ...... ಏನು ಗೊಂದಲ? ಒಬ್ಬ ಕಲಾವಿದ ತಾನೇ ಧ್ವನಿ ನೀಡಿದಾಗ ಪರಿಪೂರ್ಣತೆ ಬರುತ್ತದೆ ಎನ್ನುವುದು ಸತ್ಯವೇ.... ಆದರೆ ಡಬ್ಬಿಂಗ್ ಮಾಡಿದವರಿಗೆ ಅವಾರ್ಡು ನೀಡುವಾಗ, ಆ ಡಬ್ಬಿಂಗ್ ಸಹಾಯ ಪಡೆದವರಿಗೇಕಿಲ್ಲ ಅವಾರ್ಡು ಎಂಬ ಪ್ರಶ್ನೆ ಏಳುವ ಸಾಧ್ಯತೆ ಇದೆ.

ಅತ್ಯುತ್ತಮ ಸಂಗೀತ ಪ್ರಶಸ್ತಿ ನೀಡುವಾಗ ಹೆಚ್ಚಾಗಿ ಹಾಡುಗಳ ಸಂಗೀತದ ಮೇಲೆಯೇ ಪ್ರಶಸ್ತಿ ನಿರ್ಧರಿಸಿ ಬಿಡುತ್ತಾರೆ; ಹಿನ್ನೆಲೆ ಸಂಗೀತವನ್ನು ನೆಗ್ಲೆಕ್ಟ್ ಮಾಡಿ!

ಹಾಗೆಯೇ ಕನ್ನಡದಲ್ಲಿ ಬೆಸ್ಟ್ ಕೊರಿಯೊಗ್ರಾಫರ್ ಅವಾರ್ಡ್ ಇಲ್ಲ.... ಒಂದು ಹಾಡು ಸಂಪದ್ಭರಿತವಾಗಲು ಕೊರಿಯೊಗ್ರಾಫರ್ ಸಹ ಕಷ್ಟಪಟ್ಟಿರುತ್ತಾರೆ.

ಎಲ್ಲಾ ಕಡೆ ಪ್ರಶಸ್ತಿಗಳ ಗೊಂದಲ ಇದ್ದೇ ಇದೆ. ಅಮೀರ್‌ಖಾನ್ ಈ ಫಿಲ್ಮ್‌ಫೇರ್ ಅವಾರ್ಡುಗಳೇ ಬೇಡ ಎಂದುಬಿಟ್ಟಿದ್ದಾನೆ. ಫಿಲ್ಮ್‌ಫೇರ್ ಪತ್ರಿಕೆಗಳನ್ನು ಸಿನಿಮಾದವರೇ ಖರೀದಿಸಿ ಫಾರ್ಮು ತುಂಬಿ ತಮ್ಮ ಚಿತ್ರ ಬೆಸ್ಟ್ ಎಂದು ಕಳಿಸುತ್ತಾರೆ. ಇದರಿಂದ ಆ ಪತ್ರಿಕೆಗೇ ಲಾಭ!

ನಾಯಕನಟನ ಪಾತ್ರಕ್ಕೆ ಪೋಷಕ ನಟ ಪ್ರಶಸ್ತಿ ಏಕೆ ಎಂದು ಜಗ್ಗೇಶ್ ತಿರಸ್ಕರಿಸಿದ್ದಾರೆ. ನಾವೆಲ್ಲ ಪ್ರೀತಿಸುವ ಡಾ. ರಾಜ್‌ಗೆ ಅಭಿನಯಕ್ಕಾಗಿ ರಾಷ್ಟ್ರ ಪ್ರಶಸ್ತಿ ಬರಲೇ ಇಲ್ಲ... ಅವರಿಗೆ ರಾಷ್ಟ್ರ ಪ್ರಶಸ್ತಿ ಬಂದಿದ್ದು ಹಿನ್ನೆಲೆ ಗಾಯನಕ್ಕಾಗಿ! ಆದರೆ ಅವರು ಆ ಪ್ರಶಸ್ತಿಯನ್ನು ಪ್ರೀತಿಯಿಂದಲೇ ಸ್ವೀಕರಿಸಿದ್ದರು...

ಈಗ ಜಗ್ಗೇಶ್ ಪ್ರಶಸ್ತಿ ತಿರಸ್ಕರಿಸುವುದರ ಬದಲು ಬ್ರಾಂಡೊ ಶೈಲಿಗೆ ಮರಳಬೇಕಿದೆ-ಕುಂಡಿ ತೋರಿಸಲು ಅಲ್ಲ... ಬದಲಾಗಿ ಪಟ್ಟಾಪಟ್ಟಿ ಚಡ್ಡಿ ತೊಟ್ಟು, ಹೆಗಲಿಗೊಂದು ಟವೆಲ್ ಹಾಕಿ 'ಕಳ್ಳೆಕಾಯಿ ಕಳ್ಳೆಕಾಯಿ' ಎನ್ನುತ್ತಾ ವೇದಿಕೆ ಏರಿ ಪ್ರಶಸ್ತಿ ಪಡೆಯುವುದು... ಪ್ರಶಸ್ತಿ ಪತ್ರವನ್ನು ಕಳ್ಳೆಕಾಯಿ ಬುಟ್ಟಿಯಲ್ಲಿ ಹಾಕಿಕೊಂಡು ಬಂದುಬಿಡುವುದು.. ಅತ್ಯುತ್ತಮ ಪೋಷಕ ನಟ ಪ್ರಶಸ್ತಿ ಕೊಟ್ಟವರಿಗೆ ಸರಿಯಾಗಿ ಇಕ್ಕಿದಂತಾಗುತ್ತದೆ ಅಲ್ಲವೆ?

-ಮಲ್ಲಿ

PRINTER, PUBLISHER, PROPRIETOR AND EDITOR : GAURI LANKESH, No. 9, 1st Floor, E.A.T.Street, Basavanagudi, Bangalore -4, Phone : 26676
Fax : 26620026, E-mail :lankesh70@rediffmail.com, Printed at Rajhans Enterprises, # 134, 4th Main, Industrial Estate...